ಸಂಪುಟ: 10 ಸಂಚಿಕೆ: 320 ಪುಟಗಳು: 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೊಹ್ಲಿ 52ನೇ ಶತಕ: ಭಾರತಕ್ಕೆ ಗೆಲುವು

ರಾಂಚಿಯಲ್ಲಿ ಭಾನುವಾರ ನಡೆದ ದ.ಆಫ್ರಿಕಾ ವಿರುದ್ಧದ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡದ ಮಾಜಿ ನಾಯಕ ವಿರಾಟ್ ಕೊಹ್ಲಿ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು. 120 ಎಸೆತಗಳಲ್ಲಿ 135 ರನ್ ಗಳಿಸಿ ಪಂದ್ಯದ ತಮ್ಮ ಬ್ಯಾಟಿಂಗ್‌ನಲ್ಲಿ ಹಲವು ದಾಖಲೆಗಳಿಗೆ ಭಾಜನರಾಗಿ ಟೀಮ್ ಇಂಡಿಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೊಂಪಾದ ಪುಟಗಳು



ರಾಹುಲ್ ಗಾಂಧಿಯವರಿಗೆ ಒಪ್ಪಂದದ ಕತೆ ಬೇಕಿಲ್ಲ

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಇನ್ನು ನೀರು ಬಳಸದೇ ಇದನ್ನು ಮಾಡಬಹುದು...

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನಾವು ಹೇಳಿದ ಸಂಗತಿಯೇ ಸರಿ ಎಂದು ವಾದ ಮಾಡುವುದಕ್ಕಿಂತ, ಸುಮ್ಮನಿರುವುದು ಅಥವಾ ಬೇರೆಯವರ ವಾದವನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ನೀವು ವಾದದಲ್ಲಿ ಸೋತರೂ ನಿಮಗೆ ಏನೂ ಆಗುವುದಿಲ್ಲ. ಗೆದ್ದರೆ ಕೆಲವೊಮ್ಮೆ ಸ್ನೇಹಿತರನ್ನು ಕಳೆದುಕೊಳ್ಳಬೇಕಾಗುತ್ತದೆ.

ವಕ್ರತುಂಡೋಕ್ತಿ

'ನಗುವೇ ದಿವ್ಯ ಔಷಧ' ಎಂದು ಭಾವಿಸುವುದರಲ್ಲಿ ತಪ್ಪೇನಿಲ್ಲ. ಆದರೂ ನಮಗೆ ಅನಾರೋಗ್ಯವಾದಾಗ ವೈದ್ಯರನ್ನು ಸಂಪರ್ಕಿಸಬೇಕು.

ಡಿ.19ರವರೆಗೆ ಚಳಿಗಾಲದ ಅಧಿವೇಶನ, ಕಲಾಪ 15 ದಿನ ಮಾತ್ರ
ಕೇಂದ್ರ ಸರಕಾರದ ವಿರುದ್ಧ ಮುಗಿಬೀಳಲು ಪ್ರತಿಪಕ್ಷಗಳು ಸಜ್ಜು
ಇಂದಿನಿಂದ ಸಂಸತ್ ಅಧಿವೇಶನ

ದೆಹಲಿ: ಸೋಮವಾರದಿಂದ ದೆಹಲಿಯಲ್ಲಿ ಚಳಿಗಾಲದ ಸಂಸತ್ ಅಧಿವೇಶನ ಆರಂಭವಾಗಲಿದ್ದು, ಡಿ.19ರ ತನಕ ಮುಂದುವರಿಯಲಿದೆ. ಈ ಹಿನ್ನೆಲೆಯಲ್ಲಿ ಭಾನುವಾರ ಸರ್ವಪಕ್ಷಗಳ ಸಭೆಯನ್ನು ಕೇಂದ್ರ ಸರಕಾರ ಆಯೋಜಿಸಿತ್ತು. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಕಾನೂನು ಸಚಿವ ಅರ್ಜುನ್ ಮೇಘ್ವಾಲ್, ರಾಜ್ಯಸಭಾ ನಾಯಕ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಸಭೆ ನಡೆಯಿತು. ಎಂದಿನಂತೆ ಈ ಬಾರಿಯೂ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ಚಕಮಕಿ ನಡೆಯುವ ಅಂದಾಜಿದೆ.

ಸರ್ವಪಕ್ಷಗಳ ಸಭೆಯಲ್ಲಿ ಪ್ರತಿಪಕ್ಷಗಳು ವಿಶೇಷ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್), ದೆಹಲಿ ಸ್ಫೋಟ, ರಾಷ್ಟ್ರೀಯ ಭದ್ರತೆ, ವಿದೇಶಿ ಆರ್ಥಿಕ ನೀತಿ, ವಾಯುಮಾಲಿನ್ಯ, ರೈತರು, ದಿನಗೂಲಿ ನೌಕರರಿಗೆ ಸೂಕ್ತ ಹಣ ಸಿಗದೇ ಇರುವುದು, ಪ್ರವಾಹ, ಭೂಕುಸಿತದಂತಹ ವಿಚಾರಗಳನ್ನು ಚರ್ಚಿಸಬೇಕೆಂದು ಪ್ರತಿಪಕ್ಷಗಳು ಆಗ್ರಹಿಸಿವೆ.

ಪ್ರತಿಪಕ್ಷಗಳ ಪಟ್ಟೇನು?: ಮುಖ್ಯವಾಗಿ ಎಸ್‌ಐಆರ್ ಬಗ್ಗೆ ಪ್ರತಿಪಕ್ಷಗಳು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ. 12 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇಂದ್ರ ಚುನಾವಣಾ ಆಯೋಗ ಏಕಪಕ್ಷೀಯವಾಗಿ ಮತಪಟ್ಟಿ ಪರಿಷ್ಕರಣೆ ನಡೆಸುತ್ತಿದೆ. ಪ.ಬಂಗಾಳದಲ್ಲಿ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿದ್ದು ಇಲ್ಲಿ ಚರ್ಚೆಗೊಳಗಾಗಲಿವೆ. → 4

ಚಳಿಗಾಲದ ಅಧಿವೇಶನಕ್ಕೂ ಮುನ್ನಾದಿನ ರಚನಾತ್ಮಕ ಸಭೆಯನ್ನು ನಡೆಸಲಾಯಿತು. ಎಲ್ಲ ಪಕ್ಷಗಳ ನಾಯಕರೂ ತಂತಮ್ಮ ಅಭಿಪ್ರಾಯ ಹೇಳಿದ್ದಾರೆ. ಸಂಸತ್ ಅಧಿವೇಶನ ನಡೆಯಲಿಕ್ಕೆ ಬಿಡುವುದಿಲ್ಲ ಎಂದು ಯಾರೂ ಹೇಳಿಲ್ಲ. ಕೆಲವರು ಮತಪಟ್ಟಿ ಪರಿಷ್ಕರಣೆ ವಿಚಾರದಲ್ಲಿ ತಾವು ಕೂಗೆಬ್ಬಿಸುತ್ತೇವೆಂದು ಹೇಳಿದ್ದಾರೆ. ನಾವು ಪ್ರತಿಪಕ್ಷಗಳ ಅಭಿಪ್ರಾಯವನ್ನು ಕೇಳಲು ಸಿದ್ಧರಿದ್ದೇವೆ.

-ಕಿರಣ್ ರಿಜಿಜು, ಸಂಸದೀಯ ವ್ಯವಹಾರಗಳ ಸಚಿವ

ಈ ಬಾರಿ ಚಳಿಗಾಲದ ಅಧಿವೇಶನ ಬರೀ 15 ದಿನಗಳ ಕಾಲ ನಡೆಯಲಿದೆ. ಇದು ಇತಿಹಾಸದಲ್ಲೇ ಕನಿಷ್ಠ ದಿನಗಳ ಅಧಿವೇಶನವಾಗುವ ಸಾಧ್ಯತೆಯಿದೆ. ಸಂಸತ್ ಅಧಿವೇಶನ ಕರೆಯುವುದರಲ್ಲೂ ತಡವಾಗಿದೆ. ಸ್ವತಃ ಸರಕಾರವೇ ಅಧಿವೇಶನವನ್ನು ಹಳಿತಪ್ಪಿಸುವ ಉದ್ದೇಶ ಹೊಂದಿದಂತಿದೆ. ನಾವು ದೇಶದ ಸುರಕ್ಷಾ ಸಂಗತಿಗಳನ್ನು ತರಾಟೆಗೆ ತೆಗೆದುಕೊಳ್ಳಲು ನಿರ್ಧರಿಸಿದ್ದೇವೆ.

-ಗೌರವ್ ಗೊಗೊಯಿ, ಕಾಂಗ್ರೆಸ್ ನಾಯಕ

ಪ್ರತಿಪಕ್ಷಗಳ ಅಸ್ತ್ರಗಳೇನು?

- ಏಕಪಕ್ಷೀಯವಾಗಿ ಕೇಂದ್ರ ಚುನಾವಣಾ ಆಯೋಗದಿಂದ ಮತಪಟ್ಟಿ ಪರಿಷ್ಕರಣೆ
- ದೆಹಲಿಯಲ್ಲಿ ನಡೆದ ನ.10ರ ಬಾಂಬ್ ಸ್ಫೋಟ ಭದ್ರತಾ ವೈಫಲ್ಯ
- ಅಮೆರಿಕ ತೆರಿಗೆ ಹೆಚ್ಚಿಸಿದ್ದನ್ನು ತಡೆಯಲು ಕೇಂದ್ರ ವಿಫಲ
- ದೇಶಾದ್ಯಂತ ವಾಯುಮಾಲಿನ್ಯ ಹೆಚ್ಚಳ, ಕೈಕೊಟ್ಟ ಆರೋಗ್ಯ

ಅತಿ ಕಿರು ಅಧಿವೇಶನ

ಈ ಬಾರಿಯ ಚಳಿಗಾಲದ ಅಧಿವೇಶನ ಲೆಕ್ಕಕ್ಕೆ 19 ದಿನಗಳಾದರೂ ನಡೆಯುವುದು 15 ದಿನ ಮಾತ್ರ. ಇದು ಇತ್ತೀಚೆಗಿನ ಕನಿಷ್ಠ ಅವಧಿಯ ಚಳಿಗಾಲದ ಅಧಿವೇಶನ.

14 ಮಸೂದೆ ಮಂಡನೆ

ಈ ಬಾರಿ 14 ಮಸೂದೆಗಳು ಮಂಡನೆಯಾಗಲಿವೆ. ಅಣುಶಕ್ತಿಯಲ್ಲಿ ಖಾಸಗಿ ಸಹಭಾಗಿತ್ವ, ವಿವಿಗಳಿಗೆ ಸ್ವಾಯತ್ತತೆ ನೀಡುವ ಉನ್ನತ ಶಿಕ್ಷಣ ಮಸೂದೆ ಸೇರಿದೆ.

10 ದಿನಗಳಲ್ಲಿ ಕಲಾಪ ನಡೆಯುವುದು 9 ದಿನ
20ಕ್ಕೂ ಅಧಿಕ ವಿಧೇಯಕ ಮಂಡನೆ ನಿರೀಕ್ಷೆ
ಬೆಳಗಾವಿ ಅಧಿವೇಶನಕ್ಕೆ ಮಸೂದೆಗಳ ಭಾರ

ಬೆಂಗಳೂರು: ರಾಜ್ಯ ಸರಕಾರದ ಹಲವು ಗೊಂದಲಗಳ ಹೊರತಾಗಿಯೂ, ಮುಂದಿನ ವಾರದಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ಆರಂಭವಾಗುತ್ತಿದೆ. 10 ದಿನಗಳ ಅಧಿವೇಶನದಲ್ಲಿ ಹತ್ತಾರು ವಿಧೇಯಕಗಳು ಬರುವ ನಿರೀಕ್ಷೆಯಿದ್ದು, ಈ ಬಾರಿ ಮಸೂದೆಗಳ ಭಾರ ಹೆಚ್ಚಾಗಲಿದೆಯೇ ಎನ್ನುವ ಅನುಮಾನ ಎಲ್ಲರಲ್ಲಿದೆ.

ಡಿ.8ರಿಂದ 19ರವರೆಗೆ ಅಧಿವೇಶನ ನಡೆದರೂ 10 ದಿನಗಳ ಕಾಲ ಮಾತ್ರ ಕಲಾಪಕ್ಕೆ ಅವಕಾಶವಿದೆ. ಇದರಲ್ಲಿ ಮೊದಲ ದಿನ ಸಂತಾಪ ಸೂಚನೆ ನಿರ್ಣಯ ಮಂಡಿಸಿ ಮುಂದೂಡಲಾಗುತ್ತದೆ. ಹೀಗಿರುವಾಗ ಇರುವ ಒಂಬತ್ತು ದಿನದಲ್ಲಿ 20ಕ್ಕೂ ಹೆಚ್ಚು ವಿಧೇಯಕಗಳನ್ನು ಅನುಮೋದಿಸುವ ಸಾಧ್ಯತೆಯಿದೆ. ಆದ್ದರಿಂದ ಒಂಬತ್ತು ದಿನದ ಕಲಾಪದಲ್ಲಿ ಬಿಲ್‌ಗಳ ಭಾರವೇ ಜಾಸ್ತಿಯಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಮೂಲಗಳ ಪ್ರಕಾರ ಸದ್ಯ ಸರಕಾರದಲ್ಲಿ 35 ವಿಧೇಯಕಗಳು ಬಾಕಿಯಿವೆ. ಅದರಲ್ಲಿ ಎರಡು ವಿಧೇಯಕಗಳು ಪರಿಶೀಲನಾ ಸಮಿತಿಯ ಮುಂದಿದ್ದರೆ, ಮೂರು ವಿಧೇಯಕಗಳು ಗೃಹ ಸಚಿವರು ಹಾಗೂ ಕಾನೂನು ಸಚಿವರ ಕಚೇರಿಯಲ್ಲಿದೆ. ಏಳು ವಿಧೇಯಕಗಳು ಕಾನೂನು ಮತ್ತು ಸಂಸದೀಯ ಇಲಾಖೆಯ ಪರಿಶೀಲನಾ ಹಂತದಲ್ಲಿದೆ. ಆದರೆ ಈಗಾಗಲೇ ಎರಡು ವಿಧೇಯಕಗಳು ಸಚಿವ ಸಂಪುಟದಿಂದ ಅನುಮೋದನೆಯಾಗಿದ್ದು, 13 ವಿಧೇಯಕಗಳು ಪರಿಶೀಲನಾ ಸಮಿತಿಯಿಂದ ಅನುಮೋದನೆಯಾಗಿ ಸಚಿವ ಸಂಪುಟದ ಮುಂದಿದೆ. ಡಿ.4ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಇನ್ನಷ್ಟು ವಿಧೇಯಕಗಳಿಗೆ ಅನುಮೋದನೆ ನೀಡುವ ಸಾಧ್ಯತೆಯಿದೆ. → 4

ಮಂಡನೆಗೆ ಸಿದ್ಧವಾಗಿರುವ ವಿಧೇಯಕಗಳು

- ಸುಳ್ಳು ಸುದ್ದಿ ನಿಯಂತ್ರಣ ವಿಧೇಯಕ
- ದ್ವೇಷ ಭಾಷಣ ನಿಯಂತ್ರಣ ವಿಧೇಯಕ
- ರೋಹಿತ್ ವೇಮುಲ ವಿಧೇಯಕ
- ಕಾರ್ಮಿಕ ಕಲ್ಯಾಣಾಭಿವೃದ್ಧಿ ನಿಧಿ ವಿಧೇಯಕ
- ಬಾಡಿಗೆ (ತಿದ್ದುಪಡಿ) ವಿಧೇಯಕ
- ಬೃಹತ್ ಬೆಂಗಳೂರು (2ನೇ ತಿದ್ದುಪಡಿ) ವಿಧೇಯಕ
- ವಿವಿಧ ಪ್ರಾಧಿಕಾರಗಳ ಅಭಿವೃದ್ಧಿ ವಿಧೇಯಕ

350ಕ್ಕೂ ಅಧಿಕ ಕನ್ನಡ ಚಿತ್ರಗಳಲ್ಲಿ ನಟನೆ
ಹಾಸ್ಯಕ್ಕೆ ಹೆಸರುವಾಸಿ, ಗಣ್ಯರ ಕಂಬನಿ
ಹಿರಿಯ ನಟ ಉಮೇಶ್ ನಿಧನ

ಬೆಂಗಳೂರು: ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಕನ್ನಡದ ಹಿರಿಯ ನಟ ಎಂ.ಎಸ್. ಉಮೇಶ್ (80) ಅವರು ಭಾನುವಾರ ವಿಧಿವಶರಾಗಿದ್ದಾರೆ. ಬನಶಂಕರಿ ಚಿತಾಗಾರಾದಲ್ಲಿ ಭಾನುವಾರ ಸಂಜೆ ಅಂತ್ಯಕ್ರಿಯೆಗಳು ನೆರವೇರಿವೆ. ಕಳೆದ ತಿಂಗಳು ಮನೆಯಲ್ಲಿ ಕಾಲು ಜಾರಿ ಬಿದ್ದ ಕಾರಣ ಅವರನ್ನು ಕಿದ್ವಾಯಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಎಂಆರ್‌ಐ ಹಾಗೂ ಸಿಟಿ ಸ್ಕ್ಯಾನ್ ಮಾಡಿದ ಬಳಿಕ ಪಿತ್ತಜನಕಾಂಗದಲ್ಲಿ ದೊಡ್ಡ ಗಾತ್ರದ ಗಡ್ಡೆ ಇರುವುದು ಪತ್ತೆಯಾಗಿತ್ತು. ಲಿವರ್ ಕ್ಯಾನ್ಸರ್ ಆಗಿ ಅದು ಬೇರೆ ಬೇರೆ ಅಂಗಗಳಿಗೆ ಹರಡಿದೆ ಎಂಬುದು ತಿಳಿದುಬಂದಿತ್ತು. ಭಾನುವಾರ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. → 4

1945-2025

ಉಮೇಶ್ ನಿಧನದ ಸುದ್ದಿ ನೋವು ತಂದಿದೆ. ತಮ್ಮ ಅಭಿನಯದ ಮೂಲಕ ಪ್ರೇಕ್ಷಕರನ್ನು ನಗಿಸಿ, ದಶಕಗಳ ಕಾಲ ಕನ್ನಡಾಂಬೆಯ ಸೇವೆಗೈದ ಹಿರಿಯ ಜೀವಕ್ಕೆ ಭಾವಪೂರ್ಣ ವಿದಾಯ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಹಾಸ್ಯಮಯ ಪಾತ್ರಗಳಿಂದ ಜನಪ್ರಿಯರಾಗಿದ್ದ ಉಮೇಶ್ ನಿಧನದ ಸುದ್ದಿ ತಿಳಿದು ದುಃಖವಾಯಿತು. ಅವರ ಅಗಲಿಕೆಯಿಂದ ಚಿತ್ರರಂಗ ತನ್ನ ಒಬ್ಬ ಹಿರಿಯ ಕಲಾವಿದನನ್ನು ಕಳೆದುಕೊಂಡಿದೆ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮತಪಟ್ಟಿ: ಫೆ.14 ಗಡುವು

ದೆಹಲಿ: 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತಪಟ್ಟಿ ಪರಿಷ್ಕರಣೆಯನ್ನು (ಎಸ್‌ಐಆರ್) ಮುಗಿಸುವುದಕ್ಕೆ ಒಂದು ವಾರ ಗಡುವು ವಿಸ್ತರಿಸಲಾಗಿದೆ. ಅರ್ಥಾತ್ ಚುನಾವಣಾಧಿಕಾರಿಗಳು ಮತದಾರರ ಪರಿಷ್ಕೃತ ಅಂತಿಮ ಪಟ್ಟಿ ಪ್ರಕಟಿಸುವುದಕ್ಕೆ ಫೆ.14 ಅಂತಿಮ ಗಡುವಾಗಿದೆ. ಇದಕ್ಕೂ ಮುನ್ನ ಫೆ.7ರ ಗಡುವು ನೀಡಲಾಗಿತ್ತು. ಕರಡುಪಟ್ಟಿ ಪ್ರಕಟಿಸುವುದಕ್ಕೆ ಡಿ.9 ಅಂತಿಮ ದಿನವಾಗಿತ್ತು. ಈಗದನ್ನು ಡಿ.16ಕ್ಕೆ ಮುಂದೂಡಲಾಗಿದೆ.

37 ನಕ್ಸಲರು ಶರಣು

ದಾಂತೇವಾಡ (ಛತ್ತೀಸಗಢ): ಛತ್ತೀಸಗಢದ ದಾಂತೇವಾಡ ಜಿಲ್ಲೆಯಲ್ಲಿ 37 ನಕ್ಸಲರು ಅಧಿಕಾರಿಗಳ ಮುಂದೆ ಭಾನುವಾರ ಶರಣಾಗಿದ್ದಾರೆ. ಇವರಲ್ಲಿ 27 ಜನರ ಸುಳಿವು ನೀಡಿದವರಿಗೆ ಒಟ್ಟಾರೆ ₹65 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರಲು ಆರಂಭಿಸಿದ ಪುನರ್ವಸತಿ ಯೋಜನೆಯಡಿ 12 ಮಹಿಳೆಯರು ಸೇರಿದಂತೆ ನಕ್ಸಲರು ಹಿರಿಯ ಪೊಲೀಸ್ ಅಧಿಕಾರಿ ಮತ್ತು ಸಿಆರ್‌ಪಿಎಫ್ ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ.

ದಿತ್ವಾ ಚಂಡಮಾರುತ: ಬೆಂಗಳೂರಲ್ಲಿ ಉಷ್ಣಾಂಶ ಇಳಿಕೆ, ಏರಿದ ಚಳಿ
ಲಂಕಾದಲ್ಲಿ 334 ಸಾವು, ಬೆಂಗಳೂರು ಗಡಗಡ

ಬೆಂಗಳೂರು/ದೆಹಲಿ: ಶ್ರೀಲಂಕಾಕ್ಕೆ ದಿತ್ವಾ ಚಂಡಮಾರುತ ಅಪ್ಪಳಿಸಿದ ಪರಿಣಾಮ ಸಾವಿನ ಸಂಖ್ಯೆ 334 ಅನ್ನು ದಾಟಿದೆ. ಭೂಕುಸಿತ, ಪ್ರವಾಹ, ಭಾರೀ ಮಳೆಯಿಂದ ಜನರ ಸಾವು ಮುಂದುವರಿದಿದೆ. ಇಲ್ಲಿಯವರೆಗೆ 400 ಜನರು ನಾಪತ್ತೆಯಾದ ಸುದ್ದಿ ಲಭಿಸಿದೆ. ಕಡೆಗೂ ಮಳೆ ಕಡಿಮೆಯಾಗಿದ್ದರೂ, ಮಳೆಯಿಂದ ತಗ್ಗಿನ ಪ್ರದೇಶದಲ್ಲಿ ಭಾರೀ ಪ್ರವಾಹಸದೃಶ ಪರಿಸ್ಥಿತಿ ನಿರ್ಮಾಣವಾಗಿದೆ. 10 ಲಕ್ಷಕ್ಕೂ ಅಧಿಕ ಮಂದಿ ಅತಂತ್ರರಾಗಿದ್ದಾರೆ. ಸದ್ಯ ಆಪರೇಶನ್ ಸಾಗರಬಂಧು ಕಾರ್ಯಾಚರಣೆಯಡಿಯಲ್ಲಿ ಭಾರತ ಸರಕಾರ ವಿಮಾನಗಳ ಮೂಲಕ 400ಕ್ಕೂ ಅಧಿಕ ಭಾರತೀಯರನ್ನು ದೇಶಕ್ಕೆ ಮರಳಿ ತಂದಿದೆ. ಈಗಾಗಲೇ ದಿತ್ವಾ ಮಾರುತಗಳು ಪುದುಚೇರಿ, ತಮಿಳುನಾಡನ್ನು ಪ್ರವೇಶಿಸಿವೆ. ಮಾರುತದ ವೇಗ ತಗ್ಗಿದೆ.

ಇವೆಲ್ಲದರ ಪರಿಣಾಮ ಕರ್ನಾಟಕದಲ್ಲೂ ಆಗಿದೆ. ರಾಜ್ಯದ ಹಲವಾರು ಕಡೆಗಳಲ್ಲಿ ಮಳೆಯಾಗಿದೆ. ಈಗಾಗಲೇ ಚಳಿಯಲ್ಲಿ ನಡುಗುತ್ತಿರುವ ಬೆಂಗಳೂರಿನ ತಾಪಮಾನ ದಿತ್ವಾದಿಂದ ಇನ್ನೂ 4 ಡಿಗ್ರಿ ಕುಸಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕಳೆದೊಂದು ವಾರದಿಂದ ಚಳಿಯ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮಧ್ಯಾಹ್ನದ ವೇಳೆಯಲ್ಲಿಯೂ ತಣ್ಣನೆಯ ಗಾಳಿ ಕಂಡುಬರುತ್ತಿದೆ. ಜತೆಗೆ ಈ ಬಾರಿ ವ್ಯಾಪಕ ಮಳೆಯಾಗಿದ್ದು, ಹೆಚ್ಚು ಚಳಿ ಜನರನ್ನು ಕಾಡುವ ಆತಂಕ ಇದೆ. ಬೆಂಗಳೂರಿನಲ್ಲಿ 16 ಡಿಗ್ರಿ ಸೆಲ್ಸಿಯಸ್‌ಗೆ ಉಷ್ಣಾಂಶ ವಾತಾವರಣ ಕುಸಿದಿದೆ. ಇದು 12 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುವ ನಿರೀಕ್ಷೆಯಿದೆ.

ಉಡುಪಿ: ಟೆಂಪೋ ಉರುಳಿ ಐವರು ಸಾವು

ಉಡುಪಿ: ಕಾಪು ತಾಲೂಕು ಕೋತಲಕಟ್ಟೆ ಬಳಿ ಮಿನಿ ಟೆಂಪೋ ಪಲ್ಟಿಯಾಗಿ ಐವರು ಮೃತಪಟ್ಟ ಘಟನೆ ಭಾನುವಾರ ಸಂಜೆ ಸಂಭವಿಸಿದೆ. ಕಾಪುವಿನಿಂದ ಮಲ್ಪೆಗೆ ತೆರಳುತ್ತಿದ್ದ ಅಲಂಕರಣ ಸಾಮಗ್ರಿ ತುಂಬಿದ್ದ ಟೆಂಪೋವೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕದ ಮೇಲಿಂದ ಹಾರಿ ಸರ್ವೀಸ್ ರಸ್ತೆಗೆ ಹೊರಳಿದೆ. ಪರಿಣಾಮ ಟೆಂಪೋದಲ್ಲಿದ್ದ ಹೊರರಾಜ್ಯದ ಕಾರ್ಮಿಕರು ರಸ್ತೆಗೆ ಬಿದ್ದು, ಐವರು ಮೃತಪಟ್ಟಿರುತ್ತಾರೆ. ಇಬ್ಬರು ಸ್ಥಳದಲ್ಲೇ ಸಾವಿಗೀಡಾಗಿದ್ದು, ಮೂವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. 7 ಗಾಯಾಳುಗಳ ಪೈಕಿ ಒರ್ವನ ಸ್ಥಿತಿ ಗಂಭೀರವಾಗಿದೆ.

ಮೃತರನ್ನು ಪಶ್ಚಿಮ ಬಂಗಾಳ ಮೂಲದ ಕಮಲ್, ಸಾರಾಂಶ್, ಅಸ್ಸಾಂ ಮೂಲದ ಪಪ್ಪು ರವಿದಾಸ್, ಹರೀಶ್, ತ್ರಿಪುರಾ ಮೂಲದ ಗಪುನಾಥ್ ಎಂದು ಗುರುತಿಸಲಾಗಿದೆ. ಟೆಂಪೋ ಚಾಲಕ ರಂಜಿತ್ ಕುಮಾರ್, ಪ್ರಭಾಸ್ ರಾಯ್, ಸೂರಜ್, ಸುಬ್ರತ್, ಗಣೇಶ್, ಗೋಪಾಲ್ ಹಾಗೂ ಮತ್ತೋರ್ವ ಗಾಯಗೊಂಡಿದ್ದಾರೆ.

ನ್ಯಾಶನಲ್ ಹೆರಾಲ್ಡ್: ಸೋನಿಯಾ, ರಾಹುಲ್ ವಿರುದ್ಧ ಎಫ್‌ಐಆರ್

ದೆಹಲಿ: ಕಾಂಗ್ರೆಸ್‌ನ ವರಿಷ್ಠ ನಾಯಕಿ ಸೋನಿಯಾ ಗಾಂಧಿ ಮತ್ತು ಪುತ್ರ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ಹೊಸದಾಗಿ ಎಫ್‌ಐಆರ್ ದಾಖಲಿಸಿದೆ. 'ನ್ಯಾಷನಲ್ ಹೆರಾಲ್ಡ್' ಹಗರಣದಲ್ಲಿ ನಡೆದಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಈ ಬೆಳವಣಿಗೆಯಾಗಿದೆ. ದೆಹಲಿ ಪೊಲೀಸ್ ಇಲಾಖೆಯ 'ಆರ್ಥಿಕ ಅಪರಾಧಗಳ ವಿಭಾಗ' (ಇಒಡಬ್ಲ್ಯು) ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಎಫ್‌ಐಆರ್ ಪ್ರಕಾರ, ಕಾಂಗ್ರೆಸ್‌ಗೆ ಸಂಬಂಧಿಸಿದ ಕಂಪನಿ 'ಅಸೋಸಿಯೇಟೆಡ್ ಜರ್ನಲ್ಸ್ ಲಿ.'(ಎಜೆಎಲ್) ಅನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಕ್ರಿಮಿನಲ್ ಪಿತೂರಿ ನಡೆಸಿದ್ದಾರೆ ಎಂದು ಸೋನಿಯಾ, ರಾಹುಲ್ ವಿರುದ್ಧ ಆರೋಪಿಸಲಾಗಿದೆ.



ಫನ್‌ತರಂಗ
- ರಘುಪತಿ ಶೃಂಗೇರಿ -

'ಬ್ರೇಕ್‌ಫಾಸ್ಟ್' ನಂತರ ಸಿಎಂ, ಡಿಸಿಎಂ ಕದನ ವಿರಾಮ ಘೋಷಣೆ

ಕಾರವಾರದ ಯುದ್ಧನೌಕೆ ಸಂಗ್ರಹಾಲಯಕ್ಕೂ ಮನ್ ಕೀ ಬಾತ್‌ನಲ್ಲಿ ಪ್ರಧಾನಿ ಪ್ರಶಂಸೆ
ತುಮಕೂರು, ಪುತ್ತೂರು ಜೇನಿಗೆ ಮೋದಿ ಮೆಚ್ಚುಗೆ

ದೆಹಲಿ: ಭಾನುವಾರ ಆಕಾಶವಾಣಿಯಲ್ಲಿ ಪ್ರಸಾರವಾದ ಪ್ರಧಾನಿ ನರೇಂದ್ರ ಮೋದಿ ಮನ್ ಕೀ ಬಾತ್‌ನಲ್ಲಿ, ಉತ್ತರಕನ್ನಡ ಜಿಲ್ಲೆಯ ಕಾರವಾರದಲ್ಲಿರುವ ಯುದ್ಧನೌಕೆ ಸಂಗ್ರಹಾಲಯ, ತುಮಕೂರಿನ 300 ಮಹಿಳೆಯರ ಜೇನುಸಾಕಣೆ, ಪುತ್ತೂರಿನ ಗ್ರಾಮಜನ್ಯ ರೈತಸಂಘಟನೆಯ ಜೇನುತುಪ್ಪ ಉತ್ಪಾದನೆಗೆ ಭರ್ಜರಿ ಮೆಚ್ಚುಗೆ ಸಿಕ್ಕಿದೆ.

2005ರಲ್ಲಿ ಕಾರ್ಯಾಚರಣೆ ನಿಲ್ಲಿಸಿ, 2006ರಿಂದ ಕಾರವಾರದಲ್ಲಿ ನೆಲೆಯಾದ ಐಎನ್‌ಎಸ್ ಚಾಪೆಲ್ ಯುದ್ಧನೌಕೆಯನ್ನು ಉತ್ತರ ಕನ್ನಡ ಜಿಲ್ಲಾಡಳಿತ 45 ಲಕ್ಷ ರು. ಖರ್ಚು ಮಾಡಿ ಯುದ್ಧ ಸಂಗ್ರಹಾಲಯವನ್ನಾಗಿ ಪರಿವರ್ತಿಸಿತ್ತು. ಅದನ್ನು ಇಲ್ಲಿಯವರೆಗೆ ಲಕ್ಷಾಂತರ ಮಂದಿ ವೀಕ್ಷಿಸಿದ್ದಾರೆ. ರಷ್ಯಾ ನಿರ್ಮಿತ ಈ ನೌಕೆ 1976ರಲ್ಲಿ ವಿಶಾಖಪಟ್ಟಣಂ ನೌಕಾನೆಲೆಗೆ ಆಗಮಿಸಿತ್ತು. ಸುಮಾರು 375 ಟನ್ ತೂಕದ ಈ ನೌಕೆ, ಗಂಟೆಗೆ 70 ಕಿಲೋಮೀಟರ್ ವೇಗವಾಗಿ ಸಾಗುವ ಶಕ್ತಿ ಹೊಂದಿತ್ತು. ಇದರಲ್ಲಿ ನಾಲ್ಕು ಕ್ಷಿಪಣಿನಾಶಕ ಹಾಗೂ 2 ವಿಮಾನ ನಾಶಕಗಳು ಸದಾ ಸನ್ನದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದವು. ಸತತ 29 ವರ್ಷಗಳ ಕಾಲ ಅದು ಕಡಲಿನಲ್ಲಿ ಸೇವೆ ಸಲ್ಲಿಸಿತ್ತು.

ಇನ್ನು ತುಮಕೂರಿನ ಗೂಳೂರಿನಲ್ಲಿ ಸುಮಾರು 300 ಮಹಿಳೆಯರು ಸಂಘ ರಚಿಸಿಕೊಂಡು, ಕಳೆದ ಮೂರ್ನಾಲ್ಕು ವರ್ಷಗಳಿಂದ ಜೇನುಸಾಕಣೆ ಮಾಡುತ್ತಿದ್ದಾರೆ. ಗೂಳೂರಿನ ಧಾನ್ ಫೌಂಡೇಶನ್ ಸಹಯೋಗದಲ್ಲಿ ಶಿವಗಂಗಾ ಕಳಂಜಿಯ ಜೀವಿದಂ-10ಕೆ ಜೇನು ಉತ್ಪಾದಕರ ಕಂಪನಿಯು ಆರ್ಥಿಕವಾಗಿ ಹಿಂದುಳಿದಿರುವ ಸುಮಾರು 300 ಮಹಿಳಾ ಕೃಷಿಕರನ್ನು ಒಳಗೊಂಡಿದೆ. ಇಲ್ಲಿ ಸದಸ್ಯರು ಜೇನು ಕೃಷಿಯ ಬಗ್ಗೆ ತರಬೇತಿ ಪಡೆಯುತ್ತಿದ್ದಾರೆ. ಜೇನು ಸಾಕಣೆ ಬಗ್ಗೆ ಹಿರೇಹಳ್ಳಿಯ ಕೃಷಿವಿಜ್ಞಾನ ಕೇಂದ್ರದಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಾದವರಿಗೆ ಧಾನ್ ಫೌಂಡೇಶನ್‌ನಿಂದ ಜೇನು ಪೆಟ್ಟಿಗೆ ನೀಡಲಾಗುತ್ತದೆ. ಜೇನುತುಪ್ಪವನ್ನು ನೈಸರ್ಗಿಕವಾಗಿ ಸಂಗ್ರಹಿಸಿ ಸದಸ್ಯರು ಸಂಘದ ಮೂಲಕ ಅಥವಾ ನೇರವಾಗಿ ಮಾರಾಟ ಮಾಡುತ್ತಾರೆ. ಶಿವಗಂಗಾ ಕಳಂಜಿಯ ತಯಾರು ಮಾಡುತ್ತಿರುವ ರಾಸಾಯನಿಕ ಮುಕ್ತ ಜೇನುತುಪ್ಪಕ್ಕೆ ಭಾರೀ ಬೇಡಿಕೆಯಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ, ಕಾರ್ಯನಿರ್ವಹಿಸುತ್ತಿರುವ ಗ್ರಾಮಜನ್ಯ ರೈತರ ಸಂಘಟನೆಯ ಜೇನುತುಪ್ಪ ಉತ್ಪಾದನೆ ರಾಷ್ಟ್ರಮಟ್ಟದಲ್ಲಿ ಮಾದರಿಯಾಗಿದೆ. ಆಧುನಿಕ ಸಂಸ್ಕರಣಾ ಘಟಕ, ಬಾಟಲ್, ಸಂಗ್ರಹಣೆ, ಡಿಜಿಟಲ್ ಟ್ರ್ಯಾಕಿಂಗ್ ಸೌಲಭ್ಯಗಳ ಮೂಲಕ ಗ್ರಾಮಾಂತರದಲ್ಲಿ ತಯಾರಾದ ಜೇನುತುಪ್ಪ ನಗರ ಮಾರುಕಟ್ಟೆ ತಲುಪುತ್ತಿದೆ. ಇದರಿಂದ ನೂರಾರು ಜನರ ಜೀವನಕ್ಕೆ ಅನುಕೂಲವಾಗಿದೆ.

ಮನ್ ಕೀ ಬಾತಲ್ಲಿ ಹೇಳಿದ್ದು

- ಕಾರವಾರದಲ್ಲಿ ಯುದ್ಧನೌಕೆ ಸಂಗ್ರಹಾಲಯವಾಗಿರುವ ಐಎನ್‌ಎಸ್ ಚಾಪೆಲ್‌ಗೆ ಭೇಟಿ ನೀಡಿ
- ತುಮಕೂರಿನ 300 ಮಹಿಳೆಯರ ರಾಸಾಯನಿಕ ಮುಕ್ತ ಜೇನುಕೃಷಿಗೆ ರಾಷ್ಟ್ರಮಟ್ಟದಲ್ಲಿ ಮನ್ನಣೆ
- ಪುತ್ತೂರಿನ ಗ್ರಾಮಜನ್ಯ ಸಂಘದ ರೈತರಿಂದ ಜೇನು ಮಾರಾಟಕ್ಕೆ ಡಿಜಿಟಲ್ ತಂತ್ರಜ್ಞಾನ ಬಳಕೆ

ನಟ ಪುನೀತ್, ಸಂಚಾರಿ ವಿಜಯ್ ದಾನದಿಂದ ಪ್ರೇರಣೆ
ರಾಜ್ಯದಲ್ಲಿ ದಾನಿಗಳ ಸಂಖ್ಯೆ ಏರಿಕೆ, ಮಹಾರಾಷ್ಟ್ರ ನಂ.1
ಅಂಗಾಂಗ ದಾನ: ರಾಜ್ಯ ನಂ.3

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗ ದಾನ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಜತೆಗೆ ದಾನ ಪಡೆಯುವವರ ಸಂಖ್ಯೆ ಕೂಡ ಬೆಳೆಯುತ್ತಿದೆ. ಜಾಗೃತಿಯಿಂದಾಗಿ ಕರ್ನಾಟಕ ಅಂಗಾಂಗ ದಾನದಲ್ಲಿ ವಿಶೇಷ ಛಾಪು ಮೂಡಿಸಿದೆ. ಪ್ರಖ್ಯಾತ ನಟ ಪುನೀತ್ ರಾಜ್‌ಕುಮಾರ್ ನಿಧನದ ನಂತರ ನೇತ್ರದಾನ ಮಾಡಲಾಗಿತ್ತು. ಇನ್ನೊಬ್ಬ ನಟ ಸಂಚಾರಿ ವಿಜಯ್ ಕೂಡ ಅಂಗಾಂಗ ದಾನ ಮಾಡಿದ್ದರು. ಇದರಿಂದ ಅಭಿಮಾನಿಗಳು ಪ್ರೇರಣೆ ಪಡೆದಿರುವುದೂ ಅಂಗಾಂಗ ದಾನ ಹೆಚ್ಚಳವಾಗಲು ಕಾರಣ ಎಂದು ಮೂಲಗಳು ಹೇಳಿವೆ. ಅಂಗಾಂಗ ದಾನಕ್ಕೆ ದೇಶದಲ್ಲೇ ಅತಿ ಹೆಚ್ಚು ಮಂದಿ ಆನ್‌ಲೈನ್ ಮೂಲಕ ಹೆಸರು ನೋಂದಣಿ ಮಾಡಿಸಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಮೂರನೇ ಸ್ಥಾನ ಪಡೆದಿದ್ದು, ರಾಜ್ಯದಲ್ಲಿ 52,304 ಮಂದಿ ಅಂಗಾಂಗ ದಾನಕ್ಕೆ ಮುಂದೆ ಬಂದಿದ್ದಾರೆ. → 4

ಅಂಗಾಂಗ ದಾನದಲ್ಲಿ ಮಹಿಳೆಯರೇ ಮೊದಲು

ಸ್ವಯಂಪ್ರೇರಿತರಾಗಿ ಅಂಗಾಂಗ ದಾನ ಮಾಡಿದವರಲ್ಲಿ ಹೆಚ್ಚಿನವರು ಮಹಿಳೆಯರು ಎಂದು ತಿಳಿದುಬಂದಿದೆ. ವ್ಯಕ್ತಿಯ ಸಾವಿನ ನಂತರ ಅಂಗಾಂಗ ದಾನ ಮಾಡಲಾಗುತ್ತದೆ. ಒಬ್ಬ ವ್ಯಕ್ತಿ ಕನಿಷ್ಠ ಎಂಟು ಮಂದಿಯ ಜೀವ ಉಳಿಸಬಹುದು. ನೇತ್ರದಾನ, ದೇಹ ದಾನಕ್ಕೆ ಬದುಕಿದ್ದಾಗಲೇ ಹೆಸರು ನೋಂದಾಯಿಸಿಕೊಳ್ಳುವ ಮೂಲಕ ಈ ಪುಣ್ಯ ಕಾರ್ಯದಲ್ಲಿ ಭಾಗಿಯಾಗಬಹುದು. ಯಾರು ಬೇಕಾದರೂ ಅಂಗಾಂಗ ದಾನ ಮಾಡಬಹುದಾಗಿದೆ.

ಸಮಾಚಾರ ಸಣ್ಣದಲ್ಲ

ಇಂದು ಜಿಲ್ಲಾ ಭೋವಿ ಸಮಾಜದ ಸಭೆ

ದಾವಣಗೆರೆ: ರಾಜ್ಯ ಭೋವಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಅವರು ಡಿ.1ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆಯುವ ಪ್ರಗತಿ ಪರಿಶೀಲನ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಜಿಲ್ಲಾ ಭೋವಿ ಸಮಾಜದ ಮುಖಂಡರ ಸಭೆಯನ್ನು ನಡೆಸಲಿದ್ದಾರೆ ಎಂದು ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಎಚ್ ಜಯಣ್ಣ ತಿಳಿಸಿದ್ದಾರೆ.

ಸಾರ್ವಜನಿಕ ಸಲಹಾ ಸೂಚನಾ ಸಭೆ ನಾಳೆ

ಹಿರಿಯೂರು: ನಗರಸಭೆಯ 2026–27ನೇ ಸಾಲಿನ ಆಯ–ವ್ಯಯ ತಯಾರಿ ಬಗ್ಗೆ ಸಾರ್ವಜನಿಕ ಸಲಹಾ ಸೂಚನಾ ಸಭೆಯನ್ನು ನಗರಸಭೆ ಆಡಳಿತಾಧಿಕಾರಿಗಳು, ಪೌರಾಯುಕ್ತರು ಅಧ್ಯಕ್ಷತೆಯಲ್ಲಿ ಡಿ.2ರಂದು ಬೆಳಗ್ಗೆ 11.30ಕ್ಕೆ ನಗರಸಭೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ನಗರದ ಗಣ್ಯ ವ್ಯಕ್ತಿಗಳು, ಹಿರಿಯ ನಾಗರಿಕರು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ನಿವೃತ್ತ ಅಧಿಕಾರಿ, ನೌಕರರು, ಪತ್ರಕರ್ತರು, ಸಾರ್ವಜನಿಕರು ತಮ್ಮ ಸಲಹೆ ಸೂಚನೆಗಳನ್ನು ಲಿಖಿತ ರೂಪದಲ್ಲಿ ನೀಡಬೇಕು ಎಂದು ಹಿರಿಯೂರು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುರುವಿನ ಧ್ಯಾನವೇ ಅಂತರಂಗದ ಜ್ಞಾನದೀಪ

ದಾವಣಗೆರೆ: ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ಪಸರಿಸುವ ಶಕ್ತಿ ಗುರುವಿನಲ್ಲಿದೆ'' ಎಂದು ಅವರಗೊಳ್ಳ ಪುರವರ್ಗ ಮಠದ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ನಗರದ ದೇವರಾಜ್ ಅರಸು ಬಡಾವಣೆಯ ಶ್ರೀ ಹಾಲಕೆರೆ ಅನ್ನದಾನೇಶ್ವರ ಶಾಖಾಮಠದಲ್ಲಿ ನಡೆದ 286ನೇ ಶಿವಾನುಭವ ಸಂಪದ ಹಾಗೂ ಕಾರ್ತಿಕೋತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಕಾರ್ತಿಕ ದೀಪೋತ್ಸವದ ಪ್ರಾಮುಖ್ಯತೆಯನ್ನು ಉಲ್ಲೇಖಿಸಿ, 'ದೀಪಗಳ ಬೆಳಕು ಹೊರಗೆ ಮಾತ್ರವಲ್ಲ, ಗುರುವಿನ ಧ್ಯಾನದ ಮೂಲಕ ಅಂತರಂಗದಲ್ಲಿಯೂ ಜ್ಞಾನಪ್ರಕಾಶ ಮೂಡಿಸುವುದೇ ನಿಜವಾದ ದೀಪೋತ್ಸವ' ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮಕ್ಕೆ ಅಮರಯ್ಯ ಗುರುವಿನ ಮಠ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಎನ್. ಅಡಿವೆಪ್ಪ, ನಾಗರಾಜ್ ಯರಗಲ್, ಕೆ.ಟಿ. ಮಹಾಲಿಂಗೇಶ್, ಎನ್.ಎ. ಗುರುರಾಜ್, ಪತ್ರಕರ್ತ ಎನ್.ಆರ್.ರವಿ, ನಿವೃತ್ತ ಡೆಪ್ಯುಟಿ ರೆಜಿಸ್ಟ್ರಾರ್ ಮಲ್ಲಿಕಾರ್ಜುನ ಎಸ್, ವಿವೇಕ್ ಎಲ್ ಬದ್ದಿ, ನೀಲಮ್ಮ, ಪ್ರೀತಿ ಭಾವಿ, ಪ್ರಿಯಾಂಕ ಭಾವಿ, ಮುತ್ತುರಾಜ್ ವಿ.ಭಾವಿ, ಪತ್ರಕರ್ತ ಅನಿಲ್ ಕುಮಾರ್ವಿ.ಭಾವಿ ಉಪಸ್ಥಿತರಿದ್ದರು.

ಡಿ.5ಕ್ಕೆ ಠೇವಣಿ, ಷೇರು ಹಸ್ತಾಂತರಿಸುವ ಶಿಬಿರ

ಚಿತ್ರದುರ್ಗ: ದೀರ್ಘಕಾಲದವರೆಗೆ ಹಕ್ಕು ಪಡೆಯದೆ ಉಳಿದಿರುವ ಬ್ಯಾಂಕ್ ಠೇವಣಿಗಳು, ವಿಮಾ ಕಂತುಗಳು ಮತ್ತು ಷೇರುಗಳನ್ನು ಅವುಗಳ ಮಾಲೀಕರು ಅಥವಾ ಕಾನೂನುಬದ್ಧ ವಾರಸುದಾರರಿಗೆ ಹಸ್ತಾಂತರಿಸುವ ಶಿಬಿರವು ಡಿ.5ರಂದು ಚಿತ್ರದುರ್ಗ ನಗರದ ಜಿಲ್ಲಾ ಪಂಚಾಯತ್ನಲ್ಲಿ ನಡೆಯಲಿದೆ ಎಂದು ಜಿಪಂ ಸಿಇಒ ಡಾ.ಎಸ್.ಆಕಾಶ್ ತಿಳಿಸಿದ್ದಾರೆ. ಈ ಶಿಬಿರವು ಭಾರತದ ಹಣಕಾಸು ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ ಎಲ್ಲ ಬ್ಯಾಂಕಿಂಗ್, ವಿಮೆ ಮತ್ತು ಇತರ ವಲಯಕ್ಕೆ ಸಂಬಂಧಿಸಿದ ಕಚೇರಿ ಶಾಖೆಗಳಲ್ಲಿ ಡಿ.31ರವರೆಗೆ ಮುಂದುವರೆಯುತ್ತದೆ. ಶಿಬಿರದಲ್ಲಿ, ಖಾತೆದಾರರು ಅಥವಾ ಕಾನೂನುಬದ್ಧ ವಾರಸುದಾರರು ಬ್ಯಾಂಕಿನಲ್ಲಿ ಸತತ 10 ವರ್ಷಗಳಿಗೂ ಹೆಚ್ಚು ಕಾಲ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿನ ಹಣ ಮತ್ತು ಕ್ಲೈಮ್ ಮಾಡದ ಠೇವಣಿಗಳನ್ನು ಕ್ಲೈಮ್ ಮಾಡ ಬಹುದು. ಬ್ಯಾಂಕಿಂಗ್ ವಲಯ, ವಿಮಾ ವಲಯ, ಹಣ ಕಾಸು ವಲಯ ಮತ್ತು ಇತರ ವಲಯಗಳ ಅಧಿಕಾರಿಗಳು ಶಿಬಿರದಲ್ಲಿ ಭಾಗವಹಿಸಿ ಸಲಹೆ ನೀಡಲಿದ್ದಾರೆ. ಸೂಕ್ತ ಗುರುತಿನ ದಾಖಲೆಗಳು ಮತ್ತು ಪುರಾವೆಗಳೊಂದಿಗೆ ಶಿಬಿರದಲ್ಲಿ ಭಾಗವಹಿಸುವ ಮೂಲಕ, ನೀವು ಅಗತ್ಯ ಸಲಹೆ ಪಡೆಯಬಹುದು ಮತ್ತು ಹಕ್ಕು ಪಡೆಯದ ಮೊತ್ತವನ್ನು ಮರುಪಡೆಯಲು ಈ ಶಿಬಿರ ಬಳಸಿಕೊಳ್ಳಬಹುದು ಎಂದು ಜಿಪಂ ಸಿಇಒ ಡಾ.ಎಸ್.ಆಕಾಶ್ ತಿಳಿಸಿದ್ದಾರೆ.

'ಬಸವಶೈವದಲ್ಲಿ ಹಿಂದುತ್ವ' ಪುಸ್ತಕ ಬಿಡುಗಡೆ | ವೀರಶೈವ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ವಿಷಾದ

ಬಸವಣ್ಣನ ವಿಚಾರ, ಆಚಾರ ಪಾಲನೆಯಾಗುತ್ತಿಲ್ಲ

ದಾವಣಗೆರೆ: ಭಕ್ತಿಯ ಬಂಡಾರವಾಗಿದ್ದವರು ಜಗಜ್ಯೋತಿ ಬಸವಣ್ಣನವರು. ಆದರೆ, ಇಂದು ಭಕ್ತಿಯನ್ನೇ ಬಿಟ್ಟು ಬಸವಣ್ಣರನ್ನು ನೋಡಲಾಗುತ್ತಿದೆ. ಇಡೀ ಜಗತ್ತೇ ಅವರನ್ನೂ ಜಗಜ್ಯೋತಿ ಅಂತ ಕರೆದರೂ ಅವರ ವಿಚಾರ ಆಚರಣೆ ಮಾಡುತ್ತಿಲ್ಲ ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಹರ ಸಾಹಿತ್ಯ ಸಂಕುಲ ವತಿಯಿಂದ ಆಯೋಜಿಸಿದ್ದ ಡಾ.ಡಿ.ಎ. ಉಪಾಧ್ಯ ಅವರ ''ಬಸವಶೈವದಲ್ಲಿ ಹಿಂದುತ್ವ'' ಗ್ರಂಥ ಬಿಡುಗಡೆಗೊಳಿಸಿ ಮಾತನಾಡಿ, ಕೆಲವರು ಬಸವಣ್ಣನವರ ವಚನಗಳನ್ನು ತಮ್ಮ ತಮ್ಮ ವಿವೇಚನೆಯಂತೆ ವ್ಯಾಖ್ಯಾನ ಮಾಡುತ್ತಾ ಬಸವಣ್ಣನನ್ನು ಹಿಂದು ಧರ್ಮದಿಂದ ಬೇರ್ಪಡಿಸುವ ಕುಕೃತ್ಯದಲ್ಲಿ ತೊಡಗಿದ್ದಾರೆ. ಬಸವಣ್ಣನವರು ಪಾಪ–ಪುಣ್ಯ, ಸ್ವರ್ಗ–ನರಕ ಮತ್ತು ಕರ್ಮ ಸಿದ್ಧಾಂತ ಅಲ್ಲಗಳೆದರು ಎಂದು ಹೇಳುತ್ತಿದ್ದಾರೆ. ಬಸವಣ್ಣ ಹಾಗೆ ಹೇಳಿದ್ದರು ಎಂಬುದಕ್ಕೆ ದಾಖಲೆ ಇಲ್ಲ. ಹಾಗೊಂದು ವೇಳೆ ಹೇಳಿದ್ದರೆ ಅದರ ದಾಖಲೆ ತೋರಿಸಲಿ ಎಂದರು.

ಡಾ.ಡಿ.ಎ.ಉಪಾಧ್ಯ ಅವರ 'ಬಸವಶೈವದಲ್ಲಿ ಹಿಂದುತ್ವ' ಗ್ರಂಥವನ್ನು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಬಿಡುಗಡೆಗೊಳಿಸಿದರು.

ವಿನಾಕಾರಣ ಬಸವಣ್ಣನವರನ್ನು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ತಪ್ಪು ಎಂದ ಅವರು, ಬಸವ ತತ್ವದಲ್ಲಿ ಕಾಯಕ ಸಿದ್ಧಾಂತ, ಶಿವಯೋಗ ಸಿದ್ಧಾಂತ, ದಾಸೋಹ ಸಿದ್ಧಾಂತ ಇವೆ. ತಾವು ಹಿಂದೂಗಳು ಅಲ್ಲ ಎಂದು ಹೇಳುವವರ ಮನಸು ಚಂಚಲ ಆಗಿರುವ ಕಾರಣಕ್ಕೆ ಗೊಂದಲದ ಹೇಳಿಕೆ ನೀಡುತ್ತಿದ್ದಾರೆಂದರು.

ಸಮಾಜದಲ್ಲಿ ಕೆಲ ಮಠ, ಪೀಠಗಳು ಭಕ್ತರನ್ನು ಆಸ್ತಿಕರನ್ನಾಗಿ ಮಾಡುವ ಬದಲು ನಾಸ್ತಿಕರನ್ನಾಗಿ ಮಾಡುತ್ತಿವೆ. ದೇಗುಲದಲ್ಲಿ ದೇವರು ಇಲ್ಲ ಎಂದು ತಪ್ಪಾಗಿ ಹೇಳಲಾಗುತ್ತಿದೆ. ಹಾಗಾದರೆ ದೇವರು ಎಲ್ಲಿದ್ದಾನೆ ಎಂಬುದನ್ನು ಜನರಿಗೆ ತಿಳಿಸಿಕೊಡಿ ಎಂದು ಹೇಳಿದರು.

> ಜಗಜ್ಯೋತಿ ಬಸವಣ್ಣನವರನ್ನು ಹಿಂದೂ ಧರ್ಮದದಿಂದ ಬೇರ್ಪಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಅವರ ಆಚಾರ, ವಿಚಾರಗಳನ್ನು ತಿರುಚುವ ಕಾರ್ಯವಾಗುತ್ತಿರುವುದು ಆತಂಕ ಮೂಡಿಸಿದೆ.
> – ವಚನಾನಂದ ಶ್ರೀ.

ಹಿಂದೂ ಧರ್ಮದಲ್ಲಿ ಶಾಕ್ತ, ವೈಷ್ಣವ ಹಾಗೂ ಶೈವ ಎಂಬ ಮೂರು ಪರಂಪರೆ ಇವೆ. ಶಕ್ತಿ ಆರಾಧನೆ ಮಾಡಿದವರು ಶಾಕ್ತರು, ವಿಷ್ಣುವಿನ ಆರಾಧಕರು ವೈಷ್ಣವ ಪಂಥಕ್ಕೆ ಸೇರಿದ್ದಾರೆ. ಶಿವನನ್ನು ಉಪಾಸನೆ ಮಾಡುವವರನ್ನು ಶೈವ ಎಂದೇ ಗುರುತಿಸಲಾಗಿದೆ. ಇದು ಬಸವಣ್ಣನವರು ಬರುವ ಪೂರ್ವದಲ್ಲಿತ್ತು. ಆದರೆ, ಕಾಯಕ ಸಮುದಾಯದವರಿಗೆ ದೇಗುಲ ಪ್ರವೇಶ ನಿಷಿದ್ಧವಿದ್ದಾಗ ಬಸವಣ್ಣನವರು ಇಷ್ಟಲಿಂಗ ನೀಡಿದರು. ಜನರು ಅದರಲ್ಲಿಯೇ ತಮ್ಮಿಷ್ಟದ ದೇವರನ್ನು ಕಾಣತೊಡಗಿದರು ಎಂದು ತಿಳಿಸಿದರು.

ನಂತರ, ಉಪನ್ಯಾಸಕ ವಿ.ಚನ್ನಬಸಪ್ಪ ಕೃತಿ ಕುರಿತು ಮಾತನಾಡಿದರು. ಹರ ಸಾಹಿತ್ಯ ಸಂಕುಲದ ಅಧ್ಯಕ್ಷ ಕಾಶಿನಾಥ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಓಂಕಾರಯ್ಯ ತವನಿಧಿ ಪ್ರಾಸ್ತಾವಿಕ ನುಡಿದರು.

ಕಾರ್ಯಕ್ರಮದಲ್ಲಿ ಲೇಖಕ ಡಿ.ಎ. ಉಪಾಧ್ಯ, ಉದ್ಯಮಿ ವಾಣಿ ಶಿವಣ್ಣ, ವಾಣಿಜ್ಯೋದ್ಯಮಿ ಅಂದನೂರು ಮುರುಗೇಶ್, ರಾಷ್ಟ್ರೋತ್ಥಾನದ ಸಂಚಾಲಕ ಶಂಭುಲಿಂಗಪ್ಪ, ವಾಣಿಜ್ಯೋದ್ಯಮಿ ಬಾದಾಮಿ ಜಯಣ್ಣ, ಎಂ. ಬಿ.ನಟರಾಜ್ ಉಪಸ್ಥಿತರಿದ್ದರು.

ಮಕ್ಕಳ ಪ್ರತಿಭೆ ಪ್ರೋತ್ಸಾಹಿಸಿ, ಪುರಸ್ಕರಿಸಿ

ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಶಾಸಕ ಬಿ.ಜಿ.ಗೋವಿಂದಪ್ಪ ಉದ್ಘಾಟಿಸಿದರು.

ಹೊಸದುರ್ಗ: ಪೋಷಕರು ಹಾಗೂ ಶಿಕ್ಷಕರು ಪ್ರತಿಭಾ ಕಾರಂಜಿ ಕರ್ಯಕ್ರಮದಲ್ಲಿ ಮಕ್ಕಳು ಭಾಗವಹಿಸುವಂತೆ ಪ್ರೋತ್ಸಾಹಿಸಿ ಪುರಸ್ಕರಿಸಬೇಕು. ಅವರ ಅಭಿರುಚಿಗೆ ತಕ್ಕಂತೆ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ಹಾಗೂ ಪ್ರೋತ್ಸಾಹ ನೀಡಬೇಕೆಂದು ಶಾಸಕ ಬಿ.ಜಿ.ಗೋವಿಂದಪ್ಪ ತಿಳಿಸಿದರು.

ಪಟ್ಟಣದ ಜೂನಿಯರ್‌ಕಾಲೇಜು ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ ಆಯೋಜಿಸಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಕೋಲಾಟ, ಏಕಪಾತ್ರಾಭಿನಯ, ಪ್ರಬಂಧ, ಜಾನಪದ ಗೀತೆಗಳು, ಕ್ಲೇ ಮಾಡಲಿಂಗ್, ವಿವಿಧ ವೇಷ ಸ್ಪರ್ಧೆ, ಆಶುಭಾಷಣ, ರಂಗೋಲಿ, ಪ್ರಬಂಧ, ನೃತ್ಯ ಸೇರಿದಂತೆ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಮುಖಂಡರಾದ ಆಗ್ರೋಶಿವಣ್ಣ, ಕ್ಷೇತ್ರ ಸಮನ್ವಯಾಧಿಕಾರಿ ಶ್ರೀನಿವಾಸ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಾಂತಪ್ಪ, ತಾಲೂಕು ನೌಕರರ ಸಂಘದ ಅಧ್ಯಕ್ಷ ಶಾಂತಕುಮಾರ್, ನಿರ್ದೇಶಕರಾದ ಬಸವರಾಜ್, ದಿವಾಕರಪ್ಪ, ಜಿಲ್ಲಾ ಪ್ರೌಢಶಾಲಾ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ನಾಗೇಂದ್ರಪ್ಪ, ದೈಹಿಕ ಶಿಕ್ಷಣ ಸಂಯೋಜಕ ಶ್ರೀನಿವಾಸ್, ತಾಲೂಕು ಸಂಘದ ಪ್ರಕಾಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಾಗಪ್ಪ, ರಾಜ್ಯ ಸಂಘದ ಮಂಜುನಾಥ್, ಶಿಕ್ಷಣ ಸಂಯೋ ಜಕರಾದ ಶಶಿಧರ್, ಯತೀಶ್, ಆನಂದಪ್ಪ ಹಾಜರಿದ್ದರು.

> ಮಕ್ಕಳು ಸೋಲು ಗೆಲುವು ಎಂಬ ಮನೋಭಾವ ಬಿಟ್ಟು ಎಲ್ಲ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಮಕ್ಕಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರತರಲು ಪ್ರತಿಭಾ ಕಾರಂಜಿ ಉತ್ತಮ ವೇದಿಕೆಯಾಗಿದೆ. ಈ ಸ್ಪರ್ಧೆಯಲ್ಲಿ ನಿರ್ಣಾಯಕರಾಗಿ ಭಾಗವಹಿಸಿದವರು ಯಾವುದೇ ಪ್ರಭಾವಕ್ಕೆ ಒಳಗಾಗದೆ ನಿಷ್ಪಕ್ಷಪಾತವಾಗಿ ನಿರ್ಣಯ ನೀಡಬೇಕು. ಸೋಲು, ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ.
> –ಬಿ.ಜಿ.ಗೋವಿಂದಪ್ಪ, ಶಾಸಕ

ವಿದ್ಯಾರ್ಥಿಗಳಲ್ಲಿ ಪರಿಶ್ರಮ ಇದ್ದರೆ ಸಾಧನೆ ಸಾಧ್ಯ

ಚಳ್ಳಕೆರೆ: ವಿದ್ಯಾರ್ಥಿಗಳಲ್ಲಿ ಇಚ್ಛಾಶಕ್ತಿ ಬಹಳ ಮುಖ್ಯ, ಹಾಗೂ ಪರಿಶ್ರಮ ಇದ್ದರೆ ಮಾತ್ರ ಸಾಧನೆಯ ಹಾದಿಯಲ್ಲಿ ಸಾಗಬಹುದು ಎಂದು ಸ್ಥಳೀಯ ಶಾಸಕ ಟಿ.ರಘುಮೂರ್ತಿ ಹೇಳಿದರು.

ಅವರು ನಗರದ ಹೆಚ್ ಪಿಪಿಸಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಐಕ್ಯೂಎಸಿ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಯೂತ್ ರೆಡ್ ಕ್ರಾಸ್, ರೋವರ್ಸ್ ಹಾಗೂ ರೇಂಜರ್ಸ್ ಘಟಕ, ಸಾಂಸ್ಕೃತಿಕ ಸಮಿತಿ ಮತ್ತು ಕ್ರೀಡಾ ವಿಭಾಗಗಳ ಉದ್ಘಾಟನಾ ಸಮಾರಂಭದಲ್ಲಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬುಡಕಟ್ಟು ಜನಾಂಗದವರು ಹೊಂದಿರುವ ಚಳ್ಳಕೆರೆ ತಾಲೂಕಿನ ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆಯಲು ಸಾಮಾಜಿಕ ಸೇವೆ, ಸಾಂಸ್ಕೃತಿಕ ಕ್ರೀಡಾ ಮನೋಭಾವ ಹೊಂದಿರಬೇಕು. ರಾಮಚಂದ್ರಪ್ಪ ಮಾತನಾಡಿ, ತಾಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ತಾವು ತಮ್ಮನ್ನು ತಾವು ಗುರುತಿಸಿಕೊಳ್ಳಬೇಕು, ಮನಸ್ಸಿದ್ದರೆ ಮಾತ್ರ ಮಾರ್ಗ ಎಂಬ ತತ್ವವನ್ನು ಅನುಸರಿಸಬೇಕು, ಪೋಷಕರ ಕನಸು ನನಸು ಮಾಡುವ ಮೂಲಕ ವ್ಯವಸ್ಥೆಗಳಿಗೆ ಪೂರಕ 'ವಾಗಿ ಹೊಂದಿಕೊಳ್ಳುವ ಮನೋಭಾವ ಹೊಂದಿರಬೇಕು, ಸಮಸ್ಯೆಗಳನ್ನು ಯಾರು ಮೆಟ್ಟಿ ನಿಲ್ಲುತ್ತಾರೆ ಅವರು ಮಾತ್ರ ಉತ್ತುಂಗ ಮಟ್ಟದಲ್ಲಿ ಯಶಸ್ಸುಗಳಿಸುತ್ತಾರೆ ಎಂದರು. ಇದೇ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ.ದೇವಪ್ಪ, ಡಾ.ಚೆನ್ನಕೇಶವ, ವಿಜಯ್ ಕುಮಾರ್, ಕೃಷ್ಣಮೂರ್ತಿ, ಡಾ.ಜಗನ್ನಾಥ್, ಡಾ.ಜಯಮ್ಮ, ಡಾ.ಗಂಗಾಧರ, ಯಲ್ಲಪ್ಪ ಹಾಜರಿದ್ದರು.

> ವಿದ್ಯಾರ್ಥಿಗಳಲ್ಲಿ ಗುರಿ ಇದ್ದರೆ ಸಾಲದು ಇಚ್ಛಾಶಕ್ತಿ ಇರಬೇಕು, ಆ ಗುರಿ ಇಟ್ಟುಕೊಂಡಿರುವುದರಿಂದ ಕಾಲೇಜಿನ 22 ಜನ ಎನ್ ಎಸ್ ಎಸ್ ಶಿಬಿರಾರ್ಥಿಗಳು ರಾಜ್ಯಪಾಲರಿಂದ ಪ್ರಶಸ್ತಿ ಪಡೆಯುವುದು ಹೆಮ್ಮೆಯ ಸಂಗತಿ, ಇತರ ಸನ್ಮಾನ ಗಳು ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆ ಆಗಬೇಕು.
> – ಟಿ.ರಘುಮೂರ್ತಿ, ಶಾಸಕ

ಐಕ್ಯೂಎಸಿ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಸಾಂಸ್ಕೃತಿಕ ಸಮಿತಿ ಮತ್ತು ಕ್ರೀಡಾ ವಿಭಾಗಗಳ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

57ಗ್ರಾಮಗಳಿಗೆ ಕುಡಿವ ನೀರು ಮಾದರಿಗೆ ಪ್ರಥಮ ಸ್ಥಾನ



ಹಿರೇಮಳಲಿ ಗ್ರಾಪಂಯ ಪಿಡಿಒ ರಶ್ಮಿ ಎನ್ ಹಾಗೂ ಪಿಡಬ್ಲ್ಯೂಎಸ್‌ಸಿ ಅಧ್ಯಕ್ಷ ವಿಜಯನಾಯಕ್ ಭಾಗವಹಿಸಿದ್ದರು.

ದಾವಣಗೆರೆ: ನವದೆಹಲಿಯ ಭಾರತ ಮಂದಿರದಲ್ಲಿ ಕೇಂದ್ರ ಜಲಶಕ್ತಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸುಜಲಾಂ ಸಮ್ಮಿತ ನಲ್ಲಿ ದಾವಣಗೆರೆ ಜಿಲ್ಲೆಯ ಹಿರೇ ಮಳಲಿ ಗ್ರಾಪಂಯ ಪಿಡಿಒ ರಶ್ಮಿ ಎನ್ ಹಾಗೂ ಪಿಡಬ್ಲ್ಯೂಎಸ್ಸಿ ಅಧ್ಯಕ್ಷ ವಿಜಯ ನಾಯಕ್ ಭಾಗವಹಿಸಿ ಯಶಸ್ವಿ ಅನುಷ್ಠಾನದ ಕುರಿತು ಪ್ರಸ್ತುತಪಡಿಸಿದರು.

ದಾವಣಗೆರೆ ಜಿಲ್ಲೆಯಲ್ಲಿ 45 ಕಂದಾಯ ಗ್ರಾಮ, 12 ಜನ ವಸತಿ ಕೇಂದ್ರ ಒಟ್ಟು 57 ಗ್ರಾಮಗಳಲ್ಲಿ 24★7 ನೀರು ಸರಬರಾಜು ಮಾದರಿಯನ್ನು ರಾಷ್ಟ್ರೀಯ ವೇದಿಕೆಯಲ್ಲಿ ಯಶಸ್ವಿ ಯಾಗಿ ಪ್ರಸ್ತುತಪಡಿಸಿದ್ದಾರೆ. ರಾಜ್ಯದಲ್ಲಿ ಮೊದಲ ಜಿಲ್ಲೆ ದಾವಣಗೆರೆ ಮಾತ್ರ ಈ ಗೌರವಕ್ಕೆ ಆಯ್ಕೆಯಾದುದು. ನಮ್ಮ ತಂಡದ ಶ್ರಮ ಮತ್ತು ನವೀನತೆಗೆ ದೊರೆತ ಸನ್ಮಾನ. ಮುಂದಿನ ಕೆಲವೇ ತಿಂಗಳಲ್ಲಿ ನೂರು ಗ್ರಾಮಗಳಲ್ಲಿ ಸುಸ್ಥಿರ ಕುಡಿಯುವ ನೀರು ಪೂರೈಕೆ ಮಾಡುವ ಮೂಲಕ ಯಶಸ್ವಿ ಅನುಷ್ಠಾನ ಜಿಲ್ಲೆ ಎಂದು ದೇಶದಲ್ಲಿ ಗುರುತಿಸುವ ಕಾರ್ಯದ ಗುರಿ ಹೊಂದಲಾಗಿದೆ ಎಂದು ಜಿ ಪಂ ಸಿಇಒ ಗಿತ್ತೆ ಮಾಧವ ವಿಠ್ಠಲರಾವ್ ಸಂತಸ ವ್ಯಕ್ತಪಡಿಸಿದ್ದಾರೆ.

ನೌಕರರ ಬೇಡಿಕೆಗೆ ಅಧಿವೇಶನದಲ್ಲಿ ಒತ್ತಾಯಿಸುವೆ: ಶಾಸಕ

ಹರಿಹರ: ರಾಜ್ಯ ಪೌರ ನೌಕರರ ಸಂಘದ ನ್ಯಾಯಯುತವಾದ ಬೇಡಿಕೆಗಳನ್ನು ಸ್ಪಂದಿಸಿ ಬಗೆಹರಿಸುವಂತೆ ವಿಧಾನಸಭಾ ಅಧಿವೇಶನದಲ್ಲಿ ಸರಕಾರಕ್ಕೆ ಒತ್ತಾಯಿಸುವೆ ಎಂದು ಶಾಸಕ ಬಿ.ಪಿ ಹರೀಶ್ ಭರವಸೆ ನೀಡಿದರು.

ನಗರದಲ್ಲಿ ಹರಿಹರ ಘಟಕದ ಪೌರ ನೌಕರರ ಸಂಘದ ಪದಾಧಿಕಾರಿಗಳು ಬೇಡಿಕೆಗಳ ಮನವಿ ಸ್ವೀಕರಿಸಿ, ಅವರು ಭರವಸೆ ನೀಡಿದರು.

ನಿಮ್ಮ ಸಂಘದ ರಾಜ್ಯ ಘಟಕದಿಂದ ಸರಕಾರಕ್ಕೆ ನೀಡಿರುವ ಬೇಡಿಕೆಗಳೆಲ್ಲವೂ ನ್ಯಾಯ ಸಮ್ಮತವಾಗಿದ್ದು ಸರಕಾರ ಯಾವುದೇ ಇರಲಿ ನಿಮ್ಮ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸುವಂತೆ ಸರಕಾರ ಮಟ್ಟದಲ್ಲಿ ಹಾಗೂ ವಿಧಾನಸಭಾ ಅಧಿವೇಶನದಲ್ಲಿ ಸರಕಾರದ ಗಮನ ಸೆಳೆಯುತ್ತೇನೆ.ಇದರ ಬಗ್ಗೆ ನೀವು ಚಿಂತಿಸುವುದು ಬೇಡ ಎಂದು ಹೇಳಿದರು.

ಇದೇ ವೇಳೆ ಹರಿಹರ ಘಟಕದ ಅಧ್ಯಕ್ಷ ಎಚ್.ಪರಸಪ್ಪ ಸುದ್ದಿಗಾರರೊಂದಿಗೆ ಮಾತನಾಡಿ, ನ.11ರಂದು ಕೊಪ್ಪಳ ದಲ್ಲಿ ನಡೆದ ರಾಜ್ಯ ಪರಿಷತ್ ಸಭೆಯ ತೀರ್ಮಾನದಂತೆ, ಸರಕಾರ ಕೂಡಲೇ ಬೇಡಿಕೆಗಳನ್ನು ಈಡೇರಿಸದ ಹಿನ್ನೆಲೆಯಲ್ಲಿ ಡಿ.5ರಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ರಾಜ್ಯ ಸಂಘದ ಸೂಚನೆಯ ಮೇರೆಗೆ ಆರಂಭಿಸಲಾಗುವುದು ಎಂದರು.

ಖಾಲಿ ಇರುವ ಸಮುದಾಯ ಸಂಘಟನಾಧಿಕಾರಿ, ಸಹಾಯಕ ಕಾರ್ಯ ಅಭಿಯಂತರ, ಮೆಕಾನಿಕಲ್ ಮತ್ತು ಕಿರಿಯ ಎಂಜಿನಿಯರ್, ಹುದ್ದೆಗಳ ನೇಮಕ, ಒಳಚರಂಡಿ ನಿರ್ವಹಣೆಗೆ ಹೆಚ್ಚಿನ ಸಿಬ್ಬಂದಿ ಮಂಜೂರು ಮಾಡುವುದು, ಕಂಪ್ಯೂಟರ್ ಆಪರೇಟರ್‌ಪೌರಕಾರ್ಮಿಕರ ಹುದ್ದೆ ನೂರಕ್ಕೆ ನೂರರಷ್ಟು ನೇಮಕ ಮಾಡುವುದು ಸಹಾಯಕ ನೀರು ಸರಬರಾಜು ವೃಂದದವರನ್ನು ನೇಮಕ ಮಾಡಿಕೊಳ್ಳುವುದು ಇತ್ಯಾದಿ ಸೇರಿದಂತೆ ಹಲವು ಬೇಡಿಕೆಗಳು ಸರಕಾರದ ಮುಂದಿವೆ ಎಂದು ಹೇಳಿದರು.

ಪೌರ ನೌಕರರ ಸಂಘದ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ್, ಹರಿಹರ ಘಟಕದ ಗೌರವಾಧ್ಯಕ್ಷರಾದ ಶಿವಕುಮಾರ್, ಸದಾಶಿವ ಪೈಲ್ವಾನ್, ಪ್ರಧಾನ ಕಾರ್ಯದರ್ಶಿ ರಾಮ್ ಕುಮಾರ್ ಕೊಂಡಜ್ಜಿ, ಸೌಭಾಗ್ಯಮ್ಮ, ಕೊಪ್ಪಳ ಹನುಮಂತಪ್ಪ, ಎನ್. ಹನುಮಂತಪ್ಪ, ಪಿ. ಎಚ್.ರಾಮಕೃಷ್ಣ, ಎಚ್.ಚಂದ್ರಪ್ಪ, ಎಚ್ ಶಿವಮೂರ್ತಿ, ಎನ್.ರಾಜಶೇಖರ್‌ಇದ್ದರು.

ಶಾಸಕ ಬಿ.ಪಿ ಹರೀಶ ಅವರು ಹರಿಹರ ಘಟಕದ ಪೌರ ನೌಕರರ ಸಂಘದ ಪದಾಧಿಕಾರಿಗಳು ಬೇಡಿಕೆಗಳ ಮನವಿ ಸ್ವೀಕರಿಸಿದರು.

> ಸರಕಾರ ಕರ್ನಾಟಕ ನಾಗರಿಕ ಸೇವಾ ಅಧಿನಿಯಮ 1978ರ ಅನ್ವಯ ಪೌರ ಸೇವಾ ನೌಕರರನ್ನು ಪರಿಗಣಿಸುವುದು ಸೇರಿದಂತೆ 20 ವಿವಿಧ ಬೇಡಿಕೆಗಳು ಸರಕಾರದ ಮುಂದಿದ್ದು ಹಲವಾರು ಬಾರಿ ಮನವಿ ಮಾಡಿದರು ಸರಕಾರ ನಮ್ಮ ಬೇಡಿಕೆಗಳ ಬಗ್ಗೆ ಗಮನ ಹರಿಸುತ್ತಿಲ್ಲ.
> – ಬಿ.ಪಿ ಹರೀಶ್, ಶಾಸಕ

ರಾಜ್ಯಮಟ್ಟದ ಕ್ವಿಜ್: ಚವಲಿಹಳ್ಳಿ ವಿದ್ಯಾರ್ಥಿಗಳು ಪ್ರಥಮ

ಚಿತ್ರದುರ್ಗ: ತಾಲೂಕಿನ ಚವಲಿಹಳ್ಳಿ ಗೊಲ್ಲರಹಟ್ಟಿ ಸರಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ರಾಜ್ಯಮಟ್ಟದ ಪ್ರಾಚ್ಯ ಪ್ರಜ್ಞೆ ಕಾರ್ಯಕ್ರಮದಲ್ಲಿ ರಸಪ್ರಶ್ನೆ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿದ್ದಾರೆ. ರಾಜ್ಯಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆಗಳು ಇತ್ತೀಚೆಗೆ ಗದಗದ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಚಿತ್ರದುರ್ಗ ತಾಲೂಕಿನ ಚವಲಿಹಳ್ಳಿ ಗೊಲ್ಲರ ಹಟ್ಟಿಯ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಗಳಾದ ಜೆ.ತನುಜ, ಕೆ. ವಸುಂಧರ ಅವರು ಪ್ರಥಮ ಸ್ಥಾನ ಪಡೆದಿದ್ದಾರೆ. ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಪ್ರಾಚ್ಯ ಇಲಾಖೆಯ ಆಯುಕ್ತ ದೇವರಾಜ್ ಅವರಿಂದ 30 ಸಾವಿರ ರು.ಮೊತ್ತದ ಚೆಕ್ ವಿತರಿಸಿದರು. ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಮಾರ್ಗದರ್ಶಿ ಶಿಕ್ಷಕ ಟಿ.ಎಂ. ಮಲ್ಲಿಕಾರ್ಜುನ್, ಮುಖ್ಯ ಶಿಕ್ಷಕ ಆರ್.ನಾಗೇಂದ್ರಪ್ಪ, ವಿಷಯ ಪರಿವೀಕ್ಷಕ ಕೆ.ಜೆ.ಪ್ರಶಾಂತ್, ಜಿಲ್ಲಾ ಸಮಾಜ ವಿಜ್ಞಾನ ಕ್ಲಬ್ಬ ಅಧ್ಯಕ್ಷ ಬಿ.ಟಿ.ವೀರಭದ್ರಪ್ಪ, ಕಾರ್ಯದರ್ಶಿ ಪ್ರಭುಶಂಕರ್‌ಪ್ರಸಾದ್ ಅಭಿನಂದನೆ ಸಲ್ಲಿಸಿದ್ದಾರೆ.

ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಪ್ರಾಚ್ಯ ಇಲಾಖೆಯ ಆಯುಕ್ತ ದೇವರಾಜ್ ಅವರಿಂದ 30 ಸಾವಿರ ರು.ಮೊತ್ತದ ಚೆಕ್ ವಿತರಿಸಲಾಯಿತು.

ಸಂವಿಧಾನ ಕಾಯಿದೆ ಅಲ್ಲ, ಅದು ನಿರಂತರ ಜೀವಂತ ದಾಖಲೆ

ದಾವಣಗೆರೆ: ಇಡೀ ಪ್ರಪಂಚದಲ್ಲಿಯೇ ಭಾರತದ ಸಂವಿಧಾನವು ಭಿನ್ನ ಮತ್ತು ವಿಶಿಷ್ಟವಾಗಿದ್ದು, ಇದು ಕೇವಲ ಒಂದು ಕಾಯಿದೆಯಲ್ಲ, ಅದು ನಿರಂತರ ಜೀವಂತ ದಾಖಲೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಪ್ರತಿಪಾದಿಸಿದರು.

ಶನಿವಾರ ನಗರದ ಜಿಲ್ಲಾ ನ್ಯಾಯಾಲಯ ಆವರಣದ ವಕೀಲರ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾ ವಕೀಲರ ಸಂಘ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ, ಸಂವಿಧಾನ ದಿನಾಚರಣೆ ಹಾಗೂ ಡಾ.ಬಿ.ಆರ್. ಅಂಬೇಡ್ಕರ್‌ಭಾವಚಿತ್ರ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಭಾರತದ ಸಂವಿಧಾನ ''ಭಾರತೀಯರಾದ ನಾವು'' ಎಂಬ ಪದಗಳ ಮೂಲಕ ಆರಂಭವಾಗುತ್ತದೆ. ಇದರರ್ಥ ಜನರು ತಮ್ಮ ಸಂವಿಧಾನವನ್ನು ತಾವೇ ನೀಡಿಕೊಂಡಿದ್ದಾರೆ ಎಂದರು.

ಸಂವಿಧಾನ ರಚನೆ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ವಕೀಲರ ಕೊಡುಗೆ ಅಪಾರವಾಗಿದೆ. ಸಂವಿಧಾನವೇ ನ್ಯಾಯಾಂಗದ ಅಥವಾ ವಕೀಲಿ ವೃತ್ತಿಯ ತಾಯಿ. ಹಾಗಾಗಿ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ನ್ಯಾಯಾಂಗ, ಶಾಸಕಾಂಗ ಹಾಗೂ ಕಾರ್ಯಾಂಗದ ನಂತರವೂ ಅಂತಿಮವಾಗಿ ನ್ಯಾಯ ವ್ಯವಸ್ಥೆ ಹಾಗೂ ಕಾನೂನು ಸಮುದಾಯದ ಮೇಲೆ ನಾಗರಿಕರಿಗೆ ವಿಶ್ವಾಸ ಇದೆ ಎಂದು ಹೇಳಿದರು.

ಬೀದಿ ಬದಿ ವ್ಯಾಪಾರಿಯ ಹಕ್ಕುಗಳೇನು ಎಂಬುದನ್ನು ಸಂವಿಧಾನ ಹೇಳುವುದಿಲ್ಲ. ಆದರೆ, ಸರ್ವೋಚ್ಚ ನ್ಯಾಯಾಲಯ ಬದುಕುವ ಹಕ್ಕು ಮತ್ತು ಸ್ವಾತಂತ್ರ್ಯದ'' ವ್ಯಾಪ್ತಿಯಲ್ಲಿ ಇವರನ್ನು ತಂದಿದೆ. ಶಿಕ್ಷಣ, ಪರಿಸರ, ನೀರು ಮತ್ತು ಆರೋಗ್ಯದ ಹಕ್ಕುಗಳು ಇಂದು ಸಂವಿಧಾನದ ವ್ಯಾಖ್ಯಾನದ ಮೂಲಕ ಮೂಲಭೂತ ಹಕ್ಕುಗಳಾಗಿವೆ' ಎಂದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ವೇಲಾ.ಡಿ.ಕೆ ಮಾತನಾಡಿದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಆರ್.ಗುರುಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಕೆ.ಜಿ.ಕೆ.ಸ್ವಾಮಿ ಸ್ವಾಗತಿಸಿದರು. ಅಮೃತ ಮತ್ತು ಸಂಗಡಿಗರು ಪ್ರಾರ್ಥಿಸಿದರು.

ಸಂವಿಧಾನ ದಿನಾಚರಣೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್‌ಭಾವಚಿತ್ರ ಅನಾವರಣ ಕಾರ್ಯಕ್ರಮದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಮಾತನಾಡಿದರು.

> ಕರ್ನಾಟಕ ಏಕೀಕರಣದ ನಂತರದಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಭಾಗವಾಗಿದೆ. ಇವೆರಡಕ್ಕೂ ಮಧ್ಯ ಕರ್ನಾಟಕವಾದ ದಾವಣಗೆರೆ ಸಂಪರ್ಕಕೊಂಡಿ. ಬ್ರಿಟೀಷರ ಆಡಳಿತ ಬಾಂಬೆ ಕರ್ನಾಟಕಕ್ಕೆ ಮತ್ತು ನಿಜಾಮರು ಹೈದ್ರಾಬಾದ್ ಕರ್ನಾಟಕಕ್ಕೆ ಸೌಲಭ್ಯ ನೀಡಿರಲಿಲ್ಲ. ಈಗಿನ ಸರಕಾರಗಳು ಸಹ ಉತ್ತರ ಕರ್ನಾಟಕಕ್ಕೆ ಅಭಿವೃದ್ಧಿ ವಿಷಯದಲ್ಲಿ ತಾರತಮ್ಯವೆಸಗಿವೆ.
> –ಸುಭಾಷ್ ಬಿ.ಅಡಿ, ನಿವೃತ್ತ ನ್ಯಾಯಮೂರ್ತಿ

ಪುರುಷರ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ

ಚಿತ್ರದುರ್ಗ: ದುರ್ಗಾ ಸ್ಟ್ರೈಕರ್ಸ್ ವಾಲಿಬಾಲ್ ಕ್ಲಬ್ ಮತ್ತು ವಾಲಿಬಾಲ್ ಅಸೋಸಿಯೇಷನ್ ಆಫ್ ಚಿತ್ರದುರ್ಗ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ರಾಜ್ಯೋತ್ಸವ ಕಪ್ 2025ನ್ನು ನಗರದ ಒನಕೆ ಓಬವ್ವ ಕ್ರೀಡಾಂಗಣದ ಮೈದಾನದಲ್ಲಿ ಜಿಲ್ಲಾ ಮಟ್ಟದ ಪುರುಷರ ವಾಲಿಬಾಲ್ ಪಂದ್ಯಾವಳಿಯನ್ನು ಭಾನುವಾರ ಏರ್ಪಡಿಸಲಾಗಿತ್ತು.

ಚಿತ್ರದುರ್ಗ ಜಿಲ್ಲಾ ಮಟ್ಟದ ವಾಲಿಬಾಲ್ ಟೂರ್ನಿಯನ್ನು ಶ್ರೀ ಮಾದಾರ ಚನ್ನಯ್ಯ ಬಸವಮೂರ್ತಿ ಶ್ರೀಗಳು ಸ್ವಾಮೀಜಿ ಉದ್ಘಾಟಿಸಿ ಮಾತನಾಡಿ ಚಿತ್ರದುರ್ಗದಲ್ಲಿ ಕ್ರೀಡೆಗಳು ಕ್ರೀಡಾ ಚಟುವಟಿಕೆಗಳು ಬೆಳೆಯಬೇಕು ಚಿತ್ರದುರ್ಗದಲ್ಲಿ ವಿವಿಧ ರೀತಿಯ ಕ್ರೀಡೆಗಳು ವರ್ಷ ಪೂರ್ತಿಯಾಗಿ ನಡೆಯುತ್ತವೆ, ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಪಾಠದ ಜತೆಗೆ ಆಟವನ್ನು ಸಹ ಆಡುವುದರ ಮೂಲಕ ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಬೇಕಿದೆ ಎಂದರು. ಅಂತಾರಾಷ್ಟ್ರೀಯ ಕ್ರೀಡಾಪಟು ಎನ್.ಡಿ. ಕುಮಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ವಾಲಿಬಾಲ್ ಕೋಚ್ ಮಹಿಬುಲ, ಡಿವೈಎಸ್ಪಿ ರಹಮನ್ ಸೋಮಶೇಖರ್ ತಿಮ್ಮಣ್ಣ ಸಾಧಿಕು ನಿಶ್ಚಿತ್ ವೈಶಾಕ್, ತಿಪ್ಪೇಸ್ವಾಮಿ ಸಿದ್ದೇಶ್ ಮಿಲ್ಟಿ ಶಿವು ಭಾಗವಹಿಸಿದ್ದರು.

IN THE COURT OF THE PRINCIPAL CIVIL JUDGE AND J.M.F.C., PAVAGADA

O.S. No. 435/2024
PLAINTIFFS: Smt. Chandramma & Others -Versus-
DEFENDANTS: Eshwarasetty & Another
PUBLIC NOTICE / PAPER PUBLICATION
To,
Defendant No.1 & 2: 1. Y. S. Eshwarasetty, S/o Late Y. Sathyanarayanasetty, Age: 74 years. 2. Y. E. Raghu, S/o Y. S. Eshwara setty, Age: 49 years.
Both previously residing at: Obalapura Village, Y. N. Hosakote Hobli, Pavagada Taluk, Tumkur District.
Presently residing at: "Pavanasutha Nilaya", Behind Ganesh Temple, Valmiki Nagara, Challakere Town & Taluk, Chitradurga District.
WHEREAS: The plaintiffs have filed the above suit **seeking specific performa nce of:** Sale Agreement dated 25-09-1997, and Oppige Kararu Pathra dated 05-02-2009, in respect of the suit schedule property.
The case has been set down for your appearance and hearing on:
Date: 31-01-2026 Time: 11:00 A.M.
Court: Principal Civil Judge & JMFC Court, Pavagada You, Defendant No.1 & 2, are hereby called upon to appear before this Court either in person or through an Advocate. If you fail to appear, the matter will be heard and decided ex-parte. Given under my hand and seal of the Court, this day of 28-11- 2025.
By Order,
Sheristedar,
Office of the Principal Civil Judge, Pavagada.
Advocate for Plaintiffs:
B. A. Puttarajaiah
Advocate, Pavagada.
Date: 24/11/2025

ಸಮಾಚಾರ ಸಣ್ಣದಲ್ಲ

ಜಂಗಮ ಸಮಾಜದ ಮಾಸಿಕ ಶಿವಾನುಭವ

ನರಗುಂದ: ತಾಲೂಕು ಜಂಗಮ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಪಟ್ಟಣದ ಪಂಚಗ್ರಹ ಗುಡ್ಡದ ಹಿರೇಮಠದಲ್ಲಿ ಸಿದ್ಧಾಂತ ಶಿಖಾಮಣಿ ಎರಡನೇ ಮಾಸಿಕ ಶಿವಾನುಭವ ಜರುಗಿತು. ಶಿಕ್ಷಕ ಶಿವಯ್ಯ ಅಲ್ಲಮಪ್ರಭುಮಠ ಅವರು ಅಧ್ಯಕ್ಷತೆ ವಹಿಸಿದ್ದರು. ದೀಪಾ ಗವಿಮಠ ಅವರು ಭಕ್ತ ಸ್ಥಲವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಜಗದೀಶ ಗವಿಮಠ, ವೀರಯ್ಯ ಹಿರೇಮಠ, ಲತಾ ಹಡಗಲಿಮಠ, ಲತಾ ಹುಬ್ಬಳ್ಳಿಮಠ, ಶೃತಿ ಹುಬ್ಬಳ್ಳಿ, ಲತಾ ಗುಡ್ಡಾಪೂರಮಠ, ಕವಿತಾ ವಸ್ತ್ರದ, ಲತಾ ಅಲ್ಲಮಪ್ರಭುಮಠ, ಶಾರದಾ ಹಿರೇಮಠ, ಶಾಂಭವಿ ಗವಿಮಠ, ಕಾಳಮ್ಮ ಮತ್ತು ಸಮಾಜ ಬಾಂಧವರು ಹಾಗೂ ಶ್ರೀಮಠದ ಪಾಠಶಾಲೆ ವಟುಗಳು ಪಾಲ್ಗೊಂಡಿದ್ದರು. ಕುಮಾರ ಗುರಪ್ಪಗೌಡ್ರ ಕಾರ್ಯಕ್ರಮ ನಿರೂಪಿಸಿದರು, ನಂದಾ ಗುಡ್ಡಾಪೂರಮಠ ವಂದಿಸಿದರು.

ಚಿರತೆ ಹಾವಳಿಗೆ ಕೃಷಿ ಕೆಲಸವೇ ನಿಲ್ಲಿಸಿದ ರೈತರು

ಹಾವೇರಿ: ನಗರದ ಸಮೀಪದಲ್ಲಿರುವ ಕನಕಾಪುರ ಗ್ರಾಮದ ಹೊಂಬರಡಿಗೆ ಕಡೆಗೆ ಹೋಗುವ ತುಂಗಭದ್ರಾ ಚಾನಲ್ ಬಳಿ ಒಂದು ವಾರದ ಹಿಂದೆ ಚಿರತೆಯೊಂದು ಕಾಣಿಸಿಕೊಂಡ ಹಿನ್ನೆಲೆ ರೈತರಲ್ಲಿ ಭಯದ ಕಾಡುತ್ತಿದ್ದು ಮಾಗಿದ ಬೆಳೆ ಕಟಾವಿಗೂ ಹೊಲದ ಕಡೆಗೆ ಹೋಗದಂತಾಗಿದ್ದಾರೆ. ಚಿರತೆ ಕಾಣಿಸಿಕೊಂಡ ಬಗ್ಗೆ ಹಾವೇರಿ ವಲಯ ಅರಣ್ಯ ಅಧಿಕಾರಿಗಳಿಗೆ ದೂರು ನೀಡಲಾಗಿದ್ದು ಇಲಾಖೆಯವರು ಚಿರತೆ ಇರುವ ಬಗ್ಗೆ ಖಚಿತ ಪಡಿಸಿಕೊಂಡು ಬೋನ್ ಕೂಡಾ ಇಟ್ಟಿದ್ದು ಚಿರತೆ ಮಾತ್ರ ಪತ್ತೆಯಾಗಿಲ್ಲ. ಅರಣ್ಯ ಇಲಾಖೆಯವರು ಚಿರತೆ ಪತ್ತೆಗೆ ನಿರ್ಲಕ್ಷ್ಯ ತೋರಿದ್ದಾರೆ. ಬೋನ್ ಇಟ್ಟು ಮೇಲೆ ಅರಣ್ಯ ಇಲಾಖೆಯವರು ತಿರುಗಿ ಆ ಜಾಗಕ್ಕೆ ಬಂದು ಪರಿಶೀಲನೆಯೂ ಮಾಡುತ್ತಿಲ್ಲ. ಮನುಷ್ಯರು ಮತ್ತು ದನಕರುಗಳ ಮೇಲೆ ದಾಳಿ ಮಾಡಿ ಜೀವ ಹಾನಿಯಾದರೆ ಅರಣ್ಯ ಇಲಾಖೆಯವರೇ ನೇರ ಹೊಣೆಗಾರಿಕೆ ಮಾಡಬೇಕಾಗುತ್ತದೆ. ತಕ್ಷಣವೇ ಅರಣ್ಯ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಸಿಬ್ಬಂದಿ ನೇಮಿಸಿ ಚಿರತೆ ಪತ್ತೆ ಮಾಡಬೇಕು. ಇಲ್ಲದಿದ್ದರೆ ಅರಣ್ಯ ಇಲಾಖೆಯ ಕಚೇರಿ ಮುಂದೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ರೈತ ಸಂಘದ ಅಧ್ಯಕ್ಷ ಪಕ್ಕೀರಗೌಡ ಗಾಜೀಗೌಡ್ರ ಎಚ್ಚರಿಕೆ ನೀಡಿದ್ದಾರೆ.

ಬಂಡಲದಲ್ಲಿ ಹಿಂದೂ ಸಮ್ಮೇಳನ| ಆದಿಚುಂಚನಗಿರಿ ಶಾಖಾ ಮಠದ ನಿಶ್ಚಲಾನಂದನಾಥ ಶ್ರೀ ಹೇಳಿಕೆ

ವಿವಾಹ ಎಂದರೆ ಮನಸ್ಸುಗಳ ಕೂಡುವಿಕೆ

ಶಿರಸಿ: ತಂದೆ-ತಾಯಿಯರು ತಮ್ಮ ಮಕ್ಕಳನ್ನು ತಮ್ಮ ಮಡಿಲಲ್ಲೇ ಬೆಳೆಸಿ ಸಂಸ್ಕಾರ ನೀಡಬೇಕೇ ಹೊರತಾಗಿ ಗಾಂಧಾರಿಯಂತೆ ಕಣ್ಣು ಕಟ್ಟಿಕೊಂಡು ಯಾರದೊ ಜತೆಗೆ ಮಕ್ಕಳನ್ನು ಬೆಳೆಸಬಾರದು.ನಾವು ಸಂಸ್ಕಾರದ ಬದುಕಿನಿಂದ ದೂರ ಆದರೆ ಅದರ ಪರಿಣಾಮ ನಮ್ಮ ಮುಂದಿನ ತಲೆಮಾರಿಗೂ ಆಗುತ್ತದೆ. ಸನಾತನ ಧರ್ಮದ ಅನುಸಾರ ನಾವು ಜೀವನ ಪದ್ಧತಿ ಕಂಡುಕೊಳ್ಳಬೇಕು ಎಂದು ಮಿರ್ಜಾನಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲೂಕಿನ ಬಂಡಲದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಹಿಂದೂ ಸಮ್ಮೇಳನದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಸನಾತನ ಸಂಸ್ಕೃತಿಯಲ್ಲಿ ವಿವಾಹ ಎಂದರೆ ಮನಸ್ಸುಗಳ ಕೂಡುವಿಕೆ. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ವಿವಾಹದ ಅರ್ಥವೇ ಬೇರೆ. ನಾವು ಪಾಶ್ಚಿಮಾತ್ಯ ಪದ್ಧತಿಯ ವಿವಾಹ ಅಳವಡಿಸಿಕೊಳ್ಳುವುದರಿಂದ ಬದುಕು ಬರುಡಾಗುತ್ತದೆ. ಜೀವನದಲ್ಲಿ ಎಷ್ಟೇ ಕಷ್ಟ ಕಾರ್ಪಣ್ಯ ಬಂದರೂ ದೇವರ ಪಾದಕ್ಕೆ ಅದನ್ನೆಲ್ಲ ಅರ್ಪಣೆ ಮಾಡಿ ಮಾರನೇ ದಿನ ಎಲ್ಲ ಮರೆಯುವ ಸಂಪ್ರದಾಯ ನಮ್ಮದು. ಈಗ ಕಾಲ ಬದಲಾಗಿದೆ. ಇಂದು ಮನೆಯ ದ್ವೇಷ, ವಿರೋಧಗಳನ್ನು ಅಕ್ಕ ಪಕ್ಕದ ಮನೆಯವರಿಗೆ ಮೊದಲು ಹೇಳುವ ಸಂಪ್ರದಾಯ ಬಂದಿದೆ.

ಹಿಂದೂ ಸಮ್ಮೇಳನದಲ್ಲಿ ಮಿರ್ಜಾನಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿದರು.

ಇದರಿಂದಾಗಿ ಗಂಡ ಹೆಂಡತಿ ನಡುವೆ ಇನ್ನಷ್ಟು ಅಂತರವಾಗಿ ವಿಚ್ಛೇದನಕ್ಕೆ ದಾರಿ ಆಗುತ್ತದೆ. ನಮ್ಮ ನೋವು ನಲಿವನ್ನು ಭಗವಂತನ ಪಾದಕ್ಕೆ ಸಲ್ಲಿಸಿದರೆ ಎಲ್ಲ ಕಷ್ಟಗಳೂ ದೂರ ಆಗುತ್ತವೆ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಕಾರ್ಯನಿರ್ವಾಹ ಶ್ರೀಕಾಂತ ಅಗಸಾಲ ದಿಕ್ಸೂಚಿ ಮಾತನಾಡಿ, ಮನುಷ್ಯ ಜೀವನದಲ್ಲಿ ಅತ್ಯಂತ ಶ್ರೇಷ್ಠ ಜನ ಹಿಂದುಗಳಾಗಿದ್ದಾರೆ. ತಾನೊಬ್ಬನೇ ಅಲ್ಲ, ಸಮಸ್ತ ಸಮುಷ್ಠಿ ಸುಖದಿಂದ ಬದುಕಲಿ ಎಂದು ಆಶಿಸುವವನು ಹಿಂದು. ನಮ್ಮ ಪೂರ್ವಜರು ಜಗತ್ತಿಗೇ ಒಳ್ಳೆಯದಾಗಲಿ ಎಂದು ತಮ್ಮ ಬದುಕಿನ ಮಾರ್ಗವನ್ನು ಆಯ್ದುಕೊಳ್ಳುತ್ತಿದ್ದರು. ಪ್ರತಿ ಜೀವಿಯಲ್ಲೂ ದೇವರನ್ನು ಕಾಣುವ ಸಂಪ್ರದಾಯ ನಮ್ಮದು. ಆದರೆ, ಹಿಂದುಗಳನ್ನು ಒಡೆದು ಆಳುವ ನೀತಿ ಹಿಂದಿನಿಂದಲೂ ಬಂದಿದೆ. ಈ ರೀತಿ ಒಡೆಯುವ ಮೂಲಕ ಬ್ರಿಟೀಷರು ಇನ್ನೂ ನೂರು ವರ್ಷ ಆಳುವ ಹುನ್ನಾರ ನಡೆಸಿದ್ದರು. ಹಿಂದುಗಳ ಆಚರಣೆ ಇಡೀ ದೇಶದಲ್ಲಿ ಭಿನ್ನತೆ ಇರಬಹುದು, ಆದರೆ ನಮ್ಮೆಲ್ಲರ ನಂಬಿಕೆ ಒಂದೇ. ನಮ್ಮ ಪೂರ್ವಜರು ಜಗತ್ತಿಗೆ ನೀಡಿದ ಕೊಡುಗೆ ಸದಾ ಕಾಲ ನೆನಪಿಡುವಂತದ್ದು ಎಂದರು.

ಇದೇ ವೇಳೆ ನಾಟಿ ವೈದ್ಯರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರಾದ ಲಕ್ಷ್ಮೀ ಗೌಡ ಕಳಕಾರ, ಹೇಮಾವತಿ ಗೌಡ ಬಡಗಿ, ಪಾರ್ವತಿ ಮರಾಠೆ, ಗಂಗಾ ಸೀತಾರಾಮ ಹೆಗಡೆ, ರಾಘವೇಂದ್ರ ಕೊಡಿಯಾ ಇತರರನ್ನು ಸನ್ಮಾನಿಸಲಾಯಿತು.

ಜಡೆ ಸಂಸ್ಥಾನ ಮಠದ ಶ್ರೀ ಡಾ. ಮಹಾಂತ ಸ್ವಾಮೀಜಿ, ಶ್ರೀ ಕ್ಷೇತ್ರ ಮಂಜುಗುಣಿಯ ಪ್ರಧಾನ ಅರ್ಚಕ ವೇ.ಮೂ. ಶ್ರೀನಿವಾಸ ಭಟ್, ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ಭವ್ಯಾ ಮರಾಠಿ, ಬಂಡಲ ಗ್ರಾ ಪಂ ಅಧ್ಯಕ್ಷ ದೇವರಾಜ ಮರಾಠಿ, ಮಂಜುನಾಥ ಮರಾಠಿ ಹೊಸ್ಕೆರೆ ಇತರರಿದ್ದರು. ಸಂಚಾಲಕ ಸಂತೋಷ ಗೌಡರ್ ಸ್ವಾಗತಿಸಿದರು.

> ಮಕ್ಕಳಿಗೆ ಶಿಕ್ಷಣ ಅತ್ಯಗತ್ಯ. ಶಿಕ್ಷಣದೊಂದಿಗೆ ಸಂಸ್ಕಾರವನ್ನೂ ನೀಡಬೇಕು. ಸಂಸ್ಕಾರ ನೀಡುವಿಕೆಯಲ್ಲಿ ತಾಯಂದಿರ ಪಾತ್ರ ಅತಿ ಮುಖ್ಯವಾಗುತ್ತದೆ. ಮಕ್ಕಳು ಅಪ್ಪ ಅಮ್ಮ ಏನು ಮಾಡುತ್ತಾರೆ ಅದನ್ನು ನೋಡಿ ಕಲಿಯುತ್ತಾರೆ. ಮಕ್ಕಳು ಎಂದಿಗೂ ಹೇಳಿದ್ದನ್ನು ಅನುಸರಿಸುವ ಬದಲು ನೋಡಿದ್ದನ್ನು ಅನುಸರಿಸುವುದು ಜಾಸ್ತಿ. ಮಕ್ಕಳ ಮುಂದೆ ಪಾಲಕರು ಶ್ರದ್ಧೆಯಿಂದ ಬದುಕಿ ತೋರಿಸಬೇಕು.
> -ನಿಶ್ಚಲಾನಂದನಾಥ ಶ್ರೀ, ಶಾಖಾ ಮಠ

ಡಿ.6ಕ್ಕೆ ಅರಣ್ಯವಾಸಿಗಳ ಒಗ್ಗಟ್ಟು ಪ್ರದರ್ಶನಕ್ಕೆ ಸಿದ್ಧತೆ

ಶಿರಸಿ: ಕಾನೂನಿನ ಸಂಕೋಲೆಯಲ್ಲಿ ಸಿಲುಕಿ, ಸಾಗುವಳಿ ಹಕ್ಕಿನಿಂದ ವಂಚಿತರಾಗಿರುವ ಅರಣ್ಯವಾಸಿಗಳು ಕಾರವಾರದಲ್ಲಿ ಡಿ.6 ರಂದು ಸಂಘಟಿಸಲಾದ ಕಾರವಾರ ಚಲೋದಲ್ಲಿ ಜಿಲ್ಲೆಯ ಅರಣ್ಯವಾಸಿಗಳು ಒಗಟ್ಟನ್ನು ಪ್ರದರ್ಶಿಸಲು ಜಿಲ್ಲಾದ್ಯಂತ ಬರದಿಂದ ಕಾರ್ಯ ಪ್ರಾರಂಭವಾಗಿದೆ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಶಿರಸಿಯ ಅರಣ್ಯ ಭೂಮಿ ಹೋರಾಟಗಾರರ ಕಾರ್ಯಾಲಯದಲ್ಲಿ ಡಿ.6 ರಂದು ಕಾರವಾರ ಚಲೋ ಕಾರ್ಯಕ್ರಮಕ್ಕೆ ಸಂಬಂಧಿಸಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡುತ್ತಾ ಮೇಲಿನಂತೆ ಹೇಳಿದರು.

ಅರಣ್ಯ ಭೂಮಿ ಹಕ್ಕಿನ ಹೋರಾಟವೂ ಸಾಗುವಳಿ ಹಕ್ಕಿಗೆ ಸಂಬಂಧಿಸಿ ನಿರ್ಣಾಯಕ ಘಟಕ್ಕೆ ತಲುಪಿದ್ದು ಇರುತ್ತದೆ. ಈ ಹಿನ್ನಲೆಯಲ್ಲಿ ಜರುಗುತ್ತಿರುವ ಬೆಳಗಾಂವ್ ಚಳಿಗಾಲ ಅಧಿವೇಶನದಲ್ಲಿ ಅರಣ್ಯವಾಸಿಗಳ ಪರ ಸರಕಾರ ನಿರ್ದಿಷ್ಟ ತೀರ್ಮಾನವನ್ನ ಪ್ರಕಟಿಸುವುದೆಂಬ ನೀರಿಕ್ಷೆಯಲ್ಲಿ ಅರಣ್ಯವಾಸಿಗಳು ಇರುವರೆಂದು ಅವರು ಆಶಯವನ್ನು ವ್ಯಕ್ತಪಡಿಸಿದರು. ಇತ್ತೀಚಿನ ಸುಪ್ರೀಂ ಕೋರ್ಟನ ಆದೇಶವು ಅರಣ್ಯವಾಸಿಗಳ ಸಾಗುವಳಿಗೆ ಸಂಭಂದಪಟ್ಟಂತೆ ವ್ಯತಿರಿಕ್ತವಾದ ಆದೇಶಗಳು ಬರುತ್ತೀರುವುದರಿಂದ ಅರಣ್ಯವಾಸಿಗಳಲ್ಲಿ ಕಾನೂನಾತ್ಮಕ ಜಾಗೃತೆ ಉಂಟು ಮಾಡುವ ಉದ್ದೇಶದಿಂದ ಜಿಲ್ಲಾದ್ಯಂತ ಕಾನೂನು ಜಾಗೃತ ಜಾಥಾ ಸಂಘಟಿಸಲಾಗುತ್ತಿದೆ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಸಂಚಾಲಕರಾದ ಇಬ್ರಾಹೀಂ ಗೌಡಳ್ಳಿ, ರಫೀಕ್, ಲಕ್ಷ್ಮಣ ನಾಯ್ಕ, ಜಯಶ್ರೀ ನಾಯ್ಕ, ಮಾಬ್ಲೇಶ್ವರಂ ಟಿ ನಾಯ್ಕ ಹೊನ್ನಾವರ, ಲಕ್ಷ್ಮಣ ಗೌಡ, ಸುರೇಶ ಲಕ್ಷ್ಮಣ ಗೌಡ, ಮಾದೇವ ಪಟಗಾರ, ಶಾರದಾ ಕಿರಣ ನಾಯ್ಕ, ಪಾರ್ವತಿ ಪಟಗಾರ, ನಾಗಪ್ಪ ಕರೆಗುಂಡಿ, ಮರ್ಯ ಕುಂಬಾರಗುಣಿ, ಕುಮಾರ್ ಮುತ್ತುಂಡರ್, ನಿಂಗಪ್ಪ ಕಾಳೆನಾರ್, ಪ್ರಶಾಂತ್ ನಾಯ್ಕ, ಗಣಪತಿ ಪುಟ್ಟಾರಮನೆ, ಆನಂದ ಗಡಗೇರ, ಸತೀಶ್ ಕರೆಗುಂಡಿ, ಕುಮಾರ ಕರೆಗುಂಡಿ ಉಪಸ್ಥಿತರಿದ್ದರು.

ಕಾರವಾರ ಚಲೋ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ಅಧ್ಯಕ್ಷ ರವೀಂದ್ರ ನಾಯ್ಕ ಪೋಸ್ಟರ್ ಬಿಡುಗಡೆಗೊಳಿಸಿದರು.

ಶಿರಸಿಯಲ್ಲಿ 13,639 ಅರ್ಜಿ ತಿರಸ್ಕಾರ

ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಶಿರಸಿ ತಾಲೂಕಾದ್ಯಂತ 15,323 ಅರ್ಜಿಗಳು ಅರಣ್ಯವಾಸಿಗಳು ದಾಖಲಿಸಿದ್ದು, ಅವುಗಳಲ್ಲಿ, 13,639 ಅರ್ಜಿಗಳು ತಿರಸ್ಕಾರವಾಗಿದೆ. ಬಂದಿರುವಂತ ಅರ್ಜಿಗಳಲ್ಲಿ 415 ಅರ್ಜಿಗಳಿಗೆ ಮಾತ್ರ ಮಾನ್ಯತೆ ದೊರಕಿರುತ್ತದೆ. ಬುಡಕಟ್ಟು ಜನಾಂಗ 62, ಪಾರಂಪರಿಕ ಅರಣ್ಯವಾಸಿಗಳು 167 ಹಾಗೂ ಸಮೂಹ ಉದ್ದೇಶಕ್ಕೆ 186 ಅರ್ಜಿಗಳಿಗೆ ಮಾನ್ಯತೆ ದೊರಕಿರುತ್ತದೆ. ಶಿರಸಿ ತಾಲೂಕಾದ್ಯಂತ ಶೇ.89.00 ರಷ್ಟು ಅರ್ಜಿಗಳು ತಿರಸ್ಕಾರಗೊಂಡಿರುವುದು ವಿಷಾಧಕರವೆಂದು ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಶಿರಸಿಯ ಉಡುಪಿ ಜಿಲ್ಲೆಯ ಪ್ರೌಢ ಶಾಲಾ ಸಮಸ್ತ ಕನ್ನಡ ಭಾಷಾ ಶಿಕ್ಷಕರ ಸಂಘವು ಕಾರ್ಕಳದಲ್ಲಿ ನಡೆಸಿದ ಸಮಾರಂಭದಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಶಿರಸಿಯ ನಾರಾಯಣ ಪರಮೇಶ್ವರ ಭಾಗ್ವತ್ ಅವರಿಗೆ ಕನ್ನಡ ಜ್ಞಾನ ನೇಸರ ಬಿರುದು ನೀಡಿ ಗೌರವಿಸಲಾಯಿತು.

ಗುಡ್ಡಗಾಡು ಓಟದ ಸ್ಪರ್ಧೆ ನಾಳೆ

ಕಲಘಟಗಿ: ತಾಲೂಕಿನ ದಾಸ್ತಿಕೊಪ್ಪ ಗ್ರಾಮದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಿ.2, 3ರಂದು ಕರ್ನಾಟಕ ವಿಶ್ವವಿದ್ಯಾಲಯದ ಏಕಲವ್ಯ ಪುರುಷ, ಮಹಿಳಾ ಗುಡ್ಡಗಾಡು ಓಟದ ಸ್ಪರ್ಧೆಗಳ ತಂಡದ ಆಯ್ಕೆ ಜರುಗಲಿದೆ.

ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ಸ್ಪರ್ಧಾಳುಗಳು ತಮ್ಮ ವಿದ್ಯಾಲಯದ ಪ್ರಾಚಾರ್ಯರು ದೃಢೀಕರಿಸಿದ ಅರ್ಹತಾ ಪಟ್ಟಿ ಹಾಗೂ ವೈದ್ಯಕೀಯ ಸದೃಢತೆ ಪ್ರಮಾಣಪತ್ರದೊಂದಿಗೆ ಭಾಗವಹಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 77600 24060 ಸಂಪರ್ಕಿಸಬಹುದು.

ಸಮಾಚಾರ ಸಣ್ಣದಲ್ಲ

ಸಂವಿಧಾನ ಜಾಗೃತಿಗಾಗಿ ಭೀಮನೆಡೆ ಅಭಿಯಾನ

ಕಲಬುರಗಿ: ಬಿಜೆಪಿ ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಘಟಕದ ವತಿಯಿಂದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಮೋರ್ಚಾಗಳಿಂದ ಸಂವಿಧಾನ ಜಾಗೃತಿಗಾಗಿ ಭೀಮನೆಡೆ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಭಿಯಾನದಲ್ಲಿ ಸಂವಿಧಾನ ದುರ್ಬಳಕೆಯ ಕಾಂಗ್ರೆಸ್ ಇತಿಹಾಸದ ಅನಾವರಣ ಮಾಡಲಾಗುವುದು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿಯಿಂದ 2015ರಿಂದ ಪ್ರತಿವರ್ಷ ನ.26ರಿಂದ ಡಿಸೆಂಬರ್ 6ರವರೆಗೆ ಅಂದರೆ ಸಂವಿಧಾನ ಮಂಡನೆಯಾದ ದಿನದಿಂದ ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನದವರೆಗೆ ರಾಜ್ಯಾದ್ಯಂತ ಸಂವಿಧಾನ ಜಾಗೃತಿ ಸಪ್ತಾಹ ನಡೆಸಲಾಗುತ್ತಿದೆ. ಕಳೆದ ಸಲ ಜನವರಿ 26ರವರೆಗೆ ಎರಡು ತಿಂಗಳು ರಾಷ್ಟ್ರದಾದ್ಯಂತ ಅಭಿಯಾನ ಮಾಡಲಾಗಿದೆ ಎಂದರು.

ಮಗುವಿಗೆ ಜನ್ಮ ನೀಡಿದ ಬಾಲಕಿ: ಆರೋಪಿ ಸೆರೆ

ತುಮಕೂರು: ಕುಣಿಗಲ್ ತಾಲೂಕಿನ ಹುಲಿಯೂರುದುರ್ಗ ಹೋಬಳಿಯ ಗ್ರಾಮವೊಂದರ ಬಾಲಕಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಬಾಲಕಿ ಗರ್ಭಿಣಿಯಾಗಲು ಕಾರಣವಾದ ಆರೋಪದ ಮೇಲೆ 44 ವರ್ಷದ ಮಲ್ಲೇಶ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಆಗಸ್ಟ್‌ನಲ್ಲಿ ಪೋಷಕರು ಬಾಲಕಿಯನ್ನು ಚಿಕಿತ್ಸೆಗೆಂದು ಆಸ್ಪತ್ರೆಗೆ ಕರೆದುಕೊಂಡು ಹೋದಾಗ 7 ತಿಂಗಳ ಗರ್ಭಿಣಿಯಾಗಿರುವುದು ತಿಳಿದಿದೆ. ನವೆಂಬರ್ 18ರಂದು ಮಗು ಜನಿಸಿದೆ. ಪೊಲೀಸರು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು. ತಲೆ ಮರೆಸಿಕೊಂಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬೀದರ್‌ನಲ್ಲಿ ಹಮ್ಮಿಕೊಂಡಿದ್ದ ಮರಾಠಾ ಸ್ವಾಭಿಮಾನಿ ಸಮಾವೇಶದಲ್ಲಿ ಸಚಿವ ಸಂತೋಷ್ ಲಾಡ್

ಛತ್ರಪತಿ ಶಿವಾಜಿ ಜಗತ್ತಿನ ದೊಡ್ಡ ಜಾತ್ಯತೀತ ನಾಯಕ

ಬೀದರ್: ಛತ್ರಪತಿ ಶಿವಾಜಿ ಮಹಾರಾಜ ಅವರು ಜಗತ್ತಿನ ಅತಿದೊಡ್ಡ ಜಾತ್ಯತೀತ ನಾಯಕರಾಗಿದ್ದರು. ಅವರು ಮೊಘಲರ ವಿರುದ್ಧ ಹೋರಾಡಿದರೇ ಹೊರತು ಮುಸ್ಲಿಮರ ವಿರುದ್ಧ ಅಲ್ಲ. ಇದನ್ನು ಮರಾಠಿಗರು ಅರಿತುಕೊಳ್ಳಬೇಕು. ಶಿವಾಜಿ ಅವರ ಸಮಾಧಿ ಪತ್ತೆ ಹಚ್ಚಿದ್ದು ಜ್ಯೋತಿಬಾ ಫುಲೆ. ಶಿವಾಜಿಯವರಷ್ಟೇ ಜ್ಯೋತಿಬಾ ಫುಲೆ ಅವರಿಗೂ ಗೌರವ ಕೊಡಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಇಲ್ಲಿನ ಗಣೇಶ್ ಮೈದಾನದಲ್ಲಿ ಭಾನುವಾರ ಏರ್ಪಡಿಸಿದ್ದ ಜಿಲ್ಲಾಮಟ್ಟದ ಮರಾಠಾ ಸ್ವಾಭಿಮಾನಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 1902ರಲ್ಲಿ ಶಾಹು ಮಹಾರಾಜ್ ಅವರು ದೇಶದಲ್ಲಿ ಮೊದಲ ಬಾರಿಗೆ ಮೀಸಲಾತಿ ಜಾರಿಗೆ ತಂದರು. ಶಾಹು ಮಹಾರಾಜ್, ಗಾಯಕವಾಡ್ ಮಹಾರಾಜ್ ಅವರ ಸಹಾಯದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೊರದೇಶಕ್ಕೆ ಹೋಗಿ ವ್ಯಾಸಂಗ ಮಾಡಿದರು. 36 ಪದವಿ ಪಡೆದರು. ಬಸವಣ್ಣ ಜಗತ್ತಿನ ಅತಿದೊಡ್ಡ ಸಮಾಜ ಸುಧಾರಕ. ಈ ಎಲ್ಲ ಮಹಾನ್ ಪುರುಷರಿಗೆ ಮರಾಠಾ ಸಮಾಜದವರು ಗೌರವ ಕೊಡುವುದರ ಜತೆಗೆ ಅವರ ಜಯಂತಿ ಆಚರಿಸಿದರೆ, ಆ ಸಮುದಾಯದವರು ಶಿವಾಜಿಯವರ ಜಯಂತಿ ಆಚರಿಸುತ್ತಾರೆ, ಸಹೋದರತ್ವ ಬೆಳೆಯುತ್ತದೆ ಎಂದು ಹೇಳಿದರು.

ಮರಾಠಾ ಸಮಾಜವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಏಳಿಗೆ ಹೊಂದಬೇಕು. ಈ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದರೆ ರಾಜಕೀಯವಾಗಿ ಮೇಲೆ ಬರಬಹುದು. ಜೀಜಾಮಾತಾ ಹೆಸರಿನಲ್ಲಿ ತಕ್ಷಣವೇ ಒಂದು ಟ್ರಸ್ಟ್ ಸ್ಥಾಪಿಸಿ, ನೋಂದಣಿ ಪ್ರಕ್ರಿಯೆ ಆರಂಭಿಸಬೇಕು. ಅದಕ್ಕೆ ನನ್ನ ಫೌಂಡೇಶನ್‌ನಿಂದ

ಸಮಾವೇಶದಲ್ಲಿ ಸಚಿವ ಸಂತೋಷ್ ಲಾಡ್ ಮಾತನಾಡಿದರು.

ಎಲ್ಲ ರೀತಿಯ ಅಗತ್ಯ ನೆರವು ನೀಡಲಾಗುವುದು. ನಾವು ಮೇಳ ಆಯೋಜಿಸಿ, ಘೋಷಣೆ ಕೂಗುವುದು, ಜನ ಸೇರಿಸುವುದಕ್ಕೆ ಸೀಮಿತರಾಗಬಾರದು. ಸಮಾಜವನ್ನು ಸಂಘಟಿಸಿ, ಮರಾಠಾ ಸಮಾಜದ ಬಡವರು, ಶೋಷಿತರನ್ನು ಮೇಲೆತ್ತುವ ಕೆಲಸ ಮಾಡಬೇಕು. ಬೀದರ್‌ನಲ್ಲಿ ಈ ದಿನ ಐತಿಹಾಸಿಕ ಸಮಾವೇಶ ನಡೆದಿದೆ. ನಿಜಕ್ಕೂ ಇದೊಂದು ಮಾದರಿ. ಈ ಮಾದರಿಯನ್ನು ರಾಜ್ಯಾದ್ಯಂತ ವಿಸ್ತರಿಸಿ, ಮುಂಬರುವ ದಿನಗಳಲ್ಲಿ ಸಮಾಜದವರನ್ನು ಸಂಘಟಿಸಲು ಪ್ರಯತ್ನಿಸುತ್ತೇನೆ. ಸಮಾಜದ ಪ್ರತಿಯೊಬ್ಬರೂ ಸಮಾಜಕ್ಕಾಗಿ ಕೆಲಸ ಮಾಡಬೇಕು. ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಹತ್ತು ವರ್ಷಗಳಲ್ಲಿ ಬದಲಾವಣೆ ಕಾಣಬಹುದು ಎಂದು ಹೇಳಿದರು.

ದಾದಾ ಮಹಾರಾಜ್ ನಗರಕರ್ ಅವರು ಪುಣೆ ಬಿಟ್ಟು ಬೀದರ್‌ನಲ್ಲಿ ಮಠ ಸ್ಥಾಪಿಸಬೇಕು. ಎರಡ್ಮೂರು ಎಕರೆ ಜಾಗ ಖರೀದಿಸಿ ಇಲ್ಲಿ ಸಮಾಜದ ಒಳಿತಿಗಾಗಿ ಕೆಲಸ ಮಾಡಬೇಕು. ಗುರುಗಳು ಮರಾಠರು ಸೇರಿದಂತೆ ಎಲ್ಲರನ್ನೂ ಜತೆಗೆ ಕರೆದೊಯ್ಯಬೇಕು. ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ದಾದಾ ಮಹಾರಾಜ್ ನಗರಕರ್ ಮಾತನಾಡಿ, ಶಿವಾಜಿ ಮಹಾರಾಜರ ಆಚಾರ-ವಿಚಾರಗಳನ್ನು ಪ್ರತಿಯೊಬ್ಬರೂ ಅನುಸರಿಸಬೇಕು. ಅವರ ತತ್ವಾದರ್ಶಗಳ ಪ್ರಚಾರಕ್ಕೆ ಮಠ ಸ್ಥಾಪಿಸುವ ಅಗತ್ಯವಿದೆ ಎಂದು ಹೇಳಿದರು.

ಕರ್ನಾಟಕ ಕ್ಷತ್ರೀಯ ಮರಾಠಾ ಪರಿಷತ್ ಅಧ್ಯಕ್ಷ ಸುರೇಶ ಸಾಠೆ, ಮರಾಠ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ದಿಗಂಬರರಾವ್ ಮಾನಕಾರಿ, ಮುಖಂಡರಾದ ಅನಿಲ್ ವಾಡೇಕರ್, ವಸಂತರಾವ್ ನಗ್ಡೆ, ದೇವಾನಂದ ಬಗದೂರೆ, ನಾರಾಯಣ ಗಣೇಶ್, ಬಾಬುರಾವ್ ಕಾರಬಾರಿ, ಶಿವಾಜಿರಾವ್ ಪಾಟೀಲ್ ಇಂಚೂರ್, ಪ್ರಕಾಶ್ ಪಾಟೀಲ್, ಅನಿಲ್ ಭೂಸಾರೆ, ಕಾಳಿ, ಪ್ರಭಾವತಿ, ಅನಿಲ್ ಶಿಂಧೆ, ಪ್ರದೀಪ್ ಮತ್ತಿತರರು ಇದ್ದರು. ಕಾರ್ಯಕ್ರಮಕ್ಕೂ ಮುನ್ನ ಮುಖಂಡರು ಶಿವಾಜಿ ಮಹಾರಾಜ್ ವೃತ್ತದಲ್ಲಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವಿಸಿದರು.

ಮುಖ್ಯಮಂತ್ರಿ ಆಗುವುದು ನನಗೆ ಬೇಕಿಲ್ಲ. ಅದರಲ್ಲಿ ನನಗೆ ಆಸಕ್ತಿಯೂ ಇಲ್ಲ. ನಾಲ್ಕು ಸಲ ಶಾಸಕನಾಗಿ, ಮೂರು ಸಲ ಸಚಿವನಾಗಿ ಕೆಲಸ ಮಾಡಿದ್ದೇನೆ. ರಾಜಕಾರಣ ಮಾಡದಿದ್ದರೂ ನಾನು ಆರಾಮಾಗಿ ಇರಬಹುದು. ಮರಾಠಾ ಸಮಾಜ ಬಹಳ ಕಷ್ಟದಲ್ಲಿದೆ. ಅದನ್ನು ಮೇಲೆತ್ತುವ ಕೆಲಸ ಆಗಬೇಕಿದೆ. ಈ ಕಾರ್ಯಕ್ರಮದ ಉದ್ದೇಶವೂ ಅದೇ. ಇದು ಶಕ್ತಿ ಪ್ರದರ್ಶನದ ಕಾರ್ಯಕ್ರಮವಲ್ಲ, ಒಗ್ಗಟ್ಟು ಪ್ರದರ್ಶಿಸುವುದು.

– ಸಂತೋಷ್ ಲಾಡ್ ಸಚಿವ

ಇಡೀ ದೇಶದಲ್ಲೇ ಮರಾಠಾ ಸಮಾಜ ಬಹಳ ಹಿಂದುಳಿದಿದೆ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಸಮಾಜವನ್ನು ಮೇಲೆತ್ತಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಹಂತ ಹಂತವಾಗಿ ರಾಜ್ಯಾದ್ಯಂತ ಸಮಾಜವನ್ನು ಸಂಘಟಿಸುವ ಕೆಲಸ ಮಾಡಲಾಗುವುದು.

– ಜಿ.ಎಚ್.ಮರಿಯೋಜಿರಾವ್
ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ

ಬಿಜೆಪಿಗೆ ಸರಕಾರ ಬೀಳಿಸಿ ಲೂಟಿ ಮಾಡುವ ಯೋಚನೆ

ಬೀದರ್: ಬಿಜೆಪಿಗರಿಗೆ ರಾಜ್ಯದಲ್ಲಿ ಬೇಗ ಅಧಿಕಾರಕ್ಕೆ ಬರುವ ಆತುರವಿದೆ. ಕೇಂದ್ರದಲ್ಲೂ ಲೂಟಿ ಮಾಡುತ್ತಿದ್ದು, ರಾಜ್ಯದಲ್ಲಿ ನಮ್ಮ ಸರಕಾರ ಬೀಳಿಸಿ ರಾಜ್ಯ ಲೂಟಿ ಮಾಡುವ ಯೋಚನೆಯಲ್ಲಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು. ಸುದ್ದಿಗಾರ ರೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಹೇಗಾದರೂ ಮಾಡಿ ರಾಷ್ಟ್ರಪತಿ ಆಡಳಿತ ತರಬೇಕು ಎಂಬ ದುರುದ್ದೇಶ ಬಿಜೆಪಿಯವರದ್ದು. ಅವರು ಕೋರ್ಟ್, ಕಚೇರಿ ಮ್ಯಾನೇಜ್ ಮಾಡುವ ಲೆವೆಲ್‌ಗೆ ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಈ ದೇಶದಲ್ಲಿ ಚುನಾವಣೆ ನಡೆಯದಿದ್ದರೂ ಅಚ್ಚರಿ ಪಡಬೇಕಿಲ್ಲ ಎಂದರು. ಹೈಕಮಾಂಡ್ ಏನು ಹೇಳುತ್ತೋ ಅದಕ್ಕೆ ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸಿದ್ದರಾಮಯ್ಯನವರು ಒಪ್ಪಿದ ಮೇಲೆ ಸಚಿವರು, ಶಾಸಕರೆಲ್ಲರೂ ಕೇಳಲೇಬೇಕು, ಒಪ್ಪಲೇಬೇಕು. ಎಲ್ಲ ನಿರ್ಧಾರ ಪಕ್ಷದ ಹೈಕಮಾಂಡ್ ಮಾಡುತ್ತದೆ ಎಂದು ಸಿಎಂ ಕುರ್ಚಿ ಕುರಿತ ಚರ್ಚೆಗೆ ಪ್ರತಿಕ್ರಿಯಿಸಿದರು.

ಅಂಗಾಂಗ ದಾನ: ರಾಜ್ಯ ನಂಬರ್ 3

← ಮೊದಲಪುಟದಿಂದ ಮೊದಲ ಎರಡು ಸ್ಥಾನದಲ್ಲಿ ಮಹಾರಾಷ್ಟ್ರ ಹಾಗೂ ರಾಜಸ್ಥಾನ ಸ್ಥಾನ ಪಡೆದುಕೊಂಡಿದೆ.

2023ರಲ್ಲಿ ಅಂಗಾಂಗ ದಾನದ ನೋಂದಣಿಗೆ ಡಿಜಿಟಲ್ ಅಂಗಾಂಗ ದಾನ ನೋಂದಣಿಯನ್ನು ಜಾರಿಗೆ ತರಲಾಗಿತ್ತು. ಅನಂತರ ದೇಶದಲ್ಲಿ 4.5 ಲಕ್ಷ ಮಂದಿ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿದ್ದಾರೆ. ನೊಟ್ಟೊ (ನ್ಯಾಷನಲ್ ಆರ್ಗನ್ ಆ್ಯಂಡ್ ಟಿಶ್ಯೂ ಟ್ರಾನ್ಸ್‌ಪ್ಲಾಂಟ್ ಆರ್ಗನೈಸೇಶನ್) ನ ಅಂಕಿ ಅಂಶಗಳ ಪ್ರಕಾರ ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಮಂದಿ ಅಂದರೆ 1,11,815 ಮಂದಿ ಅಂಗಾಂಗ ದಾನ ಮಾಡುವುದಕ್ಕೆ ಆನ್ಲೈನ್ ಮೂಲಕ ಒಪ್ಪಿಗೆ ನೀಡಿದ್ದಾರೆ. ಎರಡನೇ ಸ್ಥಾನದಲ್ಲಿರುವ ರಾಜಸ್ಥಾನದಲ್ಲಿ 91 ಸಾವಿರ ಮಂದಿ ಹೆಸರು ನೋಂದಣಿ ಮಾಡಿದ್ದಾರೆ.

ಮಾನವನ ಅಂಗಾಂಗಗಳಲ್ಲಿ ಪಿತ್ತಜನಕಾಂಗ ವನ್ನು 3,14,4751 ಜನ, ಹೃದಯವನ್ನು 3,13,449, ಶ್ವಾಸಕೋಶ ವನ್ನು 2,87,632 ಮಂದಿ, ಕರುಳು 2,70,802 ಮಂದಿ, ಮೇದೋಜೀರಕ ಗ್ರಂಥಿಯನ್ನು 2,73,134 ಮತ್ತು 1,22,554 ಲಕ್ಷದಷ್ಟು ಮಂದಿ ಮೂತ್ರಪಿಂಡ ದಾನಕ್ಕಾಗಿ ಹೆಸರು ನೋಂದಾಯಿಸಿದ್ದಾರೆ. ದೇಶದಲ್ಲಿ ಮೊದಲ ಸ್ಥಾನದಲ್ಲಿ ಮಹಾರಾಷ್ಟ್ರ ಇದ್ದರೆ, 2ನೇ ಸ್ಥಾನದಲ್ಲಿ ರಾಜಸ್ಥಾನ, 3ನೇ ಸ್ಥಾನದಲ್ಲಿ ಕರ್ನಾಟಕ, 4ನೇ ಸ್ಥಾನದಲ್ಲಿ ಗುಜರಾತ್, ಐದನೇ ಸ್ಥಾನದಲ್ಲಿ ಮಧ್ಯಪ್ರದೇಶ ಇವೆ. ಇದರ ಜತೆಗೆ ನೇತ್ರದಾನದಲ್ಲೂ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಅಪಘಾತ, ಅನಾರೋಗ್ಯ ಹಾಗೂ ಆಕಸ್ಮಿಕ ಘಟನೆಗಳಲ್ಲಿ ಮೆದುಳು ನಿಷ್ಕ್ರಿಯಗೊಂಡಾಗ ಅಂಗಾಂಗ ದಾನ ಮಾಡಲಾಗುತ್ತದೆ. ಸಂಬಂಧಿಕರ ಒಪ್ಪಿಗೆ ಪಡೆದುಕೊಂಡು ಈ ಕೆಲಸವನ್ನು ನುರಿತ ವೈದ್ಯರು ಸಂಬಂಧಪಟ್ಟ ಇಲಾಖೆಯ ಅನುಮತಿಯೊಂದಿಗೆ ಅಂಗಾಂಗ ದಾನಕ್ಕೆ ಮುಂದಾಗುತ್ತಾರೆ. ಈವರೆಗೂ ಅಂಗಾಂಗ ದಾನಕ್ಕೆ ನಿರಾಸಕ್ತಿ ತೋರಲಾಗುತ್ತಿತ್ತು. ಆದರೆ ಖ್ಯಾತ ನಟರಾದ ಸಂಚಾರಿ ವಿಜಯ್ ಮತ್ತು ಪುನೀತ್ ರಾಜ್‌ಕುಮಾರ್ ಅಂಗಾಂಗ ದಾನ ಮಾಡುತ್ತಿದ್ದಂತೆಯೇ ಪ್ರೇರಣೆಗೊಂಡು ಹಲವಾರು ಜನರು ಈ ಪುಣ್ಯದ ಕೆಲಸದಲ್ಲಿ ಕೈಜೋಡಿಸುತ್ತಿದ್ದಾರೆ.

ವಯಸ್ಸು, ಲಿಂಗಭೇದವಿಲ್ಲದೇ ದಾನ ಸಾಧ್ಯ: ಮೆದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗ ದಾನ ಮಾಡಬಹುದಾಗಿದೆ. ಒಬ್ಬ ದಾನಿ ಮೂತ್ರಪಿಂಡ, ಪಿತ್ತಜನಕಾಂಗ, ಹೃದಯ, ಶ್ವಾಸಕೋಶ, ಮೇದೋಜೀರಕ ಗ್ರಂಥಿ, ಸಣ್ಣ ಕರುಳು ಸೇರಿದಂತೆ ಅಂಗಾಂಗ ದಾನ ಮಾಡಬಹುದು. ಯಾವುದೇ ವಯಸ್ಸು, ಲಿಂಗ ಭೇದವಿಲ್ಲದೆ ಅಂಗಾಂಗ ಮತ್ತು ಅಂಗಾಂಶ ದಾನ ಮಾಡುವ ಮೂಲಕ ಮತ್ತೊಂದು ಜೀವಕ್ಕೆ ಆಧಾರವಾಗಬಹುದಾಗಿದೆ.

ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿದ ವಿಪ ಸದಸ್ಯ ದಿನೇಶ್ ಗೂಳಿಗೌಡ

ಅಧಿವೇಶನ: ಮಾಧ್ಯಮದವರಿಗೆ ವಿಶೇಷಾಧಿಕಾರಿ ನೇಮಿಸಿ

ಬೆಂಗಳೂರು: ಬೆಳಗಾವಿಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನ ವರದಿ ಮಾಡಲು ಆಗಮಿಸುವ ಮಾಧ್ಯಮದವರಿಗೆ ಉತ್ತಮ ದರ್ಜೆಯ ವಸತಿ, ಊಟ ಮತ್ತು ಆರೋಗ್ಯ ಸೌಕರ್ಯಗಳನ್ನು ಕಲ್ಪಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಮಂಡಲದ ಉಭಯ ಸದನಗಳ ಸಭಾಧ್ಯಕ್ಷರು ಹಾಗೂ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಅವರು, ಕಳೆದ 19 ವರ್ಷಗಳಿಂದ ಬೆಳಗಾವಿ ಅಧಿವೇಶನಕ್ಕಾಗಿ ಬೆಂಗಳೂರಿನಿಂದ ಆಗಮಿಸುತ್ತಿರುವ ಪತ್ರಕರ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಎತ್ತಿ ತೋರಿಸಿದ್ದಾರೆ.



ಈ ವರ್ಷದ ಅಧಿವೇಶನಕ್ಕೆ ಆಗಮಿಸುವ ಮಾಧ್ಯಮದವರಿಗೆ ಶುಚಿ, ರುಚಿಯಾದ ಆಹಾರ, ಉತ್ತಮ ವಸತಿ, ನೀರು ಮತ್ತು ತುರ್ತು ಆರೋಗ್ಯ ಸೌಕರ್ಯಗಳನ್ನು ಒಳಗೊಂಡ ಉತ್ತಮ ದರ್ಜೆಯ ಹೋಟೆಲ್‌ಗಳನ್ನು ಕಾಯ್ದಿರಿಸಬೇಕು. ಜತೆಗೆ ಪತ್ರಕರ್ತರ ಕುಂದುಕೊರತೆ ಮತ್ತು ಸೌಕರ್ಯಗಳನ್ನು ನೋಡಿಕೊಳ್ಳಲು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಬೇಕು.

– ದಿನೇಶ್ ಗೂಳಿಗೌಡ
ವಿಧಾನ ಪರಿಷತ್ ಸದಸ್ಯ

2006ರಿಂದ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದ್ದರೂ, ಇಂದಿಗೂ ಖಡೇ ಬಜಾರ್ ವ್ಯಾಪ್ತಿಯ ಕೀರ್ತಿ, ಶ್ರೀನಿವಾಸ ಸೇರಿದಂತೆ ಇನ್ನಿತರ ಹಳೆಯ ಹೋಟೆಲ್‌ಗಳಲ್ಲಿಯೇ ಪತ್ರಕರ್ತರಿಗೆ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಬೆಳಗಾವಿಯಲ್ಲಿ ಉತ್ತಮ ದರ್ಜೆಯ ಹೋಟೆಲ್‌ಗಳು ನಿರ್ಮಾಣವಾಗಿದ್ದರೂ ಹಳೆಯ ಹೋಟೆಲ್‌ಗಳನ್ನೇ ಬಳಸಲಾಗುತ್ತಿದೆ. ಬೆಂಗಳೂರಿನ ವಾತಾವರಣ ಹಾಗೂ ಆಹಾರಶೈಲಿಗಿಂತ ಬೆಳಗಾವಿಯ ವಾತಾವರಣ ವ್ಯತ್ಯಾಸವಿರುವುದರಿಂದ ಪ್ರತಿ ಅಧಿವೇಶನದ ಸಂದರ್ಭದಲ್ಲಿ ಹಲವು ಪತ್ರಕರ್ತರು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಈ ಅನಾರೋಗ್ಯ ಸಮಸ್ಯೆಗಳಿಂದ ಒಬ್ಬ ಪತ್ರಕರ್ತರು ಸಾವನ್ನಪ್ಪಿರುವ ನಿದರ್ಶನವೂ ಇದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಭಗವದ್ಗೀತಾ ಅಭಿಯಾನದಲ್ಲಿ ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಕರೆ

ಎಲ್ಲ ಶಾಲೆಗಳಲ್ಲಿ ಭಗವದ್ಗೀತೆ ಪಠ್ಯವಾಗಲಿ

ಶಿವಮೊಗ್ಗ: ಕರ್ನಾಟಕದಲ್ಲಿ ಸ್ವರ್ಣವಲ್ಲೀ ಶ್ರೀಗಳ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಶ್ರೀಭಗವದ್ಗೀತಾ ಅಭಿಯಾನ ದೇಶಕ್ಕೇ ಮಾದರಿಯಾಗಿದ್ದು, ಕೇವಲ ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ದೇಶಕ್ಕೆ ಪಸರಿಸಬೇಕು ಎಂದು ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಕರೆ ನೀಡಿದರು.

ಇಲ್ಲಿನ ಅಲ್ಲಮಪ್ರಭು ಮೈದಾನದಲ್ಲಿ ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ವತಿಯಿಂದ ಆಯೋಜಿಸಿದ್ದ ಶ್ರೀ ಭಗವದ್ಗೀತಾ ಅಭಿಯಾನ ರಾಜ್ಯಮಟ್ಟದ ಮಹಾಸಮರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಭಗವದ್ಗೀತೆಯಲ್ಲಿನ ಜ್ಞಾನ ಯೋಗ ಮಾನವನ ಜೀವನದ ಕಲ್ಯಾಣದ ಬಗ್ಗೆ ತಿಳಿಸುತ್ತದೆ. ಭಗವದ್ಗೀತೆಯಿಂದ ಸಂಪಾದಿಸಿದ ಜ್ಞಾನಕ್ಕೆ ಎಂದಿಗೂ ಅಂತ್ಯ ಇಲ್ಲ, ನಷ್ಟವೂ ಇಲ್ಲ. ಎಷ್ಟೋ ಜನರಿಗೆ ಇದರ ಬಗ್ಗೆ ಅರಿವಿಲ್ಲ. ಧರ್ಮ ಎಂದಿಗೂ ಇಂಗ್ಲಿಷಿನ ರಿಲಿಜನ್ ಅಲ್ಲ ಎಂದ ಅವರು, ಗೀತಾ ಪಠಣ ಜೀವನ ದರ್ಶನ ಮಾಡಿಸುತ್ತದೆ ಎಂದರು.

ದಕ್ಷಿಣ ಭಾರತದಲ್ಲಿ ಸನಾತನ ಧರ್ಮ ಜಾಗೃತ ಆಗುತ್ತಿದೆ. ಭವಿಷ್ಯದ ಆಶಾಭಾವ ಮೂಡುತ್ತಿದೆ. ಧರ್ಮಕ್ಕೆ ಸಂಕಷ್ಟ ಬಂದಾಗ ಭಗವಾನ್ ಶ್ರೀಕೃಷ್ಣ ತಾನು ಮತ್ತೆ ಮತ್ತೆ ಭುವಿಯಲ್ಲಿ ಅವತರಿಸಿ ಧರ್ಮ ಸಂರಕ್ಷಣೆ ಮಾಡುತ್ತೇನೆ ಎಂದು ಹೇಳಿದ್ದಾನೆ. ಅಂತೆಯೇ ನಮ್ಮ ದೇಶದಲ್ಲಿನ ಸಾಧು ಸಂತರೆಲ್ಲ ವಿಷ್ಣುವಿನ ಸಾಕ್ಷಾತ್ ಅವತಾರಿಗಳು. ಅವರೆಲ್ಲರ ಸಾನ್ನಿಧ್ಯ ಇಂದು ನಮಗೆಲ್ಲ ಮಾರ್ಗದರ್ಶನ ಮಾಡುತ್ತಿದೆ. ಎಲ್ಲ ಶಾಲೆಗಳಲ್ಲಿ ಭಗವದ್ಗೀತೆ ಪಠ್ಯವಾಗಬೇಕು ಎಂದು ಆಶಿಸಿದರು.

ಶ್ರೀ ಭಗವದ್ಗೀತಾ ಅಭಿಯಾನ, ರಾಜ್ಯಮಟ್ಟದ ಮಹಾಸಮರ್ಪಣೆ ಸಮಾರಂಭದಲ್ಲಿ ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್, ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ, ಮಾಜಿ ಡಿಸಿಎಂ ಈಶ್ವರಪ್ಪ ಮತ್ತಿತರರು ಭಾಗವಹಿಸಿದ್ದರು.

ಸಮಾಜದಲ್ಲಿ ಅಲ್ಪ, ಸ್ವಲ್ಪ ಹಿಂದೂ ಧರ್ಮ ಉಳಿದಿದೆ ಎಂದರೆ ಅದು ಸಾಧು ಸಂತರು, ಮಠಾಧೀಶರಿಂದ. ದಿನ ಬೆಳಗ್ಗೆ ಟಿವಿಗಳ ಮುಂದೆ ಕುಳಿತವರು ಸಮಾಜದಲ್ಲಿನ ದುರ್ಘಟನೆಗಳನ್ನೇ ತೋರಿಸುತ್ತಿರುತ್ತಾರೆ. ರಾಮಾಯಣ, ಮಹಾಭಾರತ, ಭಗವದ್ಗೀತೆಗಳಂಥ ಆದರ್ಶ ವಿಷಯಗಳಿಗೆ ಅವಕಾಶವೇ ಇಲ್ಲವಾಗಿದೆ. ಇವತ್ತು ಸಮಾಜದಲ್ಲಿ ಅವನ್ನೆಲ್ಲ ಮರೆಯುತ್ತಿದ್ದಾರೆ. ಪ್ರತಿ ಶಾಲೆಯಲ್ಲಿ ಗೀತಾ ಪಠಣವಾಗಬೇಕು.

– ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಭಗವಾನ್ ಕೃಷ್ಣನು ಯುದ್ಧದಲ್ಲಿ ನೀಡಿದ ಸಂದೇಶವೇ ಭಗವದ್ಗೀತೆ. ಸನಾತನ ಹಿಂದೂಗಳ ಪವಿತ್ರ ಗ್ರಂಥ. ಭಾರತೀಯ ತತ್ವಶಾಸ್ತ್ರದ ಚಿಂತನೆಯನ್ನು ಇದರಲ್ಲಿ ಮಾಡಲಾಗಿದೆ. ಜೀವನದ ಎಲ್ಲ ಸಮಸ್ಯೆಗಳಿಗೆ ಇದರಲ್ಲಿ ಉತ್ತರವಿದೆ. ಮಹಾತ್ಮಾ ಗಾಂಧೀಜಿ ಅವರು ಭಗವದ್ಗೀತೆಯನ್ನು ಶಾಶ್ವತ ತಾಯಿ ಎಂದು ಕರೆದಿದ್ದರು. ಗೀತಾ ಅಭಿಯಾನದ ಮಹಾಸಮರ್ಪಣೆ ಶಿವಮೊಗ್ಗಕ್ಕೆ ದಯಪಾಲಿಸಿದ ಶ್ರೀಗಳಿಗೆ ಧನ್ಯವಾದ ಸಮರ್ಪಿಸುತ್ತೇನೆ ಎಂದರು.

ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಮಾತನಾಡಿ, ಗೀತಾ ಪಠಣವನ್ನು ದೇಶದ ಎಲ್ಲ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯ ಮಟ್ಟದವರೆಗೂ ಅಳವಡಿಸುವಂತೆ ಕೇಂದ್ರ ಸಚಿವ ಕುಮಾರಸ್ವಾಮಿಯವರಿಗೆ ಕ್ರಮ ವಹಿಸಲು ಆಗ್ರಹಿಸಿದರು.

ಸ್ವರ್ಣವಲ್ಲೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸ್ವಾಮೀಜಿ, ಬೆಕ್ಕಿನ ಕಲ್ಮಠದ ಡಾ.ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾಮಠದ ಶ್ರೀ ನಾದಮಯಾನಂದನಾಥ ಸ್ವಾಮೀಜಿ ಸಾನ್ನಿಧ್ಯವಹಿಸಿ, ಆಶೀರ್ವಚನ ನೀಡಿದರು.

ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಎಸ್.ಎಲ್.ಭೋಜೇಗೌಡ, ಡಿ.ಎಸ್.ಅರುಣ್, ಕೆ.ಇ.ಕಾಂತೇಶ್ ಉಪಸ್ಥಿತರಿದ್ದರು.

ನಟ ಉಮೇಶ್ ನಿಧನ

← ಮೊದಲಪುಟದಿಂದ ಪತ್ನಿ ಹಾಗೂ ಮಗಳನ್ನು ಅಗಲಿದ್ದಾರೆ. ಕೆಲ ವರ್ಷಗಳ ಹಿಂದೆ ಉಮೇಶ್ ಅವರ ಪುತ್ರ ಅಕಾಲಮರಣಕ್ಕೀಡಾಗಿದ್ದರು.

ರವೀಂದ್ರ ಕಲಾಕ್ಷೇತ್ರದಲ್ಲಿ ನಟ ಉಮೇಶ್ ಅಂತಿಮ ದರ್ಶನಕ್ಕೆ ಅವಕಾಶ ಮಾಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ನಟಿ ಗಿರಿಜಾ ಲೋಕೇಶ್, ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ರಂಗಕರ್ಮಿ ನಾಗರಾಜಮೂರ್ತಿ ಸೇರಿ ಹಲವು ಗಣ್ಯರು ನಟ ಎಂ.ಎಸ್.ಉಮೇಶ್ ಅಂತಿಮ ದರ್ಶನ ಪಡೆದರು. ಉಮೇಶ್ ಒಡನಾಟ ನೆನಪು ಮಾಡಿಕೊಂಡು ಕಲಾವಿದರು ಕಂಬನಿ ಮಿಡಿದರು. ಆರು ದಶಕಗಳ ಕಾಲ ಕನ್ನಡ ಚಿತ್ರರಸಿಕರನ್ನು ರಂಜಿಸಿದ ಹಿರಿಯ ಕಲಾವಿದನ ಸಾವಿಗೆ ಚಿತ್ರರಂಗದ ನಟ ನಟಿಯರು, ರಾಜಕೀಯ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಮೂಲದ ಉಮೇಶ್ ಚಿಕ್ಕ ವಯಸ್ಸಿನಲ್ಲೇ ರಂಗಭೂಮಿಗೆ ಪ್ರವೇಶ ಮಾಡಿದ್ದರು. ಏಪ್ರಿಲ್ 22, 1945ರಂದು ಮೈಸೂರಿನಲ್ಲಿ ಜನಿಸಿದರು. ಅವರ ತಂದೆ ಎ.ಎಲ್.ಶ್ರೀಕಂಠಯ್ಯ, ತಾಯಿ ನಂಜಮ್ಮ. ಅನುಸೂಯಾ ನಾಟಕದ ಮೂಲಕ ತೊಟ್ಟಿಲು ಕೂಸಾಗಿದ್ದಾಗಲೇ ರಂಗಪ್ರವೇಶಿಸಿದ್ದರಿಂದ ರಂಗಭೂಮಿಯತ್ತ ಒಲವು ಅವರಿಗೆ ಹುಟ್ಟಿನಿಂದಲೇ ಬಂತು. ಬಾಲ ಪಾತ್ರಗಳಲ್ಲಿ ತನ್ಮಯತೆಯಿಂದ ಅಭಿನಯಿಸುತ್ತಿದ್ದರು. ಸುಮಾರು ಆರು ದಶಕಗಳ ಕಾಲ ಕಲಾಸೇವೆಯಲ್ಲಿದ್ದ ಅವರು, 350ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದರು.

ನಾಗರಹೊಳೆ, ಗುರುಶಿಷ್ಯರು, ಕಾಮನಬಿಲ್ಲು, ಅಪೂರ್ವ ಸಂಗಮ, ಶ್ರುತಿ ಸೇರಿದಾಗ, ಮಲಯ ಮಾರುತ ಹೀಗೆ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿದ್ದರು. ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್ ನಟನೆಯ ಹಲವು ಸಿನಿಮಾಗಳಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದರು. ವೆಂಕಟ ಇನ್ ಸಂಕಟ ಚಿತ್ರದಲ್ಲಿ ಅಜ್ಜಿ ಪಾತ್ರ ಮಾಡುವ ಮೂಲಕ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ್ದರು. ಇತ್ತೀಚಿನ ದಿನಗಳ ತನಕವೂ ಅವರು ಸಿನಿಮಾಗಳಲ್ಲಿ ನಟಿಸುತ್ತಿದ್ದರು. ಉಮೇಶ್ ಅವರು ಅಭಿನಯಿಸಿದ್ದ ಕಮಲ್ ಶ್ರೀದೇವಿ', ಐ ಆಮ್ ಗಾಡ್' ಸಿನಿಮಾಗಳು ಇತ್ತೀಚೆಗೆ ಬಿಡುಗಡೆ ಆಗಿದ್ದವು. ಪೋಷಕ ಪಾತ್ರಗಳು ಹಾಗೂ ಹಾಸ್ಯ ಪಾತ್ರಗಳ ಮೂಲಕ ಅವರು ಜನಪ್ರಿಯತೆ ಪಡೆದಿದ್ದರು.

ಕನ್ನಡ ಚಿತ್ರರಂಗದ ಹಿರಿಯ ಹಾಸ್ಯ ನಟರಾದ ಎಂ.ಎಸ್ ಉಮೇಶ್ ಅವರ ನಿಧನದ ಸುದ್ದಿ ನೋವು ತಂದಿದೆ. 350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಉಮೇಶ್ ಅವರು ಕನ್ನಡ ಚಿತ್ರರಂಗಕ್ಕೆ ಅತಿ ದೊಡ್ಡ ಕೊಡುಗೆ ನೀಡಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಕ್ಕೆ ದೇವರು ನೋವು ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪ್ರಖ್ಯಾತ ಹಾಸ್ಯ ಕಲಾವಿದ ಎಂ.ಎಸ್. ಉಮೇಶ್ ಅವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ತಮ್ಮ ನವಿರಾದ ಹಾಸ್ಯದ ಮೂಲಕ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುತ್ತಿದ್ದ ಉಮೇಶ್ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ನಟರು. ಉಮೇಶ್ ಅವರ ಅಗಲಿಕೆ ಕನ್ನಡ ಕಲಾಜಗತ್ತಿಗೆ ಬಹುದೊಡ್ಡ ನಷ್ಟ. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬಕ್ಕೆ, ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ.

–ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮುಖ್ಯಾಂಶಗಳು

- 350ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ತನ್ನದೇ ಛಾಪು
- ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್ ಅವರೊಂದಿಗೆ ಮರೆಯಲಾಗದ ಅಭಿನಯ
- ವಿಭಿನ್ನ ಪಾತ್ರ, ಹಾಸ್ಯಭರಿತ ಸಂಭಾಷಣೆಗಳಿಂದ ಕನ್ನಡಿಗರನ್ನು ರಂಜಿಸಿದ್ದ ನಟ
- ಹುಟ್ಟಿನಿಂದ ಶ್ರೀಮಂತಿಕೆಯನ್ನೇ ನೋಡದ ಉಮೇಶ್
- ಪೋಷಕ ಪಾತ್ರಗಳು ಹಾಗೂ ಹಾಸ್ಯ ಪಾತ್ರಗಳ ಮೂಲಕ ಅವರು ಜನಪ್ರಿಯತೆ

ಉಮೇಶ್ ಅವರು ಚಿತ್ರರಂಗ ಕಂಡ ಅತ್ಯಂತ ಪ್ರತಿಭಾನ್ವಿತ ನಟ, ಬಾಲ ಕಲಾವಿದರಾಗಿ ಮಕ್ಕಳ ರಾಜ್ಯ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಅವರು 400ಕ್ಕೂ ಹೆಚ್ಚು ಚಿತ್ರಗಳಲ್ಲಿ ನಮ್ಮನ್ನು ರಂಜಿಸಿದ್ದಾರೆ. ಅವರ ನಿಧನದಿಂದ ಕನ್ನಡ ಚಿತ್ರರಂಗ ಒಬ್ಬ ಅತ್ಯುತ್ತಮ ಕಲಾವಿದನನ್ನು ಕಳೆದುಕೊಂಡಿದೆ, ಅವರ ಅಭಿಮಾನಿಗಳಿಗೆ ಮತ್ತು ಅವರ ಕುಟುಂಬವರ್ಗಕ್ಕೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ.

–ಶಿವರಾಜ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಇಂದಿನಿಂದ ಸಂಸತ್ ಅಧಿವೇಶನ

← ಮೊದಲಪುಟದಿಂದ ನ.10ರಂದು ದೆಹಲಿ ಸ್ಫೋಟವನ್ನು ರಾಷ್ಟ್ರೀಯ ಭದ್ರತಾ ವೈಫಲ್ಯವೆಂದು ಪ್ರತಿಪಕ್ಷಗಳು ಬಿಂಬಿಸುವ ನಿರೀಕ್ಷೆಯಿದೆ. ಇನ್ನು ಅಮೆರಿಕ ಅಧ್ಯಕ್ಷ ಟ್ರಂಪ್ ಭಾರತೀಯ ಉತ್ಪನ್ನಗಳ ಮೇಲಿನ ರಫ್ತು ತೆರಿಗೆಯನ್ನು ಶೇ.50ಕ್ಕೆ ಹೆಚ್ಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿದೇಶಾಂಗ ಇಲಾಖೆ ಪರಿಸ್ಥಿತಿಯನ್ನು ನಿಭಾಯಿಸಲು ಸೋತಿದೆ ಎಂದು ಪ್ರತಿಪಕ್ಷಗಳು ಕೂಗೆಬ್ಬಿಸಬಹುದು. ದೆಹಲಿ ಸೇರಿದಂತೆ ದೇಶದ ಮಹಾನಗರಗಳಲ್ಲಿ ವಾಯುಮಾಲಿನ್ಯ ವಿಪರೀತಕ್ಕೆ ಹೋಗಿದೆ. ಹಾಗೆಯೇ ರೈತರು ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಸೂಕ್ತ ಬೆಲೆಗೆ ಹೋರಾಟ ನಡೆಸುತ್ತಿದ್ದಾರೆ. ಇವು ಸದ್ಯ ಚರ್ಚೆಯ ಮುಖ್ಯ ಸಂಗತಿಗಳು.

ಅಣುಶಕ್ತಿ, ಉನ್ನತ ಶಿಕ್ಷಣ ಸೇರಿ 14 ಮಸೂದೆ ಮಂಡನೆ

ಈ ಬಾರಿ ಒಟ್ಟು 14 ಮಸೂದೆಗಳು ಮಂಡನೆಯಾಗಲಿವೆ. ಇದರಲ್ಲಿ ಅಣುಶಕ್ತಿ, ಉನ್ನತ ಶಿಕ್ಷಣ ಆಯೋಗ ಮಸೂದೆಗಳು ಸೇರಿವೆ. ಅಣುಶಕ್ತಿಯನ್ನು ನಿಭಾಯಿಸಲು ಸೂಕ್ತ ಕಾನೂನುಗಳನ್ನು ರೂಪಿಸುವುದು, ಇದರಲ್ಲಿ ಖಾಸಗಿ ವಲಯ ಪ್ರವೇಶಕ್ಕೆ ಅವಕಾಶ ನೀಡಲೂ ಅವಕಾಶವಿರಲಿದೆ. ದೇಶದ ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ನೀಡುವುದು, ಅವುಗಳಿಗೆ ಮಾನ್ಯತೆ ನೀಡಲು ಪಾರದರ್ಶಕ ವ್ಯವಸ್ಥೆಯನ್ನು ತರುವುದು ಸೇರಿ ಹಲವು ಸಂಗತಿಗಳಿಗಾಗಿ ಒಂದು ಕೇಂದ್ರ ಆಯೋಗ ರಚಿಸಲು ಉನ್ನತ ಶಿಕ್ಷಣ ಮಸೂದೆ ಮಂಡನೆಯಾಗಲಿದೆ. ಉಳಿದಂತೆ ತಿದ್ದುಪಡಿ ಮಸೂದೆಗಳಾದ ಜನವಿಶ್ವಾಸ, ದಿವಾಳಿ ನೀತಿ, ಮಣಿಪುರ ಸರಕು ಮತ್ತು ಸೇವಾ ತೆರಿಗೆ, ರಾಷ್ಟ್ರೀಯ ಹೆದ್ದಾರಿ, ವಾಣಿಜ್ಯ ಕಾನೂನು (2013ರ ಕಂಪನಿ ಕಾಯ್ದೆಯನ್ನು ತಿದ್ದಪಡಿ ಮಾಡಲು)ಗಳನ್ನೂ ಮಂಡಿಸಲಾಗುತ್ತದೆ.

ಕಡಿಮೆ ಅವಧಿಯ ಚಳಿಗಾಲದ ಅಧಿವೇಶನ?

ಈ ಬಾರಿಯ ಚಳಿಗಾಲದ ಅಧಿವೇಶನ ಕೇವಲ 19 ದಿನಗಳಲ್ಲಿ ಮುಗಿದುಹೋಗಲಿದೆ. ಡಿ.1ರಿಂದ ಶುರುವಾಗಿ 19ಕ್ಕೆ ಮುಕ್ತಾಯವಾಗಲಿದೆ. ಶನಿವಾರ, ಭಾನುವಾರಗಳನ್ನು ಹೊರತುಪಡಿಸಿದರೆ ಕಲಾಪ ನಡೆಯುವುದು 15 ದಿನಗಳ ಮಾತ್ರ. ಇದು ಇತ್ತೀಚೆಗಿನ ವರ್ಷಗಳಲ್ಲೇ ಕನಿಷ್ಠ ಅವಧಿಯ ಚಳಿಗಾಲದ ಅಧಿವೇಶನ. ಮಾಮೂಲಿಯಾಗಿ ಒಟ್ಟು 25 ದಿನಗಳನ್ನು ನಿಗದಿಪಡಿಸಿ, ರಜೆ ಕಳೆದರೆ 20 ದಿನಗಳ ಕಾಲ ಸದನ ನಡೆಸಲಾಗುತ್ತಿತ್ತು. ಇದನ್ನು ವಿರೋಧಿಸಿರುವ ಕಾಂಗ್ರೆಸ್ ನಾಯಕ ಗೌರವ್ ಗೊಗೊಯಿ, ಇದು ಇತಿಹಾಸದಲ್ಲೇ ಅತಿ ಕನಿಷ್ಠ ಅವಧಿಯ ಚಳಿಗಾಲದ ಅಧಿವೇಶನವಾಗುವ ಸಾಧ್ಯತೆಯಿದೆ ಎಂದು ಟೀಕಿಸಿದ್ದಾರೆ.

ಬೆಳಗಾವಿ ಅಧಿವೇಶನಕ್ಕೆ ಮಸೂದೆಗಳ ಭಾರ

← ಮೊದಲಪುಟದಿಂದ ಈ ಎಲ್ಲವನ್ನು ಮೀರಿ ಅಧಿವೇಶನದ ಸಮಯದಲ್ಲಿ ಆರ್ಥಿಕ ಇಲಾಖೆಯ ವಿವಿಧ ವಿಧೇಯಕಗಳು ಮಂಡನೆಯಾಗಲಿರುವುದರಿಂದ 10 ದಿನದ ಅವಧಿಯಲ್ಲಿ ಈ ಎಲ್ಲ ವಿಧೇಯಕಗಳನ್ನು ಚರ್ಚಿಸಿ, ಅನುಮೋದನೆ ಪಡೆಯಲು ಸಾಧ್ಯವೇ ಎನ್ನುವ ಪ್ರಶ್ನೆ ಹಲವರಲ್ಲಿದೆ.

ಪರಿಷತ್ತಿನಲ್ಲಿ ಪಾಸ್ ಮಾಡಿಸಿಕೊಳ್ಳುವ ಭರವಸೆ

ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾದರೂ ಇದೇ ಮೊದಲ ಬಾರಿಗೆ ವಿಧಾನಪರಿಷತ್‌ನಲ್ಲಿ ಬಹುಮತ ಸಿಕ್ಕಿದೆ. ಈ ಹಿಂದೆ ಹಲವು ವಿಧೇಯಕಗಳನ್ನು ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ಒಂದಾಗಿ ತಡೆಹಿಡಿದಿದ್ದವು. ಪ್ರಮುಖವಾಗಿ ಕರ್ನಾಟಕ ಭೂಕಂದಾಯ ಬಿಲ್ ಹಾಗೂ ಕರ್ನಾಟಕ ಜನದಟ್ಟಣೆ ನಿಯಂತ್ರಣ ಕಾಯಿದೆ ವಿಧಾನಪರಿಷತ್‌ನಲ್ಲಿ ಬಾಕಿಯಾಗಿವೆ. ಈ ಎರಡು ವಿಧೇಯಕಗಳು ಈ ಬಾರಿ ಪರಿಷತ್‌ನಲ್ಲಿ ಅನುಮೋದನೆಯಾಗುವ ಸಾಧ್ಯತೆಯಿದೆ. ಇದೇ ರೀತಿ ಈ ಬಾರಿ ಮಂಡನೆಯಾಗಲಿರುವ 35ಕ್ಕೂ ಹೆಚ್ಚು ವಿಧೇಯಕಗಳು ಮಂಡನೆಯಾಗುವ ಸಾಧ್ಯತೆ ಇರುವುದರಿಂದ ಈ ಎಲ್ಲವನ್ನು ಪಾಸ್ ಮಾಡಿಕೊಳ್ಳುವುದು ಸುಲಭವಾಗಲಿದೆ.

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮೈಸೂರು–570023.

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ.–13/2025–26, ದಿನಾಂಕ:–28.11.2025.(2ನೇ ಕರೆ)

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ಮೈಸೂರು ತಾಲ್ಲೂಕಿನ 2025–26ನೇ ಸಾಲಿನ ಪೋಲಿಸ್ ತರಬೇತಿ ಶಾಲೆಗಳ ಉನ್ನತೀಕರಣ **ಲೆಕ್ಕ ಶೀರ್ಷಿಕೆ: 4055–00–207–0–04–386** ಕಟ್ಟಡಗಳ ನಿರ್ಮಾಣ **(ಶೇವಣಿ ವಂತಿಕೆ)** ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ **KW-4** ರೀತ್ಯಾ ಮರುಟೆಂಡರ್(2ನೇ ಕರೆ) ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು **ದಿನಾಂಕ:–28.11.2025 ರಿಂದ ದಿನಾಂಕ 08.12.2025ರವರೆಗೆ ಸಂಜೆ 16.00** ಘಂಟೆಯವರೆಗೆ, ಪ್ರೀಬಿಡ್ ಮೀಟಿಂಗ್ **ದಿ:04–12–2025 ಸಂಜೆ 16.00 ಘಂಟೆಗೆ** ಹಾಗೂ ಸಾಧ್ಯವಾದರೆ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:–09.12.2025ರ ಸಂಜೆ 17.00** ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು.

ಕ್ರ. ಸಂ.	ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	ಕರ್ನಾಟಕ ಪೋಲಿಸ್ ಅಕಾಡೆಮಿ ಮೈಸೂರು ಘಟಕದಲ್ಲಿ 5 ಲೇನ್ 400 ಮೀ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿ (ಮೈಸೂರು ನಗರ) **(Indent No.RDPR/2025-26/OW/WORK_INDENT19614/Call-2)**	254.00	212.69	3,19,500.00	2ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(e-procurement portal)** ವೆಬ್ ಸೈಟ್‌ನಲ್ಲಿ ಪಡೆಯಬಹುದು **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು **(ಫೋನ್ ನಂ.0821–2560853)** ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ:–ಸ.ಇಂ. 8123267587

DIPR/DDMYS/1304/KSMCA/731/2025-26
ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು

ಅಪಾರ್ಥ ಮಾಡಿಕೊಳ್ಳದೆ ನಿರ್ಗಮಿಸಿದ ಸೀತಾಪತಿ

350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದ ಹಾಸ್ಯ ಕಲಾವಿದ ಮೈಸೂರು ಶ್ರೀಕಂಠಯ್ಯ ಉಮೇಶ್ ನಿಧನ

ಪ್ರಶಸ್ತಿಗಳು

- ತಿಮ್ಮರಾಯಿ ಪಾತ್ರಕ್ಕೆ ಉತ್ತಮ ಪೋಷಕನಟ ರಾಜ್ಯ ಪ್ರಶಸ್ತಿ
- ನಾಟಕ ಅಕಾಡೆಮಿ ಪ್ರಶಸ್ತಿ
- ಮಹಾನಗರ ಪಾಲಿಕೆ ಪ್ರಶಸ್ತಿ
- ಬಣ್ಣದ ಘಂಟೆ ಆತ್ಮಚರಿತ್ರೆಗೆ ವಿಶ್ವೇಶ್ವರಯ್ಯ ಪ್ರತಿಷ್ಠಾನ ಪ್ರಶಸ್ತಿ

ಕನ್ನಡ ಚಿತ್ರರಂಗದಲ್ಲಿ ಬರೋಬ್ಬರಿ ಆರು ದಶಕಗಳ ಕಲಾ ಸೇವೆ ಸಲ್ಲಿಸಿದ ಹಿರಿಯ ಉಮೇಶ್ ಅವರಿಗೆ ಎಂಬತ್ತು ವರ್ಷ ತುಂಬಿದ್ದರೂ, ಸಿನಿಮಾಗಳಲ್ಲಿ ನಟಿಸಿ ರಂಜಿಸಬೇಕು ಎಂದು ಅಭಿಮಾನಿಗಳು ಹಾರೈಸಿದ್ದರು, ಆಶಿಸಿದ್ದರು. ಅಂತೆಯೇ ಉಮೇಶಣ್ಣ ಕೂಡ ಎಂಬತ್ತರ ಇಳಿವಯಸ್ಸಿನಲ್ಲಿಯೂ ಮಕ್ಕಳಂತೆಯೇ ಸದಾ ನಗುತ್ತಾ ಲವಲವಿಕೆಯಿಂದ ಇರುತ್ತಿದ್ದರು. ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಅಲ್ಲಿ 'ಅಯ್ಯಯ್ಯೋ.. ನನ್ನ ಅಪಾರ್ಥ ಮಾಡ್ಕೊಂಬಿಟ್ರ' ಎಂಬ ಡೈಲಾಗ್ ಹೇಳಿ ಎಲ್ಲರನ್ನೂ ನಗಿಸುತ್ತಿದ್ದರು. ಅಂತಹ ಹಿರಿಯ ಹಾಸ್ಯ ನಟ ಉಮೇಶಣ್ಣ ಇನ್ನೂ ಹಲವು ಸಿನಿಮಾಗಳಲ್ಲಿ ನಟಿಸುತ್ತಾರೆ ಎಂದುಕೊಂಡಿದ್ದರು. ಆದರೆ ಅಷ್ಟರಲ್ಲೇ ಅವರು ಬದುಕಿನ ಪಯಣ ಮುಗಿಸಿ ಬಾರದ ಲೋಕಕ್ಕೆ ಪಯಣಿಸಿದ್ದಾರೆ.

ಉಮೇಶಣ್ಣ ಅವರನ್ನು ಕಳೆದುಕೊಂಡ ಕನ್ನಡ ಚಿತ್ರರಂಗ ಬಡವಾಗಿದೆ. ಕಂಬನಿ ಮಿಡಿದಿದೆ. ಕಪ್ಪು ಬಿಳುಪಿನ ಕಾಲದಿಂದ ಆರಂಭವಾದ ಉಮೇಶ್ ಅವರ ಸಿನಿ ಪಯಣ ಕಲರ್ ಫುಲ್ ಯುಗದವರೆಗೂ ಮುಂದುವರಿದಿತ್ತು. ವರನಟ ಡಾ.ರಾಜ್‌ಕುಮಾರ್ ಅವರಿಂದ ಶುರುವಾದ ನಟನಾ ಜೀವನ ಇಂದಿನ ಯುವ ನಟರವರೆಗೂ ಮುಂದುವರಿದಿತ್ತು ಎಂಬ ಹೆಗ್ಗಳಿಕೆ ಉಮೇಶಣ್ಣ ಅವರಿಗೆ ಸಲ್ಲುತ್ತದೆ.

ಹಿರಿಯ ನಟ ಉಮೇಶ್ ಅವರು ಚಿತ್ರರಂಗದಲ್ಲಿ ಉಮೇಶಣ್ಣ ಎಂದೇ ಚಿರಪರಿಚಿತರು. 1945ರ ಏಪ್ರಿಲ್ 22ರಂದು ಶ್ರೀಕಂಠಯ್ಯ ಮತ್ತು ನಂಜಮ್ಮ ದಂಪತಿಯ ಪುತ್ರನಾಗಿ ಜನಿಸಿದರು. ಒಟ್ಟು 11 ಮಕ್ಕಳಲ್ಲಿ ಉಮೇಶ್ ಅವರು 8ನೇ ಮಗನಾಗಿದ್ದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಹನ್ನೊಂದು ಮಕ್ಕಳನ್ನು ಪೋಷಿಸುವ ಹೊಣೆ ಶ್ರೀಕಂಠಯ್ಯ ಅವರ ಮೇಲಿತ್ತು. ತಂದೆ ಶ್ರೀಕಂಠಯ್ಯ ರಂಗಭೂಮಿ ಕಲಾವಿದರಾಗಿದ್ದರು. ಅಲ್ಲಿ ಸಿಗುತ್ತಿದ್ದ ಅಷ್ಟೋ ಇಷ್ಟೋ ಸಂಪಾದನೆಯಲ್ಲಿ ಸಂಸಾರ ಸಾಗುತ್ತಿತ್ತು. ಇನ್ನು ಉಮೇಶ್ ಅವರ ಅಣ್ಣಂದಿರು ಕೂಡ ತಂದೆಯಂತೆಯೇ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದರು. ಉಮೇಶ್ ಅವರಿಗೆ ಇನ್ನು ನಾಲ್ಕು ವರ್ಷ, ಆಗಲೇ ಅವರಿಗೆ ರಂಗಭೂಮಿಯ ಪರಿಚಯವಾಯಿತು. ತಂದೆ ಶ್ರೀಕಂಠಯ್ಯ, ತಮ್ಮ ಪುತ್ರನನ್ನು ನಾಲ್ಕು ವರ್ಷಕ್ಕೆ ಕೆ.ಹಿರಣ್ಣಯ್ಯ ಅವರ ಮಿತ್ರ ಮಂಡಳಿಗೆ ಪರಿಚಯಿಸಿದರು. ಅವರ ಸಂಸ್ಥೆಯಲ್ಲಿ ಬಸವೇಶ್ವರ ನಾಟಕದಲ್ಲಿ ಬಿಜ್ಜಳ ಮಗನ ಪಾತ್ರದಲ್ಲಿ ಬಾಲಕ ಉಮೇಶ್ ಅಭಿನಯಿಸಿದರು. ಮುದ್ದಾದ ಪುಟ್ಟ ಬಾಲಕ ಬಿಜ್ಜಳನ ಮಗನಾಗಿ ಕಂಗೊಳಿಸಿದರು. ಮೊದಲ ನಟನೆಯಲ್ಲಿಯೇ ಮನಗೆದ್ದರು. ಅಲ್ಲಿಂದ ಅವರಿಗೆ ಕೆ.ಹಿರಣ್ಣಯ್ಯ ಮಿತ್ರಮಂಡಳಿಯಲ್ಲಿ ಒಂದು ಪಾತ್ರ ಖಾಯಂ ಆಗಿರುತ್ತಿತ್ತು. ಹಿಂದೆಲ್ಲಾ ರಾತ್ರಿ ಒಂಬತ್ತು ಗಂಟೆಯ ನಂತರ ನಾಟಕದ ಅಭ್ಯಾಸ ನಡೆಯುತ್ತಿತ್ತು. ಸಣ್ಣ ಹುಡುಗ ಉಮೇಶ್ ಮಲಗಿದ್ದರೂ, ಅವರ ತಂದೆ ರಂಗಭೂಮಿಯ ಅಭ್ಯಾಸಕ್ಕೆ ಕರೆದೊಯ್ಯುತ್ತಿದ್ದರು. ನಿದ್ರೆಗಣ್ಣು ತೆರೆದು ನೋಡುತ್ತಿದ್ದ ಬಾಲಕನಿಗೆ ಕೆ.ಹಿರಣ್ಣಯ್ಯನವರು ಬಿಸ್ಕೆಟ್ ಪ್ಯಾಕ್ ತೋರಿಸಿ ನಾಟಕ ಅಭ್ಯಾಸ ಮಾಡಿಸುತ್ತಿದ್ದರು. ಆ ವಯಸ್ಸಿಗೆ ಬಸವಣ್ಣನವರ ವಚನಗಳು ಉಮೇಶ್ ಅವರಿಗೆ ಬಾಯಿ ಪಾಠವಾಗಿದ್ದವು.

ಮರೆಯಾದ ಶಿಷ್ಯರು

ಉಮೇಶ್ ಅವರು ನಟಿಸಿದ ಪ್ರಮುಖ ಸಿನಿಮಾಗಳಲ್ಲಿ ಗುರುಶಿಷ್ಯರು ಸಿನಿಮಾವೂ ಒಂದು. ಪೆದ್ದ ಶಿಷ್ಯರಾಗಿ ದ್ವಾರಕೀಶ್, ರತ್ನಾಕರ್ ಹೀಗೆ ಹಲವರು ನಟಿಸಿದ್ದರು. ಇದರಲ್ಲಿ ಉಮೇಶ್ ಅವರು ಪೆದ್ದ ಶಿಷ್ಯನಾಗಿ ಬಣ್ಣಹಚ್ಚಿ, ಮದುವೆಗೆ ಬಂದವರಿಗೆಲ್ಲ ಬಣ್ಣಬಳಿದು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ಈ ಹಿಂದೆ ದ್ವಾರಕೀಶ್ ಅವರು ಎಲ್ಲರನ್ನು ಅಗಲಿದರು. ಆ ಶಿಷ್ಯಯರ ಸಾಲಿನಲ್ಲಿದ್ದ ಉಮೇಶಣ್ಣ ಕೂಡ ಈಗ ಅಗಲಿದ್ದು, ಗುರುಶಿಷ್ಯರ ಬಂಧದ ಮತ್ತೊಂದು ಕೊಂಡಿ ಕಳಚಿದಂತಾಗಿದೆ.

ಕೆ.ಹಿರಣ್ಣಯ್ಯ ಅವರ ನಾಟಕ ಮಂಡಳಿ ಸಂಕಷ್ಟಕ್ಕೆ ಸಿಲುಕಿತ್ತು. ಹಾಗಾಗಿ ಉಮೇಶಣ್ಣ ಮತ್ತು ಅವರ ಅಣ್ಣಂದಿರು ಹೊಟ್ಟೆ ಪಾಡಿಗಾಗಿ ಗುಬ್ಬಿ ವೀರಣ್ಣ ಅವರ ನಾಟಕ ಕಂಪನಿ ಸೇರಿದರು. ಕೆ.ಹಿರಣ್ಣಯ್ಯ ಅವರ ಗರಡಿಯಲ್ಲಿ ಪಳಗಿದ ಉಮೇಶಣ್ಣ ಮತ್ತು ಸಹೋದರರಿಗೆ ಗುಬ್ಬಿ ವೀರಣ್ಣ ಅವರ ನಾಟಕ ಕಂಪನಿಯಲ್ಲಿ ನಟಿಸಲು ಬಹುಬೇಗ ಅವಕಾಶ ಸಿಕ್ಕಿತು. ಅದಾಗಲೇ ಕನ್ನಡ ಚಿತ್ರರಂಗದಲ್ಲಿ ಜನಪ್ರಿಯ ನಟರಾಗಿ ಗುರುತಿಸಿಕೊಂಡಿದ್ದ ಡಾ.ರಾಜ್‌ಕುಮಾರ್ ಅವರೂ ಗುಬ್ಬಿ ವೀರಣ್ಣ ಅವರ ನಾಟಕ ಕಂಪನಿಯಲ್ಲಿ ಅಭಿನಯಿಸುತ್ತಿದ್ದರು. ಅಣ್ಣಾವ್ರು ಅಭಿನಯಿಸಿದ್ದ ಬೇಡರ ಕಣ್ಣಪ್ಪ ನಾಟಕದಲ್ಲಿ ಉಮೇಶ್ ಅವರು, ಡಾ.ರಾಜ್ ಅವರ ಪುತ್ರನ ಪಾತ್ರದಲ್ಲಿ ಅಭಿನಯಿಸಿದ್ದರು. ಅಕ್ಕ ಮಹಾದೇವಿ ನಾಟಕದಲ್ಲಿ ಅಂಧೆಯಾಗಿ, ದಶಾವತಾರದಲ್ಲಿ ಪ್ರಹ್ಲಾದನ ಪಾತ್ರಕ್ಕೆ ಜೀವ ತುಂಬಿದ್ದರು. ಆ ಕಾಲದಲ್ಲಿ ದಶಾವತಾರ ನಾಟಕ ಎಷ್ಟು ಪ್ರಸಿದ್ಧಿ ಪಡೆದಿತ್ತು ಎಂದರೆ ಅಂದು ದೂರದೂರುಗಳಿಂದ ಪ್ರೇಕ್ಷಕರು ಬಂದು ನಾಟಕ ನೋಡಿ ಸಂತಸಪಡುತ್ತಿದ್ದರು. ಪ್ರಹ್ಲಾದನ ಪಾತ್ರವನ್ನು ಮೆಚ್ಚಿಕೊಂಡಾಡುತ್ತಿದ್ದರು.

ಮಾಸ್ತಿ ಮೆಚ್ಚಿದ ಪ್ರಹ್ಲಾದ: 1955ರಲ್ಲಿ ದಶಾವತಾರ ನಾಟಕ ಪ್ರದರ್ಶನಕ್ಕೆ ನಾಡಿನ ಮೇರು ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಕೂಡ ಆಗಮಿಸಿ, ನಾಟಕ ನೋಡಿ ಸಂತಸಪಟ್ಟಿದ್ದರಂತೆ. ಅದರಲ್ಲಿಯೂ ಪ್ರಹ್ಲಾದನ ಪಾತ್ರವನ್ನು ಮೆಚ್ಚಿ ಆ ಪಾತ್ರ ನಿರ್ವಹಿಸಿದ್ದ ಉಮೇಶ್ ಅವರಿಗೆ ಹತ್ತು ರು. ಬಹುಮಾನ ನೀಡಿದ್ದರಂತೆ. ಈ ಘಟನೆಯನ್ನು ಉಮೇಶ್ ಅವರು ಕೊನೆಯವರೆಗೂ ನೆನಪಿನಲ್ಲಿ ಇಟ್ಟುಕೊಂಡಿದ್ದರು.

ಗುಬ್ಬಿ ಕಂಪನಿಯಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸಿದ ಉಮೇಶಣ್ಣ, ಅಲ್ಲಿಂದ ಎಂ.ಸಿ.ಮಹಾದೇವಸ್ವಾಮಿ ಅವರ ಕನ್ನಡ ಥಿಯೇಟರ್ಸ್ ಅವರ ನಾಟಕ ಮಂಡಳಿಗೆ ಸೇರಿದ್ದರು. ಇಲ್ಲಿಯೂ ಹಲವು ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದರು. ಅಂದಿನ ಮೈಸೂರು ಮಹರಾಜರು ಈ ನಾಟಕ ಮಂಡಳಿಯ ಕೃಪ ಪೋಷಿತರಾಗಿದ್ದರಿಂದ. ನಾಟಕ ಕಂಪನಿಯೂ ಚೆನ್ನಾಗಿಯೇ ಸಾಗುತ್ತಿತ್ತು. ಈ ಕಂಪನಿಯಲ್ಲಿ ಉಮೇಶಣ್ಣ ಚಂದ್ರಹಾಸ ನಾಟದಲ್ಲಿ ಬಾಲಕ ಚಂದ್ರಹಾಸನ ಪಾತ್ರ ನಿರ್ವಹಿಸಿದ್ದರು. ಈ ಪಾತ್ರ ಎಷ್ಟರಮಟ್ಟಿಗೆ ಜನರ ಮನಸೂರೆಗೊಂಡಿತ್ತು ಎಂದರೆ ಎಲ್ಲರೂ ತದೇಕಚಿತ್ತದಿಂದ ಉಮೇಶ್ ಅವರನ್ನೇ ನೋಡುತ್ತಿದ್ದರು. ಅವರೇ ಚಂದ್ರಹಾಸನಿರಬೇಕು ಎಂದುಕೊಳ್ಳುತ್ತಿದ್ದರು. ಇದೇ ಸಮಯದಲ್ಲಿ ಖ್ಯಾತ ನಿರ್ದೇಶಕ ಬಿ.ಆರ್.ಪಂತುಲು ಅವರು ಮಕ್ಕಳ ರಾಜ್ಯ ಎಂಬ ಚಿತ್ರವನ್ನು ನಿರ್ದೇಶನ ಮಾಡಲು ಸಿದ್ಧತೆ ನಡೆಸಿದ್ದರು. ಈ ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ನಟಿಸಲು ಪಾತ್ರಧಾರಿಯ ಅಗತ್ಯವಿತ್ತು. ಈ ಸಿನಿಮಾದ ಸಹಾಯಕ ನಿರ್ದೇಶಕರಾಗಿದ್ದ ಪುಟ್ಟಣ್ಣ ಕಣಗಾಲ್ ಅವರು ಪಾತ್ರಧಾರಿಯ ಹುಡುಕಾಟದಲ್ಲಿದ್ದರು. ಒಮ್ಮೆ ಅವರು ಚಂದ್ರಹಾಸ ನಾಟಕವನ್ನು ನೋಡಲು ಬಂದಿದ್ದರು. ಈ ಸಮಯದಲ್ಲಿ ಉಮೇಶ್ ಅವರ ಪಾತ್ರವನ್ನು ಮೆಚ್ಚಿ ಅವರನ್ನೇ ತಮ್ಮ ಚಿತ್ರಕ್ಕೆ ಆಯ್ಕೆ ಮಾಡಿಕೊಂಡರು. ಮಕ್ಕಳ ರಾಜ್ಯ ಚಿತ್ರಕ್ಕೆ ಉಮೇಶ್ ಅವರು ಆಯ್ಕೆಯಾಗಿ, ಪ್ರಮುಖ ಪಾತ್ರದಲ್ಲಿ ನಟಿಸಿದರು. ಮಕ್ಕಳ ರಾಜ್ಯದಲ್ಲಿ ನಟಿಸಿದ ಉಮೇಶ್ ಅಚ್ಚುಮೆಚ್ಚಿನ ನಟನಾದರು. ಮಕ್ಕಳ ರಾಜ್ಯದ ಸಿನಿಮಾದ ಬಳಿಕ ಉಮೇಶ್ ಮತ್ತೆ ರಂಗಭೂಮಿಗೆ ಮರಳಿದರು. ಸಿನಿಮಾದಿಂದ ಮರಳಿ ಬಂದ ಉಮೇಶ್ ಅವರಿಗೆ ಅಷ್ಟಾಗಿ ಒಳ್ಳೆಯ ಪಾತ್ರಗಳು ಸಿಗಲಿಲ್ಲ. ಬದಲಾಗಿ ಸಣ್ಣಪುಟ್ಟ ಪಾತ್ರಗಳಷ್ಟೇ ಸಿಕ್ಕಿದವು.

ಕೀರ್ತಿ ತಂದ ತಿಮ್ಮರಾಯಿ

ಬಾಲ್ಯದಿಂದಲೂ ಪ್ರತಿಭಾನ್ವಿತ ನಟರಾಗಿದ್ದ ಉಮೇಶ್ ಅವರ ಬಗ್ಗೆ ಪುಟ್ಟಣ್ಣ ಅವರಿಗೆ ಅಪಾರ ಒಲವಿತ್ತು. ಹಾಗಾಗಿ ಅವರನ್ನು ತಮ್ಮ ಜತೆಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಆಹ್ವಾನಿಸಿದರು. ಆದರೆ ನಟನೆಯಲ್ಲಿ ಮುಂದುವರಿಯುವ ಮನಸ್ಸಿದ್ದ ಉಮೇಶಣ್ಣ, ಸಹಾಯಕ ನಿರ್ದೇಶನದತ್ತ ಮನಸು ಮಾಡಲಿಲ್ಲ. ಇದೇ ಹೊತ್ತಲ್ಲಿ ಪುಟ್ಟಣ್ಣನವರು ಕಥಾಸಂಗಮ ಚಿತ್ರವನ್ನು ನಿರ್ದೇಶಿಸುತ್ತಿದ್ದರು. ಈ ಸಿನಿಮಾದಲ್ಲಿ ರಜನಿಕಾಂತ್, ಆರತಿ ಅಂತಹ ಪ್ರಸಿದ್ಧ ಕಲಾವಿದರು ನಟಿಸಿದ್ದರು. ಈ ಸಿನಿಮಾದಲ್ಲಿ ಉಮೇಶ್ ಅವರು ತಿಮ್ಮರಾಯಿ ಪಾತ್ರದಲ್ಲಿ ಅಮೋಘವಾಗಿ ನಟಿಸಿ ಮನಗೆದ್ದರು. ನಾಕಾಣೆ ಕೊಡಣ್ಣ ಬಾಲ ನಾಗಮ್ಮ ಸಿನಿಮಾ ನೋಡಬೇಕು.. ಎಂಬ ಡೈಲಾಗ್ ಪ್ರೇಕ್ಷಕರ ಮನಗೆದ್ದಿತ್ತು. ಪುಟ್ಟಣ್ಣ ಅವರ ಸಿನಿಮಾಗಳು ಎಂದರೆ ಪರಭಾಷೆಯ ದೊಡ್ಡ ನಿರ್ದೇಶಕರು ಬಂದು ಸಿನಿಮಾ ನೋಡುತ್ತಿದ್ದರು. ಅಂತೆಯೇ ತಮಿಳಿನ ಖ್ಯಾತ ನಿರ್ದೇಶಕ ಬಾಲಚಂದರ್ ಅವರು ಕಥಾ ಸಂಗಮ ಚಿತ್ರವನ್ನು ನೋಡಿ ತಿಮ್ಮರಾಯಿ ಪಾತ್ರ ನೋಡಿ ಮೆಚ್ಚಿ ಕೊಂಡಾಡಿದ್ದರು. ತಿಮ್ಮರಾಯಿ ಪಾತ್ರಕ್ಕೆ ಅತ್ಯುತ್ತಮ ಪೋಷಕ ನಟ ರಾಜ್ಯ ಪ್ರಶಸ್ತಿಯೂ ಲಭಿಸಿತು. ಅಲ್ಲಿಂದ ಉಮೇಶ್ ಅವರಿಗೆ ಹಲವು ಸಿನಿಮಾಗಳಲ್ಲಿ ಅಭಿನಯಿಸುವ ಅವಕಾಶಗಳು ಅರಸಿ ಬಂದವು. ಅಲ್ಲಿಂದ ಉಮೇಶ್ ಅವರಿಗೆ ಚಂದನವನದ ಬಾಗಿಲು ತೆರೆದುಕೊಂಡಿತು.



ನನಗೆ ನನ್ನ ಪತಿಯೇ ಆಸ್ತಿ

ನನಗೆ ನನ್ನ ಪತಿಯೇ ಸರ್ವಸ್ವ, ಅವರೇ ನನಗೆ ಆಸ್ತಿಯಾ ಗಿದ್ದರು. ಆದರೆ ಈಗ ಅವರನ್ನು ಕಳೆದುಕೊಂಡು ನನ್ನ ಬದುಕೇ ಬರಡಗಿದೆ. ಇದ್ದ ಒಬ್ಬ ಮಗನೂ ಹೋಗಿ ಬಿಟ್ಟ. ಈಗ ನನ್ನ ಮಗಳೇ ನಮ್ಮನ್ನು ನೋಡಿಕೊ ಳ್ಳುತ್ತಿದ್ದಾಳೆ. ನಾವಿಬ್ಬರು ಮದುವೆಯಾದಾನಿಂದಲೂ ಜಗಳವಾಡಿಲ್ಲ, ಇಬ್ಬರು ಪ್ರೀತಿಯಿಂದ ಇದ್ದೆವು. ನನ್ನ ಪತಿ ಕೊನೆಯವರೆಗೂ ನಾನು ದುಡಿತೀನಿ ಚಿಂತೆ ಮಾಡಬೇಡ ಎನ್ನುತ್ತಿದ್ದರು. ನಾನು ಇರುವವರೆಗೂ ಮಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎನ್ನುತ್ತಿದ್ದರು. ಆದರೆ ಈಗ ಅವರು ಹೋಗಿಬಿಟ್ಟರು. ಅವರ ಜತೆಗೆ ನಾನು ಹೋಗಿಬಿಟ್ಟದ್ದರೆ ಚೆನ್ನಾಗಿರುತ್ತಿತ್ತು ಅನ್ನಿಸುತ್ತದೆ. ಆದರೆ ಮಗಳಿಗಾಗಿ ಇರಬೇಕು ಎಂದು ಉಮೇಶ್ ಅವರ ಪತಿ ನೊಂದು ನುಡಿಯುತ್ತಾರೆ.

ಪ್ರೇಮ ವಿವಾಹ

ಉಮೇಶ್ ಅವರು ನಾಟಕಗಳಲ್ಲಿ ಅಭಿನಯಿಸುವಾಗಲೇ ಸುಧಾ ಅವರ ಪರಿಚಯವಾಗಿತ್ತು, ಮುಂದೆ ಸುಧಾ ಅವರು ಏಣಗಿ ಬಾಳಪ್ಪ ಅವರ ನಾಟಕ ಕಂಪನಿಯಲ್ಲಿ ನಾಯಕಿಯ ಪಾತ್ರ ನಿರ್ವಹಿಸುತ್ತಿದ್ದರು. ಅಲ್ಲಿ ಉಮೇಶ್ ಅವರನ್ನು ಭೇಟಿಯಾಗಿ ಅವರ ಮನೆಯವರನ್ನು ಒಪ್ಪಿಸಿ ಇಬ್ಬರು ವಿವಾಹವಾದರು. ಅಂದಿನಿಂದ ಇಬ್ಬರೂ ಸತಿ ಪತಿಗಳಾಗಿ ನಾಟಕಗಳಲ್ಲಿ ಅಭಿನಯಿಸಿದರು. ಈ ದಂಪತಿಗಳಿಗೆ ಚಂದ್ರಶೇಖರ್ ಹಾಗೂ ಜಯಲಕ್ಷ್ಮಿ ಮಕ್ಕಳು ಜನಿಸಿದರು. ಮಕ್ಕಳಿಗೂ ತಾವು ಅಪ್ಪ ಅಮ್ಮನಂತೆ ಕಲಾವಿದರಾಗಬೇಕು ಎಂಬ ಆಸೆಯಿತ್ತು. ಅದೇ ಹಾದಿಯಲ್ಲಿ ಅವರೂ ಸಾಗಿದರು.

ಗೋಲ್‌ಮಾಲ್ ರಾಧಾಕೃಷ್ಣ

ಅಯ್ಯಯ್ಯೋ.. ಅಪಾರ್ಥ ಮಾಡ್ಕೋಬೇಡಿ. ಈ ಡೈಲಾಗ್ ಕೇಳಿದಾಕ್ಷಣ ಇದು ಉಮೇಶಣ್ಣ ಅವರ ಡೈಲಾಗ್ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಗೋಲ್‌ಮಾಲ್ ರಾಧಾಕೃಷ್ಣ ಸಿನಿಮಾದ ಈ ಡೈಲಾಗ್ ಇನ್ನೂ ಜನಜನಿತ, ಇದರಲ್ಲಿ ಮುಗ್ಧ ಸೀತಾಪತಿಯಾಗಿ ಕಾಣಿಸಿಕೊಂಡ ಉಮೇಶ್ ಅವರು ಹಾಸ್ಯದ ಮೂಲಕ ಗಮನಸೆಳೆದರು. ಅಲ್ಲಿಂದ ಉಮೇಶ್ ಅವರಿಗೆ ಅಂತಹದ್ದೇ ಪಾತ್ರಗಳು ಅರಸಿ ಬಂದವು. ಬಹುತೇಕ ಸಿನಿಮಾಗಳಲ್ಲಿ ಮುಗ್ಧತೆಯ ಮೂಲಕವೇ ಮನಗೆದ್ದರು. ಅದರಂತೆ ಶ್ರುತಿ ಸೇರಿದಾಗ ಚಿತ್ರದಲ್ಲಿನ ಅವರ ಪಾತ್ರವನ್ನು ಯಾರೂ ಮರೆಯುವಂತಿಲ್ಲ. ಅದರಲ್ಲಿ ಹಾಡುಗಾರನಾಗಿ ತೋರಿದ ಅಭಿನಯ ಮರೆಯುವಂತಿಲ್ಲ. ಅದರ ಜತೆಗೆ ಅಣ್ಣಾವ್ರ ಜತೆಗೆ ಅಭಿನಯಿಸಿದ ಕಾಮಬಿಲ್ಲು ಸಿನಿಮಾದಲ್ಲಿನ ಸೈಕಲ್ ಸವಾರಿಯನ್ನು ಮರೆಯುವುದುಂಟೆ.

ಸಮಾಚಾರ ಸಣ್ಣದಲ್ಲ

ಸಿಎಂ ಕುರ್ಚಿ ಬಗ್ಗೆ ಚರ್ಚೆ ಅನಾವಶ್ಯಕ

ಬಾಗಲಕೋಟೆ: ಸಿಎಂ ಕುರ್ಚಿ ಬಗ್ಗೆ ಹೆಚ್ಚು ಚರ್ಚಿಸುವುದು ಅನಾವಶ್ಯಕ. ಬಿಜೆಪಿ ಹೈಕಮಾಂಡ್

ಬಗ್ಗೆ ಆ ಪಕ್ಷದ ನಾಯಕರು ಯಾವ ರೀತಿ ಪಾಲನೆ ಮಾಡುತ್ತಾರೆ, ಕಾಂಗ್ರೆಸ್ ಪಕ್ಷದ ಹೈಕ ಮಾಂಡ್ ಬಗ್ಗೆ ನಮ್ಮ ನಾಯಕರು ಯಾವ ರೀತಿ ಪಾಲನೆ ಮಾಡುತ್ತಾರೆ ಎಂಬುದನ್ನು ತುಲನೆ ಮಾಡಬೇಕು ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು. 'ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕು' ಎಂಬ ಬಿಜೆಪಿ ನಾಯಕರ ಹೇಳಿಕೆ ಪ್ರತಿಕ್ರಿಯಿಸಿದ ಅವರು, ಹಿಂದಿನ ಐದು ವರ್ಷಗಳಲ್ಲಿ ಬಿಜೆಪಿ ಸರಕಾರ ಹೇಗೆ ಆಡಳಿತ ನಡೆಸಿತ್ತು ಎನ್ನುವುದು ಗೊತ್ತಿದೆ. ಆಡಳಿತ ನಮ್ಮದು ನಿಂತು ಹೋಗಿಲ್ಲ. ವೇಗ ಗತಿಯಲ್ಲಿ ಆಡಳಿತ ನಡೆಯುತ್ತಿದೆ. ನಿಂತಿರುವುದು ವಿರೋಧ ಪಕ್ಷದ ಚಟುವಟಿಕೆಗಳು. ಸರಕಾರದ ಲೋಪಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡುವಲ್ಲಿ ಶಕ್ತಿಹೀನ ವಿರೋಧ ಪಕ್ಷ ಬಿಜೆಪಿ ಆಗಿದೆ ಎಂದು ಹೇಳಿದರು.

ನಕಲಿ ತುಪ್ಪ ಮಾರಾಟ ತಡೆಗೆ ಕ್ಯೂಆರ್ ಕೋಡ್

ಬೆಂಗಳೂರು: ನಂದಿನಿ ತುಪ್ಪವನ್ನು ಕಲಬೆರಕೆ ಮಾಡಿ ನಕಲಿ ತುಪ್ಪ ಮಾರಾಟ ಮಾಡುತ್ತಿರುವುದನ್ನು ತಡೆಯಲು ಕೆಎಂಎಫ್ ಕ್ಯೂಆರ್ ಕೋಡ್ ಬಳಸಲು ನಿರ್ಧರಿಸಿದೆ. ನಕಲಿ ನಂದಿನಿ ತುಪ್ಪ ಮಾರುಕಟ್ಟೆಗೆ ಬಂದಿದೆ ಎನ್ನುವ ವಿಚಾರ ಬಯಲಾಗುತ್ತಿದ್ದಂತೆಯೇ ಗ್ರಾಹಕರಲ್ಲಿ ಕಳವಳ ಶುರುವಾಗಿದ್ದು, ನಕಲಿ ನಂದಿನಿ ತುಪ್ಪಕ್ಕೆ ಬ್ರೇಕ್ ಹಾಕಲು ಕೆ.ಎಂ.ಎಫ್ ಮುಂದಾಗಿದೆ. ನಂದಿನಿ ಪ್ಯಾಕ್ ಮೇಲೆ ಕ್ಯೂಆರ್ ಕೋಡ್ ಮುದ್ರಿಸುವ ಚಿಂತನೆ ಮಾಡಲಾಗಿದೆ ಎಂದು ಕೆಎಂಎಫ್ ಎಂಡಿ ಶಿವಸ್ವಾಮಿ ಹೇಳಿದ್ದಾರೆ.ಇತ್ತೀಚೆಗೆ ಅಸಲಿ ಬ್ರ್ಯಾಂಡ್‌ಗಳ ಸ್ಟಿಕ್ಕರ್ ಬಳಸಿ ನಕಲಿ ವಸ್ತುಗಳನ್ನು ಮಾರಾಟ ಮಾಡುವ ಜಾಲ ಪತ್ತೆಯಾಗಿದೆ. ನಂದಿನಿ ತುಪ್ಪ ಕಲಬೆರಕೆ ತಪ್ಪಿಸಲು ಕೆಎಂಎಫ್ ಮುಂದಾಗಿದ್ದು, ಕ್ಯೂ ಆರ್ ಕೋಡ್ ಬಳಸಲು ನಿರ್ಧರಿಸಿದೆ. ಈ ಬಗ್ಗೆ ಕೆಎಂಎಫ್ ಅಧಿಕಾರಿಗಳು, ತಜ್ಞರ ಜತೆ ಚರ್ಚೆ ನಡೆಸಲಾಗಿದ್ದು, ಕ್ಯೂ ಆರ್ ಕೋಡ್ ಬಳಸಿದಲ್ಲಿ ತುಪ್ಪದ್ ಉತ್ಪಾದನೆ, ಪೂರೈಕೆ, ಯಾವ ಮಳಿಗೆ, ಯಾರಿಗೆ ಮಾರಾಟ ಮಾಡಿದ್ದಾರೆ ಎಂಬುದು ಈ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವುದರಿಂದ ತಿಳಿಯಲಿದೆ. ಆ ಮೂಲಕ ಗ್ರಾಹಕರು ಖರೀದಿ ಮಾಡಿರುವುದು ಅಸಲಿ ತುಪ್ಪವೋ, ನಕಲಿಯೋ ಎಂಬುದು ಗೊತ್ತಾಗಲಿದೆ. ಇದಕ್ಕೆ ಆಗುವ ಹೆಚ್ಚುವರಿ ವೆಚ್ಚವನ್ನು ಗ್ರಾಹಕರ ಮೇಲೆ ಹೊರೆಸದೇ ಕೆಎಂಎಫ್ ಭರಿಸಲು ಮುಂದಾಗಿದೆ.

ಸಿಎಂ, ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ | 2028ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರುವುದೇ ನಮ್ಮ ಗುರಿ

ನಾನೆಂದೂ ಬೆನ್ನಿಗೆ ಚೂರಿ ಹಾಕಲ್ಲ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾನು ಎಂದಿಗೂ ಬೆನ್ನಿಗೆ ಚೂರಿ ಹಾಕಲ್ಲ. ನೇರವಾಗಿ ಹೋರಾಟ ಮಾಡುವವನು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಗುಂಪುಗಾರಿಕೆ ಮಾಡುವುದಿಲ್ಲ. ಎಲ್ಲರೂ ಗಮನಿಸಿರುವಂತೆ ದೆಹಲಿಗೆ ಹೋದರೂ ಒಬ್ಬನೇ ಹೋಗುತ್ತೇನೆ. ಎಂಟರಿಂದ ಹತ್ತು ಶಾಸಕರನ್ನು ಕರೆದುಕೊಂಡು ಹೋಗಬಹುದಿತ್ತು. ಅದು ದೊಡ್ಡ ವಿಚಾರವಲ್ಲ. ನಾನು ಅಧ್ಯಕ್ಷ ಸ್ಥಾನದಲ್ಲಿರುವಾಗ ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗಬೇಕು. 140 ಶಾಸಕರೂ ನಮ್ಮ ನಾಯಕರೇ. ಯಾರಿಗೂ ತಾರತಮ್ಯ ಮಾಡಲ್ಲ. ಕುಮಾರಸ್ವಾಮಿಯವರ ಜತೆಯಲ್ಲಿಯೇ ನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಇದನ್ನು ಕುಮಾರಸ್ವಾಮಿಯವರು ಒಪ್ಪದೇ ಇರಬಹುದು, ನನ್ನ ನಿಷ್ಠೆ, ನನ್ನ ಆತ್ಮಸಾಕ್ಷಿ ಆ ದೇವರಿಗೆ ಗೊತ್ತಿದೆ. ಕುಮಾರಸ್ವಾಮಿಯವರ ಸರಕಾರ ಉಳಿಸಲು ಕೊನೇ ದಿನದವರೆಗೂ ಎಷ್ಟು ಪ್ರಯತ್ನ ಮಾಡಿದ್ದೇನೆ ಎಂದು ಅವರ ತಂದೆಯವರಿಗೂ ತಿಳಿದಿದೆ. ಅವರು ತಮ್ಮ ಆಸೆಗೆ ಏನಾದರೂ ಮಾತಾಡಿಕೊಳ್ಳಲಿ, ನಾನು ಬೇಸರ ಮಾಡಿಕೊಳ್ಳಲ್ಲ. ನಾನೆಂದಿಗೂ ಬೆನ್ನಿಗೆ ಚೂರಿ ಹಾಕಲ್ಲ. ನೇರವಾಗಿ ಹೋರಾಟ ಮಾಡುವವ ಎಂದರು.

ನನ್ನ ಮತ್ತು ಮುಖ್ಯಮಂತ್ರಿ ನಡುವೆ ಭಿನ್ನಾಭಿಪ್ರಾಯವಿಲ್ಲ. ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ರಾಜ್ಯದ ಜನ ನಮ್ಮ ಮೇಲೆ ಬಹಳ ನಿರೀಕ್ಷೆ ಹೊಂದಿದ್ದು, ನಾವು ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕು. 2028ರ ಚುನಾವಣೆ ನಮ್ಮ ಮುಂದಿನ ಗುರಿ. ಕೆ.ಸಿ.ವೇಣುಗೋಪಾಲ್ ಸೇರಿದಂತೆ ಜತೆ ಚರ್ಚೆ ಮಾಡಿದ್ದು, ಏನು ಚರ್ಚೆ ಮಾಡಿದ್ದೇವೆ ಎಂದು ಮಾಧ್ಯಮಗಳ ಮುಂದೆ ಬಹಿರಂಗಪಡಿಸುವುದಿಲ್ಲ ಎಂದು ತಿಳಿಸಿದರು.

ಸರ್ವಪಕ್ಷ ಸಭೆ ಬಗ್ಗೆ ಸಿಎಂ ಜತೆ ಚರ್ಚೆ:: ಕೇಂದ್ರ ಸಚಿವರು, ಸಂಸದರ ಭೇಟಿಯ ಹೊರತಾಗಿ ಪಕ್ಷ ಹಾಗೂ ರಾಜಕೀಯ ಉದ್ದೇಶದಿಂದ ದೆಹಲಿ ಪ್ರಯಾಣ ಮಾಡುತ್ತೀರಾ ಎಂದು ಕೇಳಿದಾಗ, ನಾನು ಮತ್ತು ಮುಖ್ಯಮಂತ್ರಿ ಈಗ ಚರ್ಚೆ ಮಾಡಿದ್ದು, ಮುಂದೆಯೂ ಮಾತನಾಡುತ್ತೇವೆ. ನೀರಾವರಿ, ಮೆಕ್ಕೆಜೋಳ ಹಾಗೂ ಕಬ್ಬು ಬೆಳೆ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತುವ ಬಗ್ಗೆ ಸಂಸದರ ಜತೆ ಚರ್ಚೆ ಮಾಡಬೇಕು. ಸರ್ವಪಕ್ಷ ಸಭೆ ಕರೆಯಬೇಕಿದ್ದು, ಈ ಸಭೆಯಲ್ಲಿ ಎಲ್ಲ ಸಂಸದರು ಭಾಗವಹಿಸಬೇಕು. ಹೀಗಾಗಿ ಸಭೆಯನ್ನು ದೆಹಲಿಯಲ್ಲಿ ಮಾಡಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಸಿಎಂ ಏನು ಹೇಳುತ್ತಾರೆ ಕೇಳುತ್ತೇನೆ. ನಾನೊಬ್ಬನೇ ಹೋಗಿ ಎಲ್ಲರ ಸಭೆ ಮಾಡುವುದು ಸರಿಯಲ್ಲ. ಸಭೆಯಲ್ಲಿ ರಾಜ್ಯದ ಇತರ ಸಚಿವರೂ ಇರಬೇಕು ಎಂದರು.

ಕುಮಾರಸ್ವಾಮಿಗೆ ಯಾರ ಬೆಂಬಲವೂ ಬೇಕಿಲ್ಲ

ಕುಮಾರಸ್ವಾಮಿ ಅವರು ಬಹಳ ದೊಡ್ಡವರು, ಅವರು ಯಾರ ಬೆಂಬಲವನ್ನೂ ಪಡೆಯುವುದಿಲ್ಲ, ಒಕ್ಕಲಿಗರ ಮಠ, ಒಕ್ಕಲಿಗರ ಸಂಘ, ಒಕ್ಕಲಿಗ ಜಾತಿಯನ್ನು ಎಂದೂ ಉಪಯೋಗಿಸಿಕೊಂಡಿಲ್ಲ. ಪಾಪ, ಕುಮಾರಣ್ಣನಿಗೆ ಒಕ್ಕಲಿಗರ ಎರಡನೇ ಮಠ ಹೇಗಾಯಿತು ಎಂಬುದು ಗೊತ್ತಿಲ್ಲವೇ? ಅದನ್ನು ಕಟ್ಟಿದವರು ಯಾರು? ಒಕ್ಕಲಿಗ ಮಠದ ಹಿರಿಯ ಸ್ವಾಮೀಜಿಗಳು ಇಲ್ಲದಿದ್ದರೆ ದೇವೇಗೌಡರು ಸಿಎಂ ಆಗುತ್ತಿದ್ದರೇ? ಅಂದು ದೇವೇಗೌಡರ ಪರ ಸ್ವಾಮೀಜಿಗಳು ರಸ್ತೆಗೆ ಇಳಿಯಲಿಲ್ಲವೇ? ಸದಾನಂದ ಗೌಡರಿಗೆ ತೊಂದರೆ ಆದಾಗ ಸ್ವಾಮೀಜಿಗಳು ಸುಮ್ಮನೆ ಕೂತಿದ್ದರಾ? ಕೆಲವು ಸಂದರ್ಭದಲ್ಲಿ ಸ್ವಾಮೀಜಿಗಳು ಮಾತನಾಡುತ್ತಾರೆ. ಅದರಲ್ಲಿ ತಪ್ಪೇನಿದೆ? ಬೇರೆ ಸಂದರ್ಭದಲ್ಲಿ ಸ್ವಾಮೀಜಿಗಳು ಮಾತನಾಡಿದಾಗ ನಾನು ಬೇಸರ ಮಾಡಿಕೊಂಡಿದ್ದೇನಾ? ಎಂದು ತಿರುಗೇಟು ನೀಡಿದರು. ನಾನು ಸ್ವಾಮೀಜಿ ಬೆಂಬಲ ಕೇಳಿಲ್ಲ ಎಂಬ ಕುಮಾರಸ್ವಾಮಿ ಹೇಳಿಕೆಗೆ, ನಾನು ಕೇಳಿದ್ದೇನಾ? ನಾನು ಕೂಡ ಯಾರ ಬೆಂಬಲವನ್ನೂ ಕೇಳಿಲ್ಲ. ಅವರು ಪ್ರೀತಿಯಿಂದ ಮಾತಾಡಿದರೆ ಬೇಡ ಎನ್ನಲು ಸಾಧ್ಯವೇ? ನಾನು ಒಂದು ಸಮುದಾಯದಲ್ಲಿ ಹುಟ್ಟಿದ್ದರೂ ಎಲ್ಲಾ ಸಮುದಾಯಗಳನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ಬಾಳೆಹೊನ್ನೂರು ಸ್ವಾಮಿಜಿ, ಶ್ರೀಶೈಲ ಸ್ವಾಮೀಜಿಗಳು ಸೇರಿದಂತೆ ಸಾಕಷ್ಟು ಸ್ವಾಮೀಜಿಗಳು ನನ್ನ ಪರ ಮಾತನಾಡಿದ್ದಾರೆ. ನನ್ನ ಮೇಲೆ ಅವರಿಗೆ ಪ್ರೀತಿ, ವಿಶ್ವಾಸ ಇದೆ. ಹೀಗಾಗಿ ಮಾತನಾಡಿದ್ದಾರೆ. ಜೈನ ಸ್ವಾಮೀಜಿಗಳೂ ಕೂಡ ದೊಡ್ಡ ಸಮಾವೇಶದಲ್ಲಿ ಬಹಿರಂಗವಾಗಿ ಆಶೀರ್ವಾದ ಮಾಡಿದರು. ಧರ್ಮಸ್ಥಳಕ್ಕೆ ಹೋದಾಗಲೂ ನನಗೆ ಬೆಂಬಲ ನೀಡಿದರು. ಅದನ್ನು ತಪ್ಪು ಎಂದು ಹೇಳಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಅಪ್ಪ, ಮಗನ ಭೇಟಿಗೆ ಅರ್ಜಿ ಹಾಕಿಕೊಳ್ಳಬೇಕೇ?

ದೆಹಲಿಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವ ಬಗ್ಗೆ ಕೇಳಿದಾಗ, ಅಪ್ಪ ಮಗನ ಭೇಟಿಗೂ ನೀವು ಅರ್ಥ ಕಲ್ಪಿಸುತ್ತೀರಾ? ಅಪ್ಪ, ಮಕ್ಕಳ ಭೇಟಿಗೂ ಅರ್ಜಿ ಹಾಕಿಕೊಳ್ಳಬೇಕಾ? ಪ್ರಿಯಾಂಕ್ ಖರ್ಗೆ ಅವರು ಎಐ ತಂತ್ರಜ್ಞಾನದ ಅತ್ಯುತ್ತಮ ಸಾಧನ ಪರಿಚಯಿಸಿದ್ದಾರೆ. ಇದರ ಉದ್ಘಾಟನೆಗೆ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಿ ದೆವು. ಅವರು ಬರಲು ಆಗಿರಲಿಲ್ಲ. ಹೀಗಾಗಿ ರಾಹುಲ್ ಗಾಂಧಿ ಅವರು ಅದರ ಬಗ್ಗೆ ಮಾಹಿತಿ ಪಡೆಯಲು ಕರೆದಿದ್ದರು. ಹೀಗಾಗಿ ಪ್ರಿಯಾಂಕ್ ಖರ್ಗೆ, ಶರತ್ ಬಚ್ಚೇಗೌಡ ಅವರನ್ನು ಕರೆಸಿ ಅವ ರಿಂದ ಮಾಹಿತಿ ಪಡೆದಿದ್ದಾರೆ. ಇಲ್ಲೂ ರಾಜಕೀಯ ಮಾತನಾಡಿದ್ದಾರೆ ಎಂದು ಹೇಳಲು ಸಾಧ್ಯವೇ? ಅಪ್ಪ ಮಕ್ಕಳು, ಅಣ್ಣ ತಮ್ಮ ಸೇರಿದಾಗ ರಾಜಕೀಯವೇ? ಬೇರೆಯವರು ಸೇರಿದಾಗ ನಿಮಗೆ ಲೆಕ್ಕಕ್ಕೆ ಇರುವುದಿಲ್ಲ ಎಂದರು.

> ನಮ್ಮ ಮನಃಶಾಂತಿಗಾಗಿ ನಮ್ಮ ಕೆಲಸ ಮಾಡುತ್ತೇವೆ. ದೇವಾಲಯ, ಮಸೀದಿ, ಚರ್ಚ್, ಜೈನ ಬಸದಿಗೆ ಹೋಗಿ ಪೂಜೆ ಪ್ರಾರ್ಥನೆ ಸಲ್ಲಿಸುತ್ತೇವೆ. ಇದನ್ನು ಟೆಂಪಲ್ ರನ್ ಎನ್ನುವ ಅಗತ್ಯವೇನು? ನಮ್ಮ ಹಿರಿಯರು ಕೊಟ್ಟ ಮಾರ್ಗದರ್ಶನದ ಪ್ರಕಾರ ನಾನು ನಿತ್ಯ ಬೆಳಗ್ಗೆ ಪೂಜೆ ಮಾಡದೇ ಮನೆಯಿಂದ ಆಚೆ ಬರುವುದಿಲ್ಲ. ಸರಕಾರ ದೇವಾಲಯ ಮುಚ್ಚಲು ಸಾಧ್ಯವೇ? ಗ್ರಾಮೀಣ ಭಾಗದ ದೇವಾಲಯ ಅಭಿವೃದ್ಧಿಗೆ ಬಂಗಾರಪ್ಪನವರ ಕಾಲದಲ್ಲಿ ಆರಾಧನಾ ಯೋಜನೆ ಜಾರಿಗೆ ತಂದಿದ್ದರು.
>
> – ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಜೈಲುಗಳಲ್ಲಿ ಎನ್‌ಐಎ ತನಿಖೆ?

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು. ರಾಷ್ಟ್ರ ರಾಜಧಾನಿಯಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ವಿಚಾರಣೆ ಮುಂದುವರಿಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ, ಇದೀಗ ದೆಹಲಿ ಸ್ಫೋಟಕ್ಕೂ ಕರ್ನಾಟಕದ ಜೈಲುಗಳಲ್ಲಿರುವ ಉಗ್ರರಿಗೂ ಏನಾದರೂ ಸಂಬಂಧವಿದೆಯೇ ಎನ್ನುವ ಆಯಾಮದಲ್ಲಿ ತನಿಖೆ ಆರಂಭಿಸಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರ, ಬೆಳಗಾವಿಯ ಹಿಂಡಲಗಾ, ಬಳ್ಳಾರಿ ಜೈಲಿನಲ್ಲಿರುವ ಉಗ್ರರು ಜೈಲಿನಲ್ಲಿದ್ದುಕೊಂಡೇ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದಾರೆ ಎನ್ನುವುದನ್ನು ಎನ್‌ಐಎ ಪತ್ತೆ ಮಾಡಿದೆ ಎಂದು ಮೂಲಗಳು ತಿಳಿಸಿವೆ. ಪರಪ್ಪನ ಅಗ್ರಹಾರ ಹಾಗೂ ಹಿಂಡಲಗಾ ಜೈಲಿನಲ್ಲಿ ಸುಮಾರು 300ಕ್ಕೂ ಹೆಚ್ಚು ಉಗ್ರರಿದ್ದಾರೆ. ಕೆಲ ಉಗ್ರರು ಜೈಲಿನಿಂದಲೇ ಐಸಿಎಸ್, ಲಷ್ಕರ್ ಎ-ತೋಯ್ಬಾ, ಅಲ್-ಖೈದಾ, ಜೈಷೆ ಉಗ್ರ ಸಂಘಟನೆಗಳ ಜತೆ ಸಂಪರ್ಕ ಹೊಂದಿರುವ ಬಗ್ಗೆ ಮಾಹಿತಿ ಸಿಕ್ಕಿದ್ದು, ಆ ನಿಟ್ಟಿನಲ್ಲಿ ತನಿಖೆ ಆರಂಭಿಸಿದ್ದಾರೆ ಎನ್ನಲಾಗಿದೆ.

ಇತ್ತೀಚೆಗೆ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ಉಗ್ರರು, ವಿಚಾರಣಾಧೀನ ಶಂಕಿತ ಉಗ್ರರು ಮೊಬೈಲ್ ಬಳಕೆ ಮಾಡಿರುವ ವಿಡಿಯೊಗಳು ಭಾರಿ ಚರ್ಚೆಗೆ ಕಾರಣವಾಗಿತ್ತು. ಅದರಲ್ಲಿಯೂ ಐಸಿಎಸ್ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ಜೈಲಿನಲ್ಲಿ ವಿಶೇಷ ಆತಿಥ್ಯ ಪಡೆದುಕೊಂಡಿದ್ದ ಎನ್ನುವ ಆರೋಪ ಕೇಳಿಬಂದಿತ್ತು. ಆದ್ದರಿಂದ ಜುಹಾದ್‌ಗೂ, ಬಾಂಬ್ ಸ್ಫೋಟಕ್ಕೂ ಏನಾದರೂ ಸಂಬಂಧವಿದೆಯೇ ಎನ್ನುವ ನಿಟ್ಟಿನಲ್ಲಿ ತನಿಖೆ ನಡೆಸಲಾಗುತ್ತಿದೆ.

ದೇಶಾದ್ಯಂತ ಬಾಂಬ್ ಸ್ಫೋಟದ ಸಂಚು ರೂಪಿಸಿದ್ದ ಉಗ್ರ ಟಿ.ನಾಸೀರ್‌ಗೆ ಜೈಲಿನಲ್ಲಿ ರಾಜಾತಿಥ್ಯ ಹಾಗೂ ಮೊಬೈಲ್ ನೆರವು ನೀಡಿದ್ದ ಜೈಲಿನ ಎಎಸ್‌ಐ ಚಾಂದ್ ಪಾಷಾನನ್ನು ಬಂಧಿಸಲಾಗಿತ್ತು. ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಉಗ್ರ ಟಿ.ನಾಸೀರ್, ನಿರಂತರವಾಗಿ ಐಸಿಎಸ್ ಹಾಗೂ ವಿವಿಧ ಉಗ್ರ ಸಂಘಟನೆ ಮುಖಂಡರೊಂದಿಗೆ ಸಂಪರ್ಕ ಹೊಂದಿದ್ದ. ಈ ರೀತಿ ಪದೇ ಪದೆ ಜೈಲಿನಲ್ಲಿ ಮೊಬೈಲ್ ಬಳಕೆಯ ಪ್ರಕರಣಗಳು ಬೆಳಕಿಗೆ ಬರುತ್ತಿರುವುದರಿಂದ ಎನ್‌ಐಎ ತನಿಖೆ ಆರಂಭಿಸಿದೆ.

> ಜೈಲಿನಲ್ಲಿರುವ ಕೈದಿಗಳಿಗೆ ರಾಜಾತಿಥ್ಯ ಸಿಗುತ್ತಿರುವುದಕ್ಕೆ ಕಾಂಗ್ರೆಸ್ ಸರಕಾರದ ತುಷ್ಟೀಕರಣವೇ ಕಾರಣ ಎನ್ನುವುದರಲ್ಲಿ ಅನುಮಾನ ವಿಲ್ಲ. ಕರ್ನಾಟಕದ ಜೈಲುಗಳು ಉಗ್ರರ ಸ್ಲಿಪರ್ ಸೆಲ್‌ಗಳಾಗಿ ಮಾರ್ಪ ಟ್ಟಿರುವ ಶಂಕೆ ಇದ್ದು, ಕೇಂದ್ರ ಸರಕಾರ ಮಧ್ಯಪ್ರವೇಶಿಸಿ ಎನ್‌ಐಎ ತನಿಖೆ ನಡೆಸಬೇಕು ಎಂದು ಈ ಹಿಂದೆ ಅಮಿತ್ ಶಾ ಅವರಿಗೆ ಮನವಿ ಮಾಡಿದ್ದೆ. ಈಗ ಕೇಂದ್ರ ಸರಕಾರ ಕರ್ನಾಟಕದ ಜೈಲುಗಳಲ್ಲಿ ಉಗ್ರರ ನಂಟು ಹೊಂದಿರುವ ಕೈದಿಗಳ ವಿಚಾರಣೆಗೆ ಮುಂದಾಗಿರುವುದು ಒಳ್ಳೆಯ ಬೆಳವಣಿಗೆ.
>
> – ಆರ್.ಅಶೋಕ
> ವಿಧಾನಸಭೆ ಪ್ರತಿಪಕ್ಷ ನಾಯಕ

ಅರಣ್ಯ ಸಿಬ್ಬಂದಿ ಗುಂಡೇಟು: ಚಿರತೆ ಸಾವು

ಚಿಕ್ಕಮಗಳೂರು: ತರೀಕೆರೆ ತಾಲೂಕಿನ ಭೈರಾಪುರ ಬಳಿ ಚಿರತೆ ಸೆರೆ ಕಾರ್ಯಾಚರಣೆ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ಹಾರಿಸಿದ ಗುಂಡಿಗೆ ಚಿರತೆ ಮೃತಪಟ್ಟಿದೆ.

ನ.20ರಂದು ಶಿವಪುರ ಗ್ರಾಮದ ಕಲ್ಲು ಕ್ವಾರಿ ಬಳಿಯ ಶೆಡ್‌ನಲ್ಲಿ ವಾಸವಿದ್ದ ಕಾರ್ಮಿಕ ದಂಪತಿಯ 5 ವರ್ಷದ ಮಗುವನ್ನು ಪೋಷಕರ ಎದುರೇ ಚಿರತೆಯೊಂದು ಹೊತ್ತೊಯ್ದಿತ್ತು. ಬಳಿಕ ಬಾಲಕಿಯ ಮೃತದೇಹ ದೊರೆತಿತ್ತು. ನ.28ರಂದು ಭೈರಾಪುರ 10 ವರ್ಷದ ಬಾಲಕನ ಮೇಲೆ ದಾಳಿ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಸಕ್ರೆಬೈಲಿನಿಂದ ಮೂರು ಸಾಕಾನೆಗಳು, ಮಂಗಳೂರು, ಬಂಡೀಪುರ, ಬನ್ನೇರುಘಟ್ಟ, ತಾವರೆಕಪ್ಪ ಮೃಗಾಲಯದಿಂದ ಪಶುವೈದ್ಯರನ್ನು ಕರೆಸಿ ಅರಣ್ಯ ಇಲಾಖೆ ಚಿರತೆ ಸೆರೆ ಕಾರ್ಯಾಚರಣೆ ಆರಂಭಿಸಿತ್ತು. ಈ ಹಿಂದೆ ಬೋನಿನ ಅನುಭವ ಇರುವುದರಿಂದ ಚಿರತೆ ಬೋನಿಗೆ ಬಿದ್ದಿಲ್ಲ. ಭೈರಾಪುರ ಬಳಿ ಕಾಣಿಸಿಕೊಂಡ ಚಿರತೆಯನ್ನು ಸಿಬ್ಬಂದಿ ಹಿಂಬಾಲಿಸಿದ್ದರು. ಲಂಟಾನದಲ್ಲಿದ್ದ ಚಿರತೆ ಸಿಬ್ಬಂದಿಯ ಮೇಲೆ ಎರಗಿದಾಗ ಗುಂಡು ಹಾರಿಸಲಾಯಿತು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಪಕ್ಷ ಬಲವರ್ಧನೆಗಾಗಿ ಸಭೆ

ಬಾಗಲಕೋಟೆ: ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಭೆ ಸೇರಿರುವುದು ಪಕ್ಷ ಬಲವರ್ಧನೆಗಾಗಿ. ರಾಜಕಾರಣದಲ್ಲಿ ಅಭಿಪ್ರಾಯ, ವ್ಯತ್ಯಾಸ ಇರುತ್ತವೆ. ಅವುಗಳನ್ನು ಬಗೆಹರಿಸುತ್ತಾರೆ ಎಂದು ಸಚಿವ ಎಚ್.ಕೆ.ಪಾಟೀಲ ಹೇಳಿದರು.

'ಸಿಎಂ ಹಾಗೂ ಡಿಸಿಎಂ ನಡುವೆ ಎರಡೂವರೆ ವರ್ಷ ಒಪ್ಪಂದ ಆಗಿತ್ತಾ?' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಮಗೆ ಗೊತ್ತಿರಬಹುದು, ಇರಲಿಕ್ಕಿಲ್ಲ. ಗೊತ್ತಿದ್ದರೂ ಹೈಕಮಾಂಡ್ ನಮಗೆ ಒಂದು ನಿರ್ದೇಶನ ಕೊಟ್ಟಿದೆ. ಈ ಮಾತುಕತೆ ಬಗ್ಗೆ ಹಾಗೂ ನಾಯಕತ್ವದ ಬಗ್ಗೆ ಯಾವುದೇ ಅಭಿಪ್ರಾಯವನ್ನು ಮಾಧ್ಯಮದವರ ಜತೆಗೆ ಮಾತನಾಡತಕ್ಕದ್ದಲ್ಲ ಎಂದು ಖರ್ಗೆ ಅವರು ಹೇಳಿದ್ದಾರೆ. ಅವರ ಆದೇಶವನ್ನು ಎಲ್ಲಿಯೂ ತಪ್ಪದ ಹಾಗೆ ನಡೆಸಿಕೊಂಡು ಬರುತ್ತೇವೆ. ನಾವೆಲ್ಲ ಶಿಸ್ತಿನ ವ್ಯಕ್ತಿಗಳು ಎಂದರು.

> ಸಿಎಂ, ಡಿಸಿಎಂ ಜಗಳ ಮಾಡುತ್ತಾರೆ ಎಂದು ಸುದ್ದಿ ಮಾಡಿದ್ದೀರಿ. ನಿನ್ನೆ ಇಬ್ಬರೂ ಸೇರಿ ಉಪ್ಪಿಟ್ಟು ತಿಂದಿದ್ದಾರೆ. ಸರಕಾರ ಉತ್ತಮ ಕಾರ್ಯಕ್ರಮ ಮಾಡಿದ್ದರಿಂದ ಕೆಲವರು ಅಸೂಯೆಯಿಂದ ಕಾಡುತ್ತಿದ್ದಾರೆ. ಗ್ಯಾರಂಟಿ ಯಶಸ್ಸಿನಿಂದ ಕೆಲವರಿಗೆ ಅಸಮಾಧಾನ ಆಗಿದೆ. ಅವೆಲ್ಲವುಗಳನ್ನು ಎದುರಿಸಿ ಸರಕಾರದ ಸಾಧನೆ ಬಿಂಬಿಸುವದಕ್ಕೆ ಈ ಬಾರಿ ಅಧಿವೇಶನ ಉಪಯೋಗ ಮಾಡಿಕೊಳ್ಳುತ್ತೇವೆ.
>
> – ಎಚ್.ಕೆ.ಪಾಟೀಲ ಸಚಿವ

ವಿಶ್ವವಾಣಿ

ಸಂಪಾದಕೀಯ

ಉಳುವಾ ಯೋಗಿಯ ನೋಡಿಲ್ಲಿ...

ದೇಶವನ್ನು ಸಂರಕ್ಷಿಸುವ ಯೋಧ ಮತ್ತು ದೇಶಕ್ಕೇ ಅನ್ನ ಕೊಡುವ ರೈತ ಇಬ್ಬರೂ ಪ್ರಾತಃಸ್ಮರಣೀಯರು ಎಂಬುದು ಸಹೃದಯಿಗಳ ಮನದಾಳದ ಮಾತು. ಇವರಿಬ್ಬರೂ ತಂತಮ್ಮ ಕಾರ್ಯದಿಂದ ವಿಮುಖವಾದರೆ ಎದುರಾಗುವ ಅರಾಜಕತೆ-ಅಭದ್ರತೆ-ಅನಿಶ್ಚಿತತೆಗಳನ್ನು ಪದಗಳಲ್ಲಿ ವಿವರಿಸಲಾಗದು. ಈ ಪೈಕಿ, ರೈತ ಬಾಂಧವರ ಬದುಕು ದಶಕಗಳು ಕಳೆದರೂ ಹಸನಾಗದಿರುವುದರ ಕುರಿತು ಅಲ್ಲಲ್ಲಿ ವಿಷಾದ ವ್ಯಕ್ತವಾಗುವುದುಂಟು. ಇದರಲ್ಲಿ ತಥ್ಯವಿಲ್ಲದಿಲ್ಲ. ಆದರೆ, ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ರೈತರೂ ಒಂದಿಷ್ಟು ವಿನೂತನ ಪ್ರಯೋಗಗಳಿಗೆ ಮುಂದಾಗಬೇಕಾದ ಅಗತ್ಯವಿದೆ. ನಾರಾಯಣ ಅರ್ಜುನ ಸಾಳುಂಕೆ ಎಂಬ ಮಾಜಿ ಯೋಧರೊಬ್ಬರು ಮಾಡಿರುವ ಪ್ರಯೋಗವು ಈ ನಿಟ್ಟಿನಲ್ಲಿ ಮೇಲ್ಪಂಕ್ತಿಯಾಗಬಲ್ಲದು. ವಿಜಯಪುರ ಜಿಲ್ಲೆಯ ಗೋಳಸಂಗಿ ಗ್ರಾಮದವರಾದ ಇವರು ಕೃಷಿಗೆ ವೈಶಿಷ್ಟ್ಯದ ಲೇಪ ನೀಡುವ ಯತ್ನದ ಭಾಗವಾಗಿ, ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು, ಪ್ರತಿ ಎಕರೆಗೆ 100ರಿಂದ 120 ಟನ್ ಕಬ್ಬು ಬೆಳೆಯುವ ಸಾಧನೆ ಮಾಡಿರುವುದು ವರದಿಯಾಗಿದೆ. ಸಾಮಾನ್ಯವಾಗಿ ಕಬ್ಬಿನಲ್ಲಿ 18ರಿಂದ 20 ಗಣಿಕೆ ಕಂಡುಬಂದರೆ, ಇವರು ಬೆಳೆದಿರುವ ವಿಶಿಷ್ಟ ತಳಿಯ ಕಬ್ಬು 28ರಿಂದ 35 ಗಣಿಕೆವರೆಗೂ ಬೆಳೆದಿದೆ ಎನ್ನಲಾಗಿದೆ. ಈ ಸಾಧನೆಯಿಂದ ಪ್ರೇರಿತರಾದ ಮಹಾರಾಷ್ಟ್ರ, ಪಂಜಾಬ್ ಮುಂತಾದ ರಾಜ್ಯಗಳ ರೈತರು ಮತ್ತು ಕೃಷಿ ವಿಜ್ಞಾನಿಗಳು ಈ ಕಬ್ಬು ಕೃಷಿಕರನ್ನು ಭೇಟಿಯಾಗಿ ಮಾಹಿತಿ ಪಡೆಯುತ್ತಿದ್ದಾರೆ ಎಂಬುದು ಹೆಮ್ಮೆಯ ಸಂಗತಿ. ಇದೇ ರೀತಿಯಲ್ಲಿ, ಮತ್ತಿತರ ವಾಣಿಜ್ಯ ಬೆಳೆಗಳು ಮತ್ತು ಆಹಾರ ಧಾನ್ಯಗಳ ಕೃಷಿಯಲ್ಲೂ ಏನೇನು ವಿನೂತನ ಕ್ರಮಗಳನ್ನು ಕೈಗೊಂಡು, ಕೃಷಿ ಉತ್ಪನ್ನಗಳ ಇಳುವರಿಯಲ್ಲಿ ಕ್ರಾಂತಿಯನ್ನು ಉಂಟುಮಾಡಬಹುದು ಎಂಬುದರ ಕಡೆಗೆ ಗಮನಹರಿಸಬೇಕಿದೆ. ಕೃಷಿ ಪ್ರಧಾನ ದೇಶ ಎಂದೇ ಕರೆಸಿಕೊಂಡಿರುವ ಭಾರತ ಈ ನಿಟ್ಟಿನಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳಬೇಕು.

ಸೊಂಪಾದಕೀಯ

'ಫೈನ್' ಸಿಟಿ ಬೆಂಗಳೂರು!

ನಮ್ಮ ಬೆಂಗಳೂರು ನಗರ ಏನಕ್ಕೆ ಫೇಮಸ್ ಅಂತ ಕೇಳಿದ್ರೆ, ಕ್ಲಾಸಿಗೆ ಹೋಗದ ಮಕ್ಕಳು ಕೂಡಾ 'ಟ್ರಾಫಿಕ್ಕಿಗೆ' ಅಂತ ಸುಲಭವಾಗಿ ಹೇಳಬಲ್ಲರು. ಅದು ನಿಜ ಕೂಡಾ. ಬೆಂಗಳೂರು ದೇಶದ ಜನರಿಗೆ ಬದುಕಲು ಎಷ್ಟು ಸುಂದರ ನಗರವೋ ಟ್ರಾಫಿಕ್ ವಿಷಯದಲ್ಲಿ ಅಷ್ಟೇ ಕಿರಿಕಿರಿ ಮೂಡಿಸುವ ನಗರವೂ ಹೌದು. ಆದರೆ ಅದರ ಜತೆಗೆ ಬೆಂಗಳೂರು ನಗರದ ನಾಗರಿಕರು ಟ್ರಾಫಿಕ್ ನಿಯಮಗಳನ್ನು ಮೀರುವುದರಲ್ಲೂ ಎತ್ತಿದ ಕೈ. ಅದಕ್ಕಾಗಿ ಎಷ್ಟೇ ದಂಡ ತೆತ್ತರೂ ಅವರು ಬುದ್ಧಿ ಕಲಿಯೊಲ್ಲ. ಈಗಂತೂ ನಗರ ಟ್ರಾಫಿಕ್

ಪೊಲೀಸರು ಸಾಕಷ್ಟು ತಂತ್ರಜ್ಞಾನದ ಬಳಕೆ ಮಾಡುತ್ತಿದ್ದಾರೆ. ಆದರೆ ನಮ್ಮ ನಾಗರಿಕರು ಮಾತ್ರ ಟ್ರಾಫಿಕ್ ನಿಯಮ ಮೀರಬಾರದು ಅನ್ನೋ ಸಾಮಾನ್ಯ ಜ್ಞಾನವನ್ನು ಬಳಸುತ್ತಿಲ್ಲ. ಅದರ ಪರಿಣಾಮವಾಗಿ ದಂಡ ವಸೂಲಾತಿ ಇಳಿಯುವ ಪೊಲೀಸರು ಸಾರ್ವಜನಿಕರಿಂದ ವಸೂಲಿ ಮಾಡುವ ಹಣದ ಮೊತ್ತವು ಕೋಟಿಗಳಲ್ಲಿ ಇರುತ್ತದೆಯಂತೆ. ಅಂದರೆ, ನಮ್ಮ ಸಾರ್ವಜನಿಕರು ಈ ದಂಡ ವಸೂಲಾತಿ ಫಂಡ್‌ಗೆ ಉದಾರವಾಗಿ ದೇಣಿಗೆ ನೀಡುತ್ತಿದ್ದಾರೆ ಅಂತಾಯಿತು. ಇದು ನಮ್ಮ ಜನರು ರಸ್ತೆಯಲ್ಲಿ ವಾಹನ ಚಲಾಯಿಸುವಾಗ ತೋರಿಸುವ ಬೇಜವಾಬ್ದಾರಿತನ. ಇದಲ್ಲದೆ ರೋಡ್ ರೇಜ್ ಪ್ರಕರಣ ಕೂಡಾ ತುಂಬಾ ಸದ್ದು ಮಾಡುತ್ತಿದೆ. ಸಣ್ಣ ಜಗಳದಂತೆ ಶುರುವಾಗೋ ಈ ಪ್ರಕರಣಗಳಲ್ಲಿ ಕೆಲವರು ಪ್ರಾಣ ಕಳೆದುಕೊಳ್ಳುತ್ತಿ ರುವುದೂ ಉಂಟು. ಸುಮಾರು ತಿಂಗಳ ಹಿಂದೆ, ಪಬ್‌ನ ಬೌನ್ಸರ್ ಒಬ್ಬ ತನ್ನ ಮುಂದಿನ ಗಾಡಿ ಸಡನ್ ಆಗಿ ಬ್ರೇಕ್ ಹಾಕಿದ್ದಕ್ಕೆ ಅವನ ಗಾಡಿಗೆ ತನ್ನ ಗಾಡಿ ಗುದ್ದಿ ಬೌನ್ಸ್ ಆಯಿತು ಅಂತ ಕಾರಿನವರ ಮೇಲೆ ಹಲ್ಲೆ ಮಾಡಿ ಪೊಲೀಸರ ಅತಿಥಿ ಆಗಿದ್ದ ಸುದ್ದಿಯನ್ನೂ ನೀವು ಓದಿರುತ್ತೀರಿ. ನಮ್ಮ ವ್ಯವಸ್ಥೆ ಈ ರೀತಿ ಹದಗೆಟ್ಟಿರೋದನ್ನು ನೋಡಿದಾಗ ಸಂಚಾರ ನಿಯಮ ಉಲ್ಲಂಘನೆ ಜತೆಗೆ ರಸ್ತೆಯಲ್ಲಿ ಧಿಮಾಕು ತೋರಿಸುವ ದುರಂಹಂಕಾರಿಗಳಿಗೂ ಸರಿಯಾದ ಶಾಸ್ತಿ ಮಾಡುವ ಅಗತ್ಯ ಇದೆ ಅನ್ನಿಸೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಎಟಿಸಿ ಕಾರ್ಯನಿರ್ವಹಣೆ ಹೇಗೆ?

ವಿಮಾನ ನಿಲ್ದಾಣದಲ್ಲಿ ನೀವು ನೋಡುವ ಎತ್ತರದ ಗೋಪುರ (ಎಟಿಸಿ ಟವರ್) ಮತ್ತು ಅದರ ಒಳಗೆ ನಡೆಯುವ ಕೆಲಸಗಳು ಅತ್ಯಂತ ರೋಚಕ ಮತ್ತು ಕುತೂಹಲಕಾರಿ. ಆಕಾಶದಲ್ಲಿ ಸಾವಿರಾರು ವಿಮಾನಗಳು ಹಾರುತ್ತಿದ್ದರೂ ಅವು ಒಂದಕ್ಕೊಂದು ಡಿಕ್ಕಿ ಹೊಡೆಯದಂತೆ ನೋಡಿಕೊಳ್ಳುವವರು ಈ 'ಏರ್ ಟ್ರಾಫಿಕ್ ಕಂಟ್ರೋಲರ್‌ಗಳು' (ಎಟಿಸಿ). ಇವರನ್ನು 'ಆಕಾಶದ ಅದೃಶ್ಯ ಟ್ರಾಫಿಕ್ ಪೊಲೀಸರು' ಎಂದು ಕರೆಯಬಹುದು. ಎಟಿಸಿ ಒಳಗೆ ಏನಿರುತ್ತದೆ? ಅಲ್ಲಿ ಎಷ್ಟು ಜನರಿರುತ್ತಾರೆ? ಮತ್ತು ಅದು ಹೇಗೆ ಕೆಲಸ ಮಾಡುತ್ತದೆ? ಏರ್ ಟ್ರಾಫಿಕ್ ಕಂಟ್ರೋಲ್ ಆಕಾಶದ ಸುರಕ್ಷತೆಯ ಬೆನ್ನೆಲುಬು. ವಿಮಾನವನ್ನು ಓಡಿಸುವುದು ಪೈಲಟ್ ಆದರೂ, ಆ ಪೈಲಟ್‌ಗೆ ಕಣ್ಣು ಮತ್ತು ಕಿವಿಯಾಗಿ ಕೆಲಸ ಮಾಡುವುದು ಎಟಿಸಿ. ಪೈಲಟ್ ತನ್ನ ವಿಮಾನವನ್ನು ಮಾತ್ರ ನೋಡಬಲ್ಲ, ಆದರೆ ಎಟಿಸಿಗೆ ಆಕಾಶದಲ್ಲಿರುವ ಎಲ್ಲ ವಿಮಾನಗಳ ಒಟ್ಟು ಚಿತ್ರಣ ತಿಳಿದಿರುತ್ತದೆ. ಸಾಮಾನ್ಯವಾಗಿ ಜನರಿಗೆ ಎಟಿಸಿ ಎಂದಾಕ್ಷಣ ವಿಮಾನ ನಿಲ್ದಾಣದಲ್ಲಿರುವ ಎತ್ತರದ ಗಾಜಿನ ಗೋಪುರ ಮಾತ್ರ ನೆನಪಾಗುತ್ತದೆ. ಆದರೆ ವಾಸ್ತವದಲ್ಲಿ ಎಟಿಸಿ 2 ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಒಂದು, 'ಟವರ್' ಮತ್ತು ಇನ್ನೊಂದು 'ರೇಡಾರ್ ರೂಂ'. ಇದು ವಿಮಾನ ನಿಲ್ದಾಣದ ಅತಿ ಎತ್ತರದ ಕಟ್ಟಡ. ಇದರ ನಾಲ್ಕೂ ಕಡೆ ಗಾಜನ್ನು ಅಳವಡಿಸಿರುತ್ತಾರೆ. ಇಲ್ಲಿರುವ ಅಧಿಕಾರಿಗಳು ಬೈನಾಕ್ಯುಲರ್ ಮತ್ತು ಬರಿಗಣ್ಣಿನಿಂದ ರನ್‌ವೇ, ಟ್ಯಾಕ್ಸಿವೇ ಮತ್ತು ನಿಲ್ದಾಣದ ಪರಿಸರವನ್ನು ನೋಡುತ್ತಿರುತ್ತಾರೆ. ಇದು ಸಾಮಾನ್ಯವಾಗಿ ಕಟ್ಟಡದ ಕೆಳಗೆ ಪ್ರತ್ಯೇಕ ಕೊಠಡಿಯಲ್ಲಿರುತ್ತದೆ. ಇಲ್ಲಿ ಕತ್ತಲಾಗಿರುತ್ತದೆ ಅಂದರೆ ದೀಪಗಳನ್ನು ಮಂದವಾಗಿರಿಸಿರುತ್ತಾರೆ. ಏಕೆಂದರೆ, ಕಂಟ್ರೋಲರ್‌ಗಳು ಕಂಪ್ಯೂಟರ್ ಮತ್ತು ರೇಡಾರ್ ಪರದೆಗಳನ್ನು (Screens) ಸ್ಪಷ್ಟವಾಗಿ ನೋಡಲು ಕತ್ತಲೆ ಅಗತ್ಯ. ಇಲ್ಲಿ ಹೊರಗಿನ ಪ್ರಪಂಚ ಕಾಣುವುದಿಲ್ಲ, ಕೇವಲ ಪರದೆಯ ಮೇಲಿನ ಚುಕ್ಕೆಗಳೇ (ವಿಮಾನಗಳು) ಇವರ ಜಗತ್ತು. ದೊಡ್ಡ ಮಾನಿಟರ್‌ಗಳಲ್ಲಿ ನಕ್ಷೆ ಇರುತ್ತದೆ ಮತ್ತು ಪ್ರತಿಯೊಂದು ವಿಮಾನವೂ ಒಂದು ಹಸಿರು ಚುಕ್ಕೆಯಂತೆ ಅಥವಾ ಚಿಹ್ನೆಯಂತೆ ಚಲಿಸುತ್ತಿರುತ್ತದೆ. ಆ ಚುಕ್ಕೆಯ ಪಕ್ಕದಲ್ಲೇ ವಿಮಾನದ ಸಂಖ್ಯೆ, ಎತ್ತರ ಮತ್ತು ವೇಗ ಬರೆದಿರುತ್ತದೆ. ಪೈಲಟ್ ಜತೆ ಮಾತನಾಡಲು ಬಳಸುವ ಅತ್ಯಾಧುನಿಕ ಮೈಕ್ ಮತ್ತು ಹೆಡ್‌ಸೆಟ್ ಒಳಗೊಂಡ ರೇಡಿಯೋ ಕಮ್ಯುನಿಕೇಷನ್ ಸಿಸ್ಟಮ್ ಇರುತ್ತದೆ. ಅಲ್ಲಿ ಎಷ್ಟು ಜನ ಇರುತ್ತಾರೆ? ಇದು ವಿಮಾನ ನಿಲ್ದಾಣದ ಗಾತ್ರದ ಮೇಲೆ ನಿರ್ಧಾರವಾಗುತ್ತದೆ. ಸಣ್ಣ ವಿಮಾನ ನಿಲ್ದಾಣಗಳಲ್ಲಿ ಕೇವಲ 2-3 ಜನ ಇರಬಹುದು. ಬೆಂಗಳೂರಿನ ಕೆಂಪೇಗೌಡ ಏರ್‌ಪೋರ್ಟ್‌ನಲ್ಲಿ ಒಂದು ಶಿಫ್ಟ್‌ನಲ್ಲಿ ಸುಮಾರು 15ರಿಂದ 30 ಜನ ಅಥವಾ ಅದಕ್ಕಿಂತ ಹೆಚ್ಚು ಅಧಿಕಾರಿಗಳು ಏಕಕಾಲದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಒಬ್ಬ ವ್ಯಕ್ತಿ ಎಲ್ಲವನ್ನೂ ನಿಯಂತ್ರಿಸುವುದಿಲ್ಲ. ಅಲ್ಲಿ ಕೆಲಸವನ್ನು ವಿಭಾಗಿಸಲಾಗಿರುತ್ತದೆ. ವಿಮಾನ ಗೇಟ್‌ನಿಂದ ರನ್‌ವೇವರೆಗೆ ಬರುವಾಗ (ನೆಲದ ಮೇಲೆ ಚಲಿಸುವಾಗ) ಗ್ರೌಂಡ್ ಕಂಟ್ರೋಲರ್ ದಾರಿ ತೋರಿಸುತ್ತಾರೆ. ರನ್‌ವೇ ಟವರ್ ಕಂಟ್ರೋಲರ್ ಸುಪರ್ದಿಯಲ್ಲಿರುತ್ತದೆ. ವಿಮಾನದ ಟೇಕಾಫ್ ಮತ್ತು ಲ್ಯಾಂಡಿಂಗ್‌ಗೆ ಅನುಮತಿ ಕೊಡುವ ಅಧಿಕಾರ ಇವರದ್ದು. ವಿಮಾನ ಟೇಕಾಫ್ ಆಗಿ ಆಕಾಶಕ್ಕೆ ಏರಿದ ನಂತರ ಅಥವಾ ಇಳಿಯಲು 50-60 ಕಿ.ಮೀ ದೂರವಿರುವಾಗ ಅಪ್ರೋಚ್/ಡಿಪಾರ್ಚರ್ ಕಂಟ್ರೋಲರ್ ನಿಯಂತ್ರಿಸುತ್ತಾರೆ. ವಿಮಾನವು 35,000 ಅಡಿ ಎತ್ತರದಲ್ಲಿ ಹಾರುವಾಗ, ಒಂದು ನಗರದಿಂದ ಇನ್ನೊಂದು ನಗರದ ನಡುವಿನ ದಾರಿ ಯಲ್ಲಿ ಎನ್-ರೂಟ್ ಕಂಟ್ರೋಲರ್ ಮಾರ್ಗದರ್ಶನ ನೀಡುತ್ತಾರೆ. ಇದು ಹೇಗೆ ಕಾರ್ಯನಿರ್ವಹಿಸುತ್ತದೆ? ಇದೊಂದು ರಿಲೇ ರೇಸ್ ಇದ್ದಂತೆ. ಒಬ್ಬ ಅಧಿಕಾರಿ ವಿಮಾನದ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ವರ್ಗಾಯಿಸುತ್ತಾ ಹೋಗುತ್ತಾರೆ. ಇದನ್ನು 'ಹ್ಯಾಂಡ್ ಆಫ್' ಎನ್ನುತ್ತಾರೆ. ಒಂದು ವಿಮಾನ ಮಸ್ಕತ್‌ನಿಂದ ಬೆಂಗಳೂರಿಗೆ ಹೋಗುತ್ತಿದೆ ಎಂದುಕೊಳ್ಳೋಣ. ಪೈಲಟ್ ಕಾಕ್‌ಪಿಟ್‌ನಲ್ಲಿ ಕುಳಿತು ರೇಡಿಯೋ ಮೂಲಕ 'ನಾನು ಬೆಂಗಳೂರಿಗೆ ಹೋಗಲು ಸಿದ್ಧ' ಎಂದು ಹೇಳುತ್ತಾರೆ. ಎಟಿಸಿಯಿಂದ 'Clearance' ಸಿಗುತ್ತದೆ. ವಿಮಾನ ನಿಲ್ದಾಣದ ಗೇಟ್‌ನಿಂದ ರನ್‌ವೇ ತುದಿಯವರೆಗೆ ಹೋಗಲು 'ಗ್ರೌಂಡ್ ಕಂಟ್ರೋಲರ್' ದಾರಿ ಹೇಳುತ್ತಾರೆ. ರನ್‌ವೇ ಖಾಲಿ ಇದೆಯೇ ಎಂದು ನೋಡಿಕೊಂಡು, ಟವರ್ ಕಂಟ್ರೋಲರ್ 'Cleared for takeoff' ಎಂದು ಆದೇಶ ನೀಡುತ್ತಾರೆ. ವಿಮಾನ ಗಾಳಿಯಲ್ಲಿ ಏರುತ್ತಿದ್ದಂತೆ, ಟವರ್ ಕಂಟ್ರೋಲರ್ ಪೈಲಟ್‌ಗೆ ಹೇಳುತ್ತಾರೆ- 'ಇನ್ನು ಮುಂದೆ ಡಿಪಾರ್ಚರ್ ಕಂಟ್ರೋಲರ್ ಜತೆ ಮಾತನಾಡಿ'. ಆಗ ಪೈಲಟ್ ಫ್ರೀಕ್ವೆನ್ಸಿ ಬದಲಾಯಿಸುತ್ತಾರೆ.

ರಾಹುಲ್ ಗಾಂಧಿಯವರಿಗೆ ಒಪ್ಪಂದದ ಕತೆ ಬೇಕಿಲ್ಲ

ಕರ್ನಾಟಕದಲ್ಲಿ ಸರಕಾರ ಅಲುಗಾಡಿದರೆ ದೇಶದಲ್ಲಿ ಕಾಂಗ್ರೆಸ್‌ನ ಕತೆ ಅಯೋಮಯವಾಗುತ್ತದೆ ಅಂತ ರಾಹುಲ್ ಗಾಂಧಿಯವರಿಗೆ ಗೊತ್ತು. ಹೀಗಾಗಿ ಅವರು ಇಲ್ಲಿ ಯಥಾಸ್ಥಿತಿ ಮುಂದುವರಿಯಲಿ ಅಂತ ಬಯಸುತ್ತಿದ್ದಾರೆ. ಒಂದು ವೇಳೆ ಮುಂದೆ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಅವರು ಮುಂದಾದರೂ ಆ ಸಂದರ್ಭದಲ್ಲಿ ದಲಿತ ನಾಯಕರೊಬ್ಬರು ಸಿಎಂ ಆಗಬಹುದೇ ಹೊರತು ಮತ್ತೊಬ್ಬರಲ್ಲ.

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಕಳೆದ ವಾರ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರು, ಕರ್ನಾಟಕದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಅಂದ ಹಾಗೆ, ಕರ್ನಾಟಕದಲ್ಲಿ ಸಿಎಂ ಹುದ್ದೆಗಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದರೆ, ಸಿಎಂ ಸಿದ್ದರಾಮಯ್ಯ ಕನಲಿ ಕೂತಿದ್ದಾರೆ. ಇವರಿಬ್ಬರ ನಡುವಣ ಸಂಘರ್ಷಕ್ಕೆ ಈಗ ಜಾತಿ ಸೈನ್ಯಗಳು ಧುಮುಕಿರುವುದು ವೇಣುಗೋಪಾಲ್ ಅವರ ಆತಂಕಕ್ಕೆ ಕಾರಣ. ಯಾಕೆಂದರೆ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಒಕ್ಕಲಿಗ ಪ್ರಮುಖರು ಧ್ವನಿ ಎತ್ತಿದ್ದರೆ, ಸಿದ್ದರಾಮಯ್ಯ ಅವರ ಪರವಾಗಿ ಅಹಿಂದ ವರ್ಗಗಳ ಪ್ರಮುಖರು ಕೂಗು ಹಾಕಿದ್ದಾರೆ.

ಇಂಥ ಸಂದರ್ಭದಲ್ಲಿ ಪಕ್ಷದ ವರಿಷ್ಠರು ರವಾನಿಸುವ ಸಣ್ಣ ಸಿಗ್ನಲ್ಲು ಕೂಡಾ ಪಕ್ಷಕ್ಕೆ ದುಬಾರಿಯಾಗುತ್ತದೆ. ಹಾಗಾಗಬಾರದು ಎಂದರೆ ಇವತ್ತು ಕರ್ನಾಟಕದಲ್ಲಿ ಸಿಎಂ-ಡಿಸಿಎಂ ನಡುವೆ ನಡೆಯುತ್ತಿರುವ ಸಂಘರ್ಷಕ್ಕೆ ತಕ್ಷಣ ಕಡಿವಾಣ ಹಾಕಬೇಕು ಎಂಬುದು ಕೆ.ಸಿ.ವೇಣುಗೋಪಾಲ್ ಅವರ ಪ್ರಪೋಸಲ್ಲು. ಯಾವಾಗ ಅವರು ಈ ಪ್ರಪೋಸಲ್ಲು ಮುಂದಿಟ್ಟರೋ, ಆಗ ದೂಸರಾ ಮಾತನಾಡದ ರಾಹುಲ್ ಗಾಂಧಿ ಅವರು 'ಕ್ಯಾರಿ ಆನ್' ಎಂದಿದ್ದಾರೆ. ಹೀಗೆ ಅವರಿಂದ ಸೂಚನೆ ಸಿಕ್ಕಿದ್ದೇ ತಡ, ಕೆ.ಸಿ.ವೇಣುಗೋಪಾಲ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಸಂಪರ್ಕಿಸಿದ್ದಾರೆ. ''ಸಿದ್ರಾಮಯ್ಯಾಜೀ, ಇವತ್ತು ಕರ್ನಾಟಕದಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಗೆ ತಕ್ಷಣ ಕಡಿವಾಣ ಹಾಕಬೇಕು. ಹೀಗಾಗಿ ನೀವು ಡಿ.ಕೆ.ಶಿವಕುಮಾರ್ ಅವರನ್ನು ಉಪಾಹಾರಕ್ಕೆ ಕರೆಯಿರಿ. ಹೀಗೆ ಇಬ್ಬರೂ ಸೇರಿದರೆ ಒಂದು ಪಾಸಿಟಿವ್ ಸಂದೇಶ ರವಾನೆಯಾಗುತ್ತದೆ. ಆ ಮೂಲಕ ಸರಕಾರದಲ್ಲಿ ಗೊಂದಲವಿಲ್ಲ ಎಂಬ ಭಾವನೆ ಮೂಡುತ್ತದೆ'' ಎಂದಿದ್ದಾರೆ.

ಕೆ.ಸಿ.ವೇಣುಗೋಪಾಲ್ ಈ ಸೂಚನೆ ಕೊಟ್ಟ ನಂತರ, ಕಳೆದ ಶನಿವಾರ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಒಟ್ಟಿಗೆ ತಿಂಡಿ ತಿಂದು 'ನಾವು ಒಗ್ಗಟ್ಟಾಗಿದ್ದೇವೆ' ಎಂಬ ಸಂದೇಶ ರವಾನಿಸಿದ್ದಾರೆ. ಆದರೆ ಇಂಥ ಉಪಾಹಾರ ಕೂಟದ ನಂತರ ಡಿ.ಕೆ.ಶಿವಕುಮಾರ್ ಅವರ ಕ್ಯಾಂಪು ಒಂದು ಕತೆ ಹೇಳುತ್ತಿದ್ದರೆ, ಸಿದ್ದರಾಮಯ್ಯ ಅವರ ಕ್ಯಾಂಪು ಮತ್ತೊಂದು ಕತೆ ಹೇಳುತ್ತಿದೆ. ಡಿ.ಕೆ.ಶಿವಕುಮಾರ್ ಅವರ ಕ್ಯಾಂಪಿನ ಪ್ರಕಾರ, ''ಡಿಸೆಂಬರ್ 8ರಂದು ಆರಂಭವಾಗಲಿರುವ ವಿಧಾನಮಂಡಲ ಅಧಿವೇಶನದ ನಂತರ ವರಿಷ್ಠರು ಸಿದ್ದರಾಮಯ್ಯ ಅವರನ್ನು ದಿಲ್ಲಿಗೆ ಕರೆಸುತ್ತಾರೆ. ಅಧಿಕಾರ ತ್ಯಾಗ ಮಾಡುವಂತೆ ಅವರ ಮನವೊಲಿಸುತ್ತಾರೆ. ಹೀಗಾಗಿ ಹೊಸ ವರ್ಷದ ಶುರುವಿನಲ್ಲಿ ಡಿ.ಕೆ.ಶಿವಕುಮಾರ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸುವುದು ಗ್ಯಾರಂಟಿ''.

ಆದರೆ ಸಿಎಂ ಸಿದ್ದರಾಮಯ್ಯ ಅವರ ಕ್ಯಾಂಪು ಇದನ್ನು ಒಪ್ಪುವುದಿಲ್ಲ, ಬದಲಿಗೆ ತನ್ನದೇ ವಾದ ಮುಂದಿಡುತ್ತದೆ. ಅದರ ಪ್ರಕಾರ, ''ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ರಾಹುಲ್ ಗಾಂಧಿ ತಯಾರಿಲ್ಲ. ಯಾಕೆಂದರೆ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಪರವಾಗಿ ನಿಂತಿರುವ ಅಹಿಂದ ವರ್ಗಗಳು ಚೆಲ್ಲಾಪಿಲ್ಲಿಯಾಗುತ್ತವೆ. ಆ ಮೂಲಕ 1983 ಮತ್ತು 1994ರಲ್ಲಾದಂತೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ನೆಲ ಕಚ್ಚುತ್ತದೆ''.

ಅಂದ ಹಾಗೆ, ರಾಹುಲ್ ಗಾಂಧಿ ಅವರಿಗೆ ಇದು ಸ್ಪಷ್ಟವಾಗಿ ಗೊತ್ತು. ಅದೇ ರೀತಿ ಕರ್ನಾಟಕದಲ್ಲಿ ಸರಕಾರ ಅಲುಗಾಡಿದರೆ ದೇಶದಲ್ಲಿ ಕಾಂಗ್ರೆಸ್‌ನ ಕತೆ ಅಯೋಮಯವಾಗುತ್ತದೆ ಅಂತಲೂ ಗೊತ್ತು. ಹೀಗಾಗಿ ಅವರು ಕರ್ನಾಟಕದಲ್ಲಿ ಯಥಾಸ್ಥಿತಿ ಮುಂದುವರಿಯಲಿ ಅಂತ ಬಯಸುತ್ತಿದ್ದಾರೆ. ಹಾಗೊಂದು ವೇಳೆ ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಅವರು ಮುಂದಾದರೂ ಆ ಸಂದರ್ಭದಲ್ಲಿ ದಲಿತ ನಾಯಕರೊಬ್ಬರು ಸಿಎಂ ಆಗಬಹುದೇ ಹೊರತು ಮತ್ತೊಬ್ಬರಲ್ಲ. ಅರ್ಥಾತ್, ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಬಣಗಳ ಮಧ್ಯೆ ಶುರುವಾದ ಕಾದಾಟ ಏನಿದೆ, ಇದು ಸದ್ಯಕ್ಕೆ ಮುಗಿಯುವ ಯಾವ ಲಕ್ಷಣವೂ ಇಲ್ಲ. ಹೀಗಾಗಿ 'ಅಧಿಕಾರ ಹಂಚಿಕೆಯ ಒಪ್ಪಂದ ಆಗಿದೆ' ಅಂತ ಡಿಕೆಶಿ, 'ಆಗಿಲ್ಲ' ಅಂತ ಸಿದ್ದರಾಮಯ್ಯ ಕ್ಯಾಂಪುಗಳ ಎರಡನೇ ಹಂತದ ಹೋರಾಟ ವಿಧಾನ ಮಂಡಲ ಅಧಿವೇಶನದ ನಂತರ ಮತ್ತೆ ಶುರುವಾಗಲಿದೆ.

ಅಧಿಕಾರ ಹಂಚಿಕೆ ಎಂಬ ಕಥನ

ಅಂದ ಹಾಗೆ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವಣ ಕುರ್ಚಿ ಕಾಳಗಕ್ಕೆ ತಾತ್ಕಾಲಿಕ ವಿರಾಮ ಸಿಕ್ಕಿತಲ್ಲ? ಇದಾದ ನಂತರ ಅಧಿಕಾರ ಹಂಚಿಕೆ ಎಂಬ ಕಥನಕ್ಕೆ ರೋಚಕ ಟ್ವಿಸ್ಟುಗಳು ಸಿಗುತ್ತಿವೆ. ಡಿಕೆಶಿ ಕ್ಯಾಂಪಿನ ಪ್ರಕಾರ, ಪಕ್ಷ ಅಧಿಕಾರಕ್ಕೆ ಬಂದ ನಂತರ ಸಿಎಂ ಹುದ್ದೆಗೆ ಫೈಟು ನಡೆಯಿತಲ್ಲ? ಈ ಹಂತದಲ್ಲಿ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಇದ್ದಾಗ ಒಂದು ಮಾತುಕತೆ ನಡೆಯಿತು. ಅದರ ಪ್ರಕಾರ, ಮೊದಲ ಎರಡೂವರೆ ವರ್ಷ ಸಿದ್ದರಾಮಯ್ಯ ಸಿಎಂ ಆಗಲಿ, ನಂತರದ ಎರಡೂವರೆ ವರ್ಷ ಡಿ.ಕೆ.ಶಿವಕುಮಾರ್ ಸಿಎಂ ಆಗಲಿ ಅಂತ ಸುರ್ಜೇವಾಲಾ ಹೇಳಿದಾಗ ಸಿದ್ದರಾಮಯ್ಯ ಅದನ್ನೊಪ್ಪಿದ್ದರು. ಅಷ್ಟೇ ಅಲ್ಲ, ಒಂದು ವಾರ ಮುಂಚೆಯೇ ಕುರ್ಚಿ ಬಿಟ್ಟು ಕೊಡುವುದಾಗಿ ಹೇಳಿದ್ದರು.

ಆದರೆ ಡಿ.ಕೆ.ಶಿವಕುಮಾರ್ ಅವರ ಕ್ಯಾಂಪಿನಿಂದ ತೇಲಿಬರುತ್ತಿರುವ ಈ ಮಾತುಗಳನ್ನು ಸಿದ್ದರಾಮಯ್ಯ ಕ್ಯಾಂಪು ಬಿಲ್‌ಕುಲ್ ಒಪ್ಪುವುದಿಲ್ಲ. ಅದರ ಪ್ರಕಾರ, ಅಧಿಕಾರ ಹಂಚಿಕೆಯ ಬಗ್ಗೆ ಚರ್ಚೆ ನಡೆದಿದ್ದು ನಿಜವಾದರೂ ಅದಕ್ಕೆ ಒಪ್ಪಂದದ ರೂಪವೇ ಸಿಕ್ಕಿರಲಿಲ್ಲ. ಕಾರಣ? ಅವತ್ತು ಖರ್ಗೆ, ವೇಣುಗೋಪಾಲ್, ಸುರ್ಜೇವಾಲ, ಸಿದ್ದರಾಮಯ್ಯ, ಡಿಕೆಶಿ ಮತ್ತು ಡಿ.ಕೆ.ಸುರೇಶ್ ಇದ್ದ ಸಂದರ್ಭದಲ್ಲಿ ಆಗಿದ್ದೇ ಬೇರೆ. ಅದು ಹೇಗೆಂದರೆ: ಅವತ್ತು ಸುರ್ಜೇವಾಲ ಅವರು ಅಧಿಕಾರ ಹಂಚಿಕೆಯ ಬಗ್ಗೆ ಪ್ರಸ್ತಾಪಿಸಿದರು. ಮೊದಲ ಎರಡೂವರೆ ವರ್ಷ ಸಿದ್ದರಾಮಯ್ಯ ಅವರು ಸಿಎಂ ಆಗಲಿ, ನಂತರದ ಎರಡೂವರೆ ವರ್ಷ ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಲಿ ಅಂತ ಅವರು ಹೇಳಿದಾಗ ಸಿದ್ದರಾಮಯ್ಯ ಕೂಡಾ ಅದನ್ನೊಪ್ಪಿದರು. ಆದರೆ 'ಇದು ಸಾಧ್ಯವಾಗಬೇಕೆಂದರೆ ಒಂದು ಷರತ್ತಿದೆ' ಎಂದರು. ಅಂದು ಈ ಎಲ್ಲ ನಾಯಕರೆದುರು ಸಿದ್ದರಾಮಯ್ಯ ಅವರು ಮಂಡಿಸಿದ ಷರತ್ತೆಂದರೆ, ಮೊದಲ ಎರಡೂವರೆ ವರ್ಷಗಳ ಕಾಲ ಸರಕಾರ ನಾನು ಬಯಸಿದ ರೂಪದಲ್ಲಿರಬೇಕು. ಅರ್ಥಾತ್, ಸರಕಾರದಲ್ಲಿ ನಾನು ಸಿಎಂ ಆದರೆ ಒಕ್ಕಲಿಗ, ಲಿಂಗಾಯತ, ದಲಿತ ಮತ್ತು ಮುಸ್ಲಿಂ ಸಮುದಾಯದ ಒಬ್ಬೊಬ್ಬ ನಾಯಕರು ಉಪಮುಖ್ಯಮಂತ್ರಿಗಳಾಗಿರಬೇಕು ಮತ್ತು ಈ ಸರಕಾರದಲ್ಲಿ ಡಿ.ಕೆ.ಶಿವಕುಮಾರ್ ಇರಬಾರದು. ಮುಂದೆ ಎರಡೂವರೆ ವರ್ಷಗಳ ನಂತರ ನಾನು ಸಿಎಂ ಹುದ್ದೆ ಬಿಟ್ಟು ಕೊಡುತ್ತೇನೆ ಮತ್ತು ಡಿ.ಕೆ.ಶಿವಕುಮಾರ್ ಅವರು ಬಯಸಿದ ರೀತಿಯಲ್ಲಿ ಸರಕಾರ ರಚಿಸಲಿ. ನಾನು ಅವರ ಬೆನ್ನಿಗಿರುತ್ತೇನೆ ಎಂಬುದು ಅವತ್ತು ಸಿದ್ದರಾಮಯ್ಯ ಅವರು ಮಂಡಿಸಿದ ಷರತ್ತು.

ಆದರೆ ಅವರ ಆ ಷರತ್ತಿನ ಪ್ರಕಾರ ಸರಕಾರ



ರಚನೆಯಾಗಲಿಲ್ಲ. ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಸೆಟ್ಲಾದರು. ಯಾವ ಕಾರಣಕ್ಕೂ ಅವರ ಕೈಗೆ ಬೆಂಗಳೂರು ಕೊಡುವುದಿಲ್ಲ ಅಂತ ಸಿದ್ದರಾಮಯ್ಯ ಪಟ್ಟು ಹಿಡಿದು ರಾದ್ಧಾಂತ ಮಾಡಿದರೂ ಕೆ.ಸಿ.ವೇಣುಗೋಪಾಲ್ ಮತ್ತು ಅವರಿಗೆ ಕ್ಲೋಸ್ ಆಗಿರುವ ಜಮೀರ್ ಅಹ್ಮದ್ ಅವರಿಂದಾಗಿ ಆಟ ಬದಲಾಯಿತು. ಅರ್ಥಾತ್ ಸಿದ್ದರಾಮಯ್ಯ ಬಯಸಿದಂತೆ ಆಟ ನಡೆಯಲಿಲ್ಲ. ಇಷ್ಟಾದ ಮೇಲೆ ಅಧಿಕಾರ ಹಂಚಿಕೆಯ ಮಾತೆಲ್ಲಿಂದ ಬಂತು? ಚರ್ಚೆಯ ಹಂತದಲ್ಲೇ ಗರ್ಭಪಾತವಾದ ವಿಷಯವು ಒಪ್ಪಂದದ ರೂಪ ಪಡೆದಿದ್ದು ಯಾವಾಗ? ಎಂಬುದು ಸಿದ್ದರಾಮಯ್ಯ ಕ್ಯಾಂಪಿನ ಪ್ರಶ್ನೆ.

ಹೀಗೆ ಪ್ರಶ್ನೆ ಹಾಕುವ ಸಿದ್ದರಾಮಯ್ಯ ಕ್ಯಾಂಪು ಮತ್ತೊಂದು ಕುತೂಹಲಕಾರಿ ಕತೆಯನ್ನು ಬಿಚ್ಚಿಡುತ್ತದೆ. ಅದೆಂದರೆ, ಒಪ್ಪಂದದಂತೆ ಡಿ.ಕೆ.ಶಿವಕುಮಾರ್ ಅವರಿಗೆ ಪಟ್ಟ ಬಿಟ್ಟುಕೊಡಬೇಕು ಅಂತ ವರಿಷ್ಠರನ್ನು ಒತ್ತಾಯಿಸಲು ಕೆಲ ಶಾಸಕರು ದಿಲ್ಲಿಗೆ ಹೋಗಿದ್ದರಲ್ಲ? ಈ ಸಂದರ್ಭದಲ್ಲಿ ರಾಹುಲ್ ಗಾಂಧಿಯವರ ಕಿವಿಗೆ ದಿಲ್ಲಿಯ ಹಿರಿಯ ನಾಯಕರೊಬ್ಬರು ಸಿದ್ದರಾಮಯ್ಯ-ಡಿ.ಕೆ.ಶಿವಕುಮಾರ್ ಅವರ ಮಧ್ಯೆ ಅಧಿಕಾರ ಹಂಚಿಕೆಯ ಒಪ್ಪಂದವಾಗಿದೆಯಂತೆ ಎಂದಾಗ, ''ನೋ, ನೋ ಅದೆಲ್ಲ ನನಗೆ ಗೊತ್ತಿಲ್ಲ. ರಾಜಸ್ಥಾನ, ಛತ್ತೀಸ್‌ಗಢದಲ್ಲಿ ಇಂಥ ಒಪ್ಪಂದಗಳ ಕತೆ ಏನಾಯಿತು ಅಂತ ಗೊತ್ತಿದ್ದ ಮೇಲೂ ಇದರ ಉಸಾಬರಿಗೆ ನಾನು ಹೋಗುತ್ತೇನಾ?'' ಎಂದರಂತೆ.

ಹೀಗೆ ರಾಹುಲ್ ಗಾಂಧಿಯವರಿಗೆ ಗೊತ್ತಿಲ್ಲದ ಅಧಿಕಾರ ಹಂಚಿಕೆಯ ಕಥನ ಊರ್ಜಿತವಾಗಲು ಸಾಧ್ಯವೇ? ಇದು ಸಿದ್ದರಾಮಯ್ಯ ಕ್ಯಾಂಪು ಹೇಳುವ ಹೊಸ ಕತೆ.

ರಾಹುಲ್ ಕಿವಿಗೆ 'ವೇಣು'ನಾದ

ಅಂದ ಹಾಗೆ, ದಿಲ್ಲಿ ಮೂಲಗಳ ಪ್ರಕಾರ, ಕರ್ನಾಟಕದ ಬೆಳವಣಿಗೆಗಳ ಬಗ್ಗೆ ರಾಹುಲ್ ಗಾಂಧಿ ಚಿಂತಿತರಾಗಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ಆಗುವ ಡ್ಯಾಮೇಜ್ ಏನು? ಅಂತ ಅವರು ಲೆಕ್ಕ ಹಾಕುತ್ತಿದ್ದಾರೆ. ರಾಹುಲ್ ಗಾಂಧಿ ಅವರಿಗೆ ಕೆ.ಸಿ.ವೇಣುಗೋಪಾಲ್ ಕೊಟ್ಟಿರುವ ಫೀಡ್‌ಬ್ಯಾಕ್ ಪ್ರಕಾರ, ಕೋಮುವಾದಿ ಶಕ್ತಿಗಳ ವಿರುದ್ಧ ಅಗ್ರೆಸಿವ್ ಆಗಿ ಮಾತನಾಡುವ ಸಿದ್ದರಾಮಯ್ಯ ಅವರು ಅಹಿಂದ ವರ್ಗಗಳ ಮತ ಕನ್‌ಸಾಲಿಡೇಟ್ ಆಗುವಂತೆ ಮಾಡಿದ್ದಾರೆ. ಇಂಥ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ದೇಶದ ಅಹಿಂದ ವರ್ಗಗಳಿಗೆ ನಾವು ಕೊಡುವ ಸಂದೇಶವೇನು?

ಗಮನಿಸಬೇಕಾದ ಸಂಗತಿಯೆಂದರೆ ಇನ್ನು ಕೆಲವೇ ತಿಂಗಳಲ್ಲಿ ಕೇರಳ, ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಇಲ್ಲೆಲ್ಲ ಅಹಿಂದ ವರ್ಗಗಳ ಮತದಾರರ ಸಂಖ್ಯೆ ಹೆಚ್ಚೇ ಹೊರತು ಬಲಿಷ್ಠ ವರ್ಗಗಳದಲ್ಲ. ಹೀಗಿರುವಾಗ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ಅಹಿಂದ ವರ್ಗಗಳಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ. ಆದ್ದರಿಂದ ಸಿದ್ದರಾಮಯ್ಯ ಅವರನ್ನು ಇಳಿಸುವುದು ಸೇಫ್ ಅಲ್ಲ ಎಂಬುದು ವೇಣುಗೋಪಾಲ್ ಫೀಡ್‌ಬ್ಯಾಕು. ಹೀಗಾಗಿ ಇವತ್ತು ಕರ್ನಾಟಕದ ವಿಷಯ ಬಂದರೆ ರಾಹುಲ್ ಕಿವಿಯಲ್ಲಿ ವೇಣುನಾದ ಮೊರೆಯುತ್ತಿದೆ. ಆದ್ದರಿಂದ ಸದ್ಯದ ಬಿಕ್ಕಟ್ಟಿಗೆ ಮದ್ದು ಅರೆಯಲು ಅವರು ಟೈಮು ತೆಗೆದುಕೊಂಡಿದ್ದಾರೆ. ಅಷ್ಟೇ ಅಲ್ಲ, ಮುಂದಿಡಬೇಕಾದ ಹೆಜ್ಜೆ ಹೇಗಿರಬೇಕು ಅಂತ ಮಲ್ಲಿಕಾರ್ಜುನ ಖರ್ಗೆಯವರಿಗೆ ಕೇಳಿದ್ದಾರೆ ಎಂಬುದು ಲೇಟೆಸ್ಟು ಸುದ್ದಿ.

ಇದೇ ರೀತಿ, ಇವತ್ತು ಸಿಎಂ-ಡಿಸಿಎಂ ಕದನಕ್ಕೆ ಸೋನಿಯಾ ಗಾಂಧಿ ಮದ್ದು ಕೊಡುತ್ತಾರೆ ಎಂಬ ಮಾತಿದ್ದರೂ ಮೇಡಂ ಗಾಂಧಿ ಈ ವಿಷಯದಲ್ಲಿ ಉತ್ಸುಕರಾಗಿಲ್ಲ. ಶಿಮ್ಲಾ ಸಮೀಪದ ಪರ್ವತಗಳ ತಪ್ಪಲಲ್ಲಿರುವ ಮಶ್ರೋಬಾ ಎಂಬ ಪಟ್ಟಣದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಅವರು ಕರ್ನಾಟಕದ ವಿಷಯದಲ್ಲಿ ಖರ್ಗೆಯವರ ಅಭಿಪ್ರಾಯ ಕೇಳಿ ಮುಂದೆ ಹೆಜ್ಜೆ ಇಡುವಂತೆ ರಾಹುಲ್ ಗಾಂಧಿಯವರಿಗೆ ಸೂಚಿಸಿದ್ದಾರಂತೆ. ಮುಂದೇನಾಗುತ್ತದೋ ಕಾದುನೋಡಬೇಕು.

ಲಾಸ್ಟ್ ಸಿಪ್: ಅಂದ ಹಾಗೆ, 'ಅಪ್ಪ-ಅಮ್ಮರ ಜಗಳದಲಿ ಕೂಸು ಬಡವಾಯ್ತು' ಎಂಬಂತೆ ಸಿದ್ದು-ಡಿಕೆಶಿ ಕದನದ ಮಧ್ಯೆ ರಾಜ್ಯ ಕಾಂಗ್ರೆಸ್‌ನ ಮಂತ್ರಿ ಪದವಿ ಆಕಾಂಕ್ಷಿಗಳು ಬಡವಾಗಿದ್ದಾರೆ. ಮೂಲಗಳ ಪ್ರಕಾರ, ನವೆಂಬರ್ ಮೂವತ್ತರ ಭಾನುವಾರ ಸಂಪುಟ ಪುನಾರಚನೆ ಮಾಡಿ ಅಂತ ಕೆಲ ದಿನಗಳ ಹಿಂದೆ ವರಿಷ್ಠರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದರು. ಆದರೆ ಅವರ ಸೂಚನೆಯ ಬೆನ್ನಲ್ಲೇ ಡಿಕೆಶಿ ಕಾಳಗ ಶುರುವಾದ್ದರಿಂದ ಪುನಾರಚನೆ ಪ್ರಕ್ರಿಯೆಗೆ ಬ್ರೇಕ್ ಬಿತ್ತು.

ಕನ್ನಡಿಗರು ವೃತ್ತಿಪರತೆಯನ್ನು ಬೆಳೆಸಿಕೊಳ್ಳಬೇಕಿದೆ...

ವೃತ್ತಿಪರತೆಯ ಕೊರತೆಯ ಕಾರಣವೋ ಏನೋ, ನೀವು ಯಾವುದಾದರೂ ಒಳ್ಳೆಯ ಸ್ಟಾರ್ ಹೋಟೆಲ್ ಅಥವಾ ರೆಸಾರ್ಟ್‌ಗಳಿಗೆ ಹೋದರೆ ಅಲ್ಲಿ ಕನ್ನಡಿಗರು ಸಿಗುವುದೇ ಇಲ್ಲ. ಕನ್ನಡದ ಗಗಮನಸಖಿಯರು ಸಂಖ್ಯೆಯಲ್ಲಿ ವಿರಳ. ಸಾಮಾನ್ಯ ಜನಗಳಾದ ನಾವೇ, ಕನ್ನಡಿಗರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಹಿಂದು-ಮುಂದು ನೋಡುವಾಗ, ಇನ್ನು ದೊಡ್ಡ ದೊಡ್ಡ ಕಂಪನಿಗಳನ್ನು ನಡೆಸುವವರು ವೃತ್ತಿಪರತೆ ಇಲ್ಲದಿರುವ ಜನರನ್ನು 'ಕನ್ನಡಿಗರು' ಎಂಬ ಕಾರಣಕ್ಕೆ ಏಕೆ ತೆಗೆದುಕೊಳ್ಳುತ್ತಾರೆ?

ಸದಾಶಯ
ಡಾ. ದಯಾನಂದ ಲಿಂಗೇಗೌಡ
vveditoped@gmail.com

ಕೋಲ್ಕತ್ತಾದಿಂದ ಬೆಂಗಳೂರಿಗೆ ಬಂದಾಗ ಬಹಳ ಖುಷಿಯಾಗಿತ್ತು. ಆ ಸಂತೋಷಕ್ಕೆ ಒಂದೆರಡು ಪ್ರಮುಖ ಕಾರಣಗಳಿದ್ದವು. ಒಂದು, ಮಕ್ಕಳಿಗೆ ಕನ್ನಡದ ವಾತಾವರಣ ಸಿಗುತ್ತದೆ ಎಂಬುದು, ಇನ್ನೊಂದು ಕರ್ನಾಟಕದ ಊಟವನ್ನು ಪ್ರತಿನಿತ್ಯ ಮಾಡಬಹುದು ಎಂಬುದು.

ಬೆಂಗಳೂರಿಗೆ ಬಂದಾಗ, ಹೊಸದಾಗಿ ಬಾಡಿಗೆಗೆ ಪಡೆದ ಮನೆಯನ್ನು ಸಾದ್ಯಂತವಾಗಿ ಸ್ವಚ್ಛಗೊಳಿಸುವ ಅಗತ್ಯವಿತ್ತು. ಹೆಂಡತಿಯು 'ಮೊದಲು ಆನ್‌ಲೈನ್ ಆ್ಯಪ್‌ನಲ್ಲಿ ಬುಕ್ ಮಾಡಿ' ಎಂದರೂ, ಅದರಲ್ಲಿ ಬೇರೆ ಭಾಷೆಯವರೇ ಕೆಲಸಕ್ಕೆ ಬರಬಹುದು ಎಂದುಕೊಂಡು, ನಮ್ಮ ಕನ್ನಡಿಗರಿಗೇ ಕೆಲಸ ಕೊಡೋಣ ಎನಿಸಿತು. ಬಂದ ಹೊಸದರಲ್ಲಿ ಸ್ವಲ್ಪ ಕನ್ನಡ ಪ್ರೇಮ ಜಾಸ್ತಿ ನೋಡಿ? ಅದಕ್ಕೆ. ಮನೆಯನ್ನು ಸ್ವಚ್ಛಗೊಳಿಸಲು ಸುತ್ತಮುತ್ತ ಕರ್ನಾಟಕದವರು ಯಾರಾದರೂ ಇದ್ದಾರೆಯೇ ಎಂದು ವಿಚಾರಿಸಿದೆ. ನಂತರ, ಸ್ವಚ್ಛ ಮಾಡಲು ಅವರಿಗೆ ಕೊಡಬೇಕಾಗುವ ಹಣದ ಕುರಿತು ಖಾತ್ರಿಪಡಿಸಿಕೊಂಡೆ. ನಂತರ, ಮನೆ ಸ್ವಚ್ಛಗೊಳಿಸಲು ಆನ್‌ಲೈನ್ ವೇದಿಕೆಯಲ್ಲಿ (ಆ್ಯಪ್‌ನಲ್ಲಿ) ನಿಗದಿಯಾಗಿರುವ ಹಣವನ್ನು ಹೋಲಿಕೆ ಮಾಡಿ ನೋಡಿದಾಗ, ನಾನು ಮಾತನಾಡಿದ ಕೆಲಸದವರು ಹೇಳಿದ ಮೊತ್ತವು ದುಬಾರಿಯಾಗಿರುವುದು ಕಂಡುಬಂತು. ಅದೂ ಅಲ್ಲದೆ, ಆ್ಯಪ್‌ನವರು ಕೆಲವೊಂದು ಯಂತ್ರಗಳನ್ನು ಉಪಯೋಗಿಸಿ ಸ್ವಚ್ಛಗೊಳಿಸುವ ಭರವಸೆಯನ್ನೂ ನೀಡಿದ್ದರು. ಇಲ್ಲಿನವರದೋ ಕೈನಿಂದ ಸ್ವಚ್ಛ ಮಾಡುವ ಕೆಲಸ ಮಾತ್ರ. ಬುದ್ಧಿಯು 'ಆನ್‌ಲೈನ್‌ನಲ್ಲಿ ಬುಕ್ ಮಾಡು' ಎಂದರೂ, ಹೃದಯವು 'ಕನ್ನಡಿಗರಿಗೆ ಕೆಲಸ ಕೊಡು' ಎನ್ನುತ್ತಿತ್ತು. ಸರಿ, ಸ್ವಲ್ಪ ಅಳೆದುತೂಗಿ, 'ಕನ್ನಡ ಪ್ರೇಮದ ಹುಚ್ಚಿನಲ್ಲಿ ಸ್ವಲ್ಪ ಹಣ ಹೋದರೂ ಪರವಾಗಿಲ್ಲ, ನಮ್ಮ ಕರ್ನಾಟಕದವರಿಗೇ ಕೆಲಸ ಕೊಡೋಣ' ಎಂದುಕೊಂಡು ಬರಲು ಹೇಳಿದೆ. ಸ್ವಲ್ಪ ಚೌಕಾಸಿ ಮಾಡಲು ಯತ್ನಿಸಿದಾಗ ಅವರು, 'ಮೊದಲು ನಮ್ಮ ಕೆಲಸ ನೋಡಿ, ಆಮೇಲೆ ನೀವೇ ನಿಗದಿ ಮಾಡಿದ್ದಕ್ಕಿಂತ ಹೆಚ್ಚಾಗಿ ಹಣ ಕೊಡುತ್ತೀರಿ' ಎಂದಾಗ ಮರುಮಾತಿಲ್ಲದೆ ಒಪ್ಪಿಕೊಂಡೆ.

ಆದರೆ, ಮನೆಯನ್ನು ಸ್ವಚ್ಛ ಮಾಡಲು ಬಂದವರು ರಸ್ತೆಯನ್ನು ಗುಡಿಸುವವರಂತೆ ಮನೆಯನ್ನು ಗುಡಿಸುತ್ತಿರುವುದನ್ನು ನೋಡಿ ನನಗೆ 'ಯಾಕೋ ಮಿಸ್ ಹೊಡಿತಾ ಇದೆಯಲ್ಲಾ?' ಎನಿಸಿತು. ಕೇಳಿದ್ದಕ್ಕೆ, ''ಸರ್, ನಮ್ಮ ಕೆಲಸ ಮುಗಿದ ಮೇಲೆ ನೀವೇ ನೋಡಿ, ಆಮೇಲೆ ಮಾತನಾಡಿ'' ಎಂದು ಸಮಜಾಯಿಷಿ ಕೊಟ್ಟು ಕೆಲಸ ಮುಂದುವರಿಸಿದರು. ಅದಕ್ಕೆ ನಾನು, ''ಸ್ವಲ್ಪ ಹೊರಗೆ ಹೋಗಿಬರುತ್ತೇನೆ, ಅಷ್ಟರಲ್ಲಿ ಕೆಲಸ ಮುಗಿಸಿರಿ'' ಎಂದು ಹೇಳಿ ಹೋದೆ. ಹಿಂದಿರುಗಿದಾಗ ಮನೆಯ ನೆಲವನ್ನು ನೀರಿನಿಂದ ತೊಳೆದು ಒರೆಸುತ್ತಿದ್ದರು. ಹೇಗೆ ಸ್ವಚ್ಛಗೊಳಿಸಿದ್ದಾರೆ ಎಂದು ಪರೀಕ್ಷಿಸಲು ನಾನು ಮುಂದಾಗುತ್ತಿದ್ದಂತೆ, ''ಸರ್, ನೆಲ ತೇವವಾಗಿದೆ, ಗಲೀಜು ಮಾಡಬೇಡಿ. ಅಲ್ಲದೆ ಈಗ ಕತ್ತಲೆಯಾಗಿದೆ. ನೀವು ನಾಳೆ ನೋಡಿದರೆ ಒಳ್ಳೆಯದು, ನಾವು ಇಲ್ಲೇ ಇರುತ್ತೇವೆ'' ಎಂದು ಹೇಳಿ ಹಣವನ್ನು ಪಡೆದುಕೊಂಡು ಹೋದರು. 'ಸರಿ' ಎಂದುಕೊಂಡು ನಾನು ಮಾರನೆಯ ದಿನ ಬಂದು ನೋಡಿದರೆ, ಕಪಾಟುಗಳನ್ನು ಸ್ವಚ್ಛ ಮಾಡಿರಲಿಲ್ಲ, ಫ್ಯಾನ್ ಮೇಲಿನ ಗಲೀಜು ಹಾಗೇ ಇತ್ತು, ಬಾತ್‌ರೂಮ್ ಸ್ಥಿತಿ ನೋಡುವಂತಿರಲಿಲ್ಲ. ಹೀಗಾಗಿ ಫೋನ್ ಮಾಡಿ ಕೇಳಿದರೆ, ''ಸರ್, ಈಗ ಬರುತ್ತೇವೆ, ಎಲ್ಲವನ್ನೂ ಸರಿಮಾಡಿಕೊಡುತ್ತೇವೆ'' ಎಂದು ಹೇಳಿದ ಆಸಾಮಿ ಮತ್ತೆ ನನ್ನ ಕರೆಗಳನ್ನು ಸ್ವೀಕರಿಸಲೂ ಇಲ್ಲ! ಈ ವಿಷಯವು ಹೆಂಡತಿಯ ಗಮನಕ್ಕೆ ಬರುವ ಮುಂಚೆಯೇ ಸರಿಪಡಿಸಿಬಿಡೋಣ ಅಂದುಕೊಂಡು, ಮತ್ತೆ ಆನ್‌ಲೈನ್ ಆ್ಯಪ್‌ನಲ್ಲಿ ಬುಕ್ ಮಾಡಿ ಕೆಲಸ ಮಾಡಿಸಿಕೊಂಡೆ!

ಇನ್ನು, ಅಡುಗೆಯವರ ಕಥೆ. ಕರ್ನಾಟಕದ ಊಟವೇ ಬೇಕೆಂದು ಕನ್ನಡಿಗ ಅಡುಗೆಯವರಿಗೆ ಬಹಳಷ್ಟು ಹುಡುಕಾಡಿದೆವು. ಬಂದವರದು ಹಲವಾರು ಪ್ರಶ್ನೆಗಳು- ''ಮನೆಯಲ್ಲಿ ಎಷ್ಟು ಜನ? ಎಷ್ಟು ಬಾರಿ ಅಡುಗೆ ಮಾಡಬೇಕು? ಊಟಕ್ಕೆ ಎಷ್ಟು ತರಹದ ಪಲ್ಯ ಮಾಡಬೇಕು? ಚಪಾತಿ ಮಾಡಬೇಕೋ ಇಲ್ಲವೋ? ಎಲ್ಲಾ ದಿನವೂ ಮುದ್ದೆ ಮಾಡಲು ಸಾಧ್ಯವಿಲ್ಲ. ಪಾತ್ರೆ ಕಡಿಮೆ ಬಿದ್ದರೆ ನಾವು ಅಡುಗೆಯನ್ನೇ ನಿಲ್ಲಿಸುತ್ತೇವೆಯೇ ಹೊರತು, ಪಾತ್ರೆ ತೊಳೆದುಕೊಂಡು ಬಳಸುವುದಿಲ್ಲ. ಭಾನುವಾರ ಬರುವುದಿಲ್ಲ. ತಿಂಗಳಿಗೆ 3 ದಿನ ಹೆಚ್ಚುವರಿ ರಜೆ ಬೇಕಾಗುತ್ತೆ....'' ಹೀಗೆ ಹಲವಾರು ಪ್ರಶ್ನೆಗಳು ಮತ್ತು ಷರತ್ತುಗಳ ನಡುವೆಯೇ ಹೇಗೋ ಓರ್ವ ಕೆಲಸದವಳನ್ನು ಹೊಂದಿಸಿಕೊಂಡೆವು. ಮೊದಲು ಆಕೆ ಚೆನ್ನಾಗಿಯೇ ಕೆಲಸ ಮಾಡಿದಳು, ನಂತರ ಶುರುವಾಯಿತು ನೋಡಿ- ''ನಮ್ಮ ಗಂಡನಿಗೆ/ಮಕ್ಕಳಿಗೆ/ಅತ್ತೆಗೆ/ಮಾವನಿಗೆ ಹುಷಾರಿಲ್ಲ, ನಮ್ಮ ಸ್ನೇಹಿತನ ಮದುವೆ, ಬಂಧುಗಳ ಮಗನ ಮುಂಜಿ, ಹಾಗೆ-ಹೀಗೆ ಎನ್ನುತ್ತಾ ತಿಂಗಳಿಗೆ ಒಂದಷ್ಟು ರಜೆಗಳು. ಬಂಧು-ಬಳಗ ಅಂತ ಇರೋವಾಗ ಏನೋ ಒಂದಿಷ್ಟು ಕಷ್ಟಗಳು-ಕಮಿಟ್‌ಮೆಂಟುಗಳು ಇರುತ್ತವೆ ಅಂತ ಅವನ್ನೂ ಸಹಿಸಿದ್ದಾಯಿತು. ಸ್ವಲ್ಪ ದಿನಗಳ ನಂತರ ಸಾಲ ಕೇಳಲು ಶುರುಮಾಡಿಕೊಂಡಳು. ಮಗನಿಗೆ ಹುಷಾರಿಲ್ಲ ಅಂತ ಅಥವಾ ಮಗನಿಗೆ ಶಾಲೆಗೆ ಸೇರಿಸಲು ಹಣ ಬೇಕು ಅಂತ ಹೀಗೆ ಸಾಲಕ್ಕೆ ನೆಪಗಳು. ''ಹುಷಾರಿಲ್ಲದಿದ್ದರೆ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಾ, ಉಚಿತವಾಗಿ ಚಿಕಿತ್ಸೆ ಕೊಡಿಸುತ್ತೇನೆ'' ಎಂದು ಹೇಳಿದರೆ, ಹೋದವಳು ಸುದ್ದಿಯೇ ಇಲ್ಲ.

ಇದು ಒಬ್ಬರು-ಇಬ್ಬರ ಕಥೆಯಲ್ಲ, ಎಷ್ಟೇ ಅಡುಗೆಯವರನ್ನು ಬದಲಾಯಿಸಿದರೂ ಅವರದ್ದೇ ಆದ ಕಿರಿಕ್ಕುಗಳು. ಅವನ್ನೆಲ್ಲಾ ಅನುಭವಿಸಿದ ನಂತರ ಓರ್ವ ಬಂಗಾಳಿಯನ್ನು ಅಡುಗೆಗೆ ಇಟ್ಟುಕೊಂಡೆವು, ಶೇ.99ರಷ್ಟು ಸಮಸ್ಯೆಗಳು ಪರಿಹಾರವಾದವು. ಆದರೆ ಪಶ್ಚಿಮ ಬಂಗಾಳದಿಂದ ಕರ್ನಾಟಕಕ್ಕೆ ಬಂದರೂ, ಮತ್ತೆ ಬಂಗಾಳಿ ಊಟವನ್ನೇ ಮಾಡುವ ಪರಿಸ್ಥಿತಿ ಮಾತ್ರ ತಪ್ಪಲಿಲ್ಲ! ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ಸ್ಥಳೀಯ ಗಾರೆ ಕೆಲಸದವರದ್ದೂ ಇದೇ ಹಣೆಬರಹ; ಸಣ್ಣ ಪುಟ್ಟ ಕೆಲಸಕ್ಕೆ ಊಟ-ತಿಂಡಿ, ಗುಂಡು-ತುಂಡು, ತೀರ್ಥ-ಪ್ರಸಾದ ಎಲ್ಲವನ್ನು ಕೊಟ್ಟರೂ, ಎರಡನೇ ದಿನವೂ ಬರುತ್ತಾರೆ ಎಂಬುದಕ್ಕೆ ಖಾತ್ರಿಯಿಲ್ಲ.

ಇನ್ನು ವ್ಯವಸಾಯದ ಕೆಲಸಕ್ಕೆ, ಮನೆ ಅಳಿಯನಿಗಿಂತಲೂ ಚೆನ್ನಾಗಿ ನೋಡಿಕೊಂಡರೂ ಜನರು ಸಿಕ್ಕುವುದಿಲ್ಲ, ಇಲೆಕ್ಟ್ರಿಕ್ ಮತ್ತು ಕೊಳಾಯಿ ಕೆಲಸದವರು ಅರ್ಧ ಕೆಲಸವನ್ನು ಮಾಡಿ ಬಿಟ್ಟು ಹೋಗುವುದುಂಟು; ಅದನ್ನು ಪೂರ್ತಿ ಮಾಡಿಸುವುದಕ್ಕೆ ಬೇರೆಯವರನ್ನು ಹಿಡಿದುಕೊಂಡು ಬರಬೇಕು. ಹೀಗೆ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ, ಸ್ಥಳೀಯ ಕನ್ನಡಿಗರ ವೃತ್ತಿಪರತೆಯು ಹೊರರಾಜ್ಯದವರಿಗಿಂತ ಕಡಿಮೆ ಎನಿಸುತ್ತದೆ. ನಮ್ಮ ಆಸ್ಪತ್ರೆಯಲ್ಲೂ ಅಷ್ಟೇ, ಕೇರಳದ ದಾದಿಯರ ವೃತ್ತಿಪರತೆಯನ್ನು ಕನ್ನಡಿಗ ದಾದಿಯರಿಂದ ನಿರೀಕ್ಷಿಸುವುದು ಕಷ್ಟ. ತಮಿಳುನಾಡಿನ ತಂತ್ರಜ್ಞರು, ಕೆಲವು ಕೆಲಸ ಗೊತ್ತಿಲ್ಲದಿದ್ದರೂ ಹೇಗಾದರೂ ತಿಳಿದುಕೊಂಡು ಅವನ್ನು ಮಾಡಿಕೊಡುತ್ತಾರೆ. ಆದರೆ ನಮ್ಮ ಕರ್ನಾಟಕದವರು ಕೆಲಸ ಗೊತ್ತಿಲ್ಲದಿದ್ದರೆ 'ಹೊಸದಾಗಿ ಕಲಿತು ಕೆಲಸ ಮಾಡೋಣ' ಎಂಬ ಹುಮ್ಮಸ್ಸು ತೋರುವುದು ಕಡಿಮೆ. ಮಾರವಾಡಿಗಳು ನಡೆಸುವ ಯಾವುದಾದರೂ ಬಟ್ಟೆ ಅಂಗಡಿಗೆ ಒಮ್ಮೆ ಹೋಗಿ ನೋಡಿ, ಅವರು ಹೇಗಾದರೂ ಮಾಡಿ (ತಮಗೆ ಬರೋ ಲಾಭಾಂಶದಲ್ಲಿ ಸ್ವಲ್ಪ ಕಡಿಮೆಯಾದರೂ ಪರವಾಗಿಲ್ಲ), ನಿಮಗೆ ಮನವರಿಕೆ ಮಾಡಿಕೊಟ್ಟು, ಸಾಮಾನು ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತಾರೆ; ಅದೇ ಕನ್ನಡಿಗರು ನಡೆಸುವ ಅಂಗಡಿಗಳಿಗೆ ಹೋಗಿನೋಡಿ, ಅವರು ಹೆಚ್ಚು ಒತ್ತಾಯ ಮಾಡುವುದಿಲ್ಲ, 'ಬೇಕಾದರೆ ತೆಗೆದುಕೊಳ್ಳಿ, ಇಲ್ಲವಾದರೆ ಬಿಟ್ಟುಬಿಡಿ' ಎನ್ನುವಂತಿರುತ್ತದೆ ಅವರ ಮುಖದ ಛಾಯೆ, ಮನಸ್ಥಿತಿ. ಇನ್ನು, ಕನ್ನಡದ ಪ್ರಕಾಶಕರ ವೃತ್ತಿಪರತೆಯನ್ನು ವರ್ಣಿಸಲು ಕನ್ನಡ ಪದಗಳು ಸಾಕಾಗುವುದಿಲ್ಲ!

ಈ ರೀತಿಯ ವರ್ತನೆ ಬಹುಶಃ ಎಲ್ಲಾ ರಾಜ್ಯಗಳ ಸ್ಥಳೀಯರಲ್ಲೂ ಇರಬಹುದು. ಮುಂದುವರಿದ ರಾಷ್ಟ್ರಗಳಲ್ಲಿಯೂ 'ಸ್ಥಳೀಯ-ವಿದೇಶಿ ತಿಕ್ಕಾಟ' ಇದ್ದದ್ದೇ. ಬಂಗಾಳಿಗಳು ಪಶ್ಚಿಮ ಬಂಗಾಳದಲ್ಲಿ ಕೆಲಸ ಮಾಡದೆ ಸೋಮಾರಿತನ ತೋರಬಹುದು; ಆದರೆ ಹೊರರಾಜ್ಯಕ್ಕೆ ಬಂದರೆ ಅವರಿಗೆ ಕಡಿಮೆ ಸಮಯದಲ್ಲಿ ಹೆಚ್ಚು ಸಂಪಾದನೆ ಮಾಡುವುದು ಬಿಟ್ಟು ಬೇರಾವುದೇ ಗುರಿ ಇರುವುದಿಲ್ಲ. ಅವರ ಸಂಬಂಧಿಕರು ಬೇರೆ ರಾಜ್ಯಗಳಲ್ಲಿ ಇರುತ್ತಾರಾದ್ದರಿಂದ, ಅವರ ಮನೆಯ ಕಾರ್ಯಕ್ರಮಗಳಿಗೆ ಹೋಗುವ ಅಗತ್ಯವೂ ಇರುವುದಿಲ್ಲ. ಹಾಗಾಗಿ ಇಂಥ ಕೆಲಸಗಾರರು ವರ್ಷಕ್ಕೊಮ್ಮೆ ದೀರ್ಘರಜೆ ತೆಗೆದುಕೊಳ್ಳುತ್ತಾರೆ. ಮಿಕ್ಕ ಸಮಯದಲ್ಲಿ, 'ಹಗಲು-ರಾತ್ರಿ ದುಡಿದು ಸಾಧ್ಯವಾದಷ್ಟು ದುಡ್ಡು ಸಂಪಾದನೆ ಮಾಡಬೇಕು' ಎಂಬ ಆಲೋಚನೆ ಅವರ ತಲೆಯಲ್ಲಿರುತ್ತದೆ. ಆದ್ದರಿಂದ ನಾಳೆ ಮಾಡುವ ಕೆಲಸವನ್ನು ಇಂದೇ ಮಾಡಲು ಪ್ರಯತ್ನಿಸುತ್ತಾರೆ, ಗಡಿಯಾರ ನೋಡದೆ ದುಡಿಯುತ್ತಾರೆ. ಆದರೆ ನಮ್ಮ ಸ್ಥಳೀಯ ಕನ್ನಡಿಗರಿಗೆ, 'ನಾವು ಶಾಶ್ವತವಾಗಿ ಇಲ್ಲೇ ಇರುವುದರಿಂದ, ಇಂದು ಮಾಡುವ ಕೆಲಸವನ್ನು ನಾಳೆ ಮಾಡಿದರೂ ನಡೆಯುತ್ತದೆ' ಎಂಬ ಮನೋಭಾವ.

ವೃತ್ತಿಪರತೆಯ ಕೊರತೆಯ ಕಾರಣವೋ ಏನೋ, ನೀವು ಯಾವುದಾದರೂ ಒಳ್ಳೆಯ ಸ್ಟಾರ್ ಹೋಟೆಲ್ ಅಥವಾ ರೆಸಾರ್ಟ್‌ಗಳಿಗೆ ಹೋದರೆ ಅಲ್ಲಿ ಕನ್ನಡಿಗರು ಸಿಗುವುದೇ ಇಲ್ಲ. ಕನ್ನಡದ ಗಗಮನಸಖಿಯರು ಸಂಖ್ಯೆಯಲ್ಲಿ ವಿರಳ. ಸಾಮಾನ್ಯ ಜನಗಳಾದ ನಾವೇ, ಕನ್ನಡಿಗರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಹಿಂದು-ಮುಂದು ನೋಡುವಾಗ, ಇನ್ನು ದೊಡ್ಡ ದೊಡ್ಡ ಕಂಪನಿಗಳನ್ನು ನಡೆಸುವವರು ವೃತ್ತಿಪರತೆ ಇಲ್ಲದಿರುವ ಜನರನ್ನು 'ಕನ್ನಡಿಗರು' ಎಂಬ ಕಾರಣಕ್ಕೆ ಏಕೆ ತೆಗೆದುಕೊಳ್ಳುತ್ತಾರೆ? ಆದ್ದರಿಂದ, ಕನ್ನಡಿಗರಿಗೆ ಕರ್ನಾಟಕದಲ್ಲಿ ಕೆಲಸವು ಸಿಗದಿರುವುದಕ್ಕೆ ವೃತ್ತಿಪರತೆಯ ಕೊರತೆ ಬಹುಮುಖ್ಯ ಕಾರಣ, ಅದಕ್ಕೆ ಬೇರೆಯವರನ್ನು ದೂಷಿಸಿ ಪ್ರಯೋಜನವಿಲ್ಲ.

ಕನ್ನಡಾಂಬೆ ನಮ್ಮ ತಾಯಿ, ಸರಿ. ಆದರೆ, ಆಕೆ ಕೆಲವರಿಗೆ ಮಾತ್ರ ನೇರವಾಗಿ ಅನ್ನ ಕೊಡಲು ಸಾಧ್ಯ. ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ಸರಕಾರದಲ್ಲಿ ಕೆಲಸ ಮಾಡುವರು ಇಂಥವರಿಗೆ 'ಕನ್ನಡ' ಎಂಬುದು ಬಹುಶಃ ಅನ್ನ ಕೊಡುವ ಭಾಷೆ. ಇತರರು ತಮ್ಮ ಅನ್ನವನ್ನು ತಾವೇ ದುಡಿದುಕೊಳ್ಳಬೇಕು. ಅನ್ನವನ್ನು ದುಡಿದುಕೊಳ್ಳಲು ವೃತ್ತಿಪರತೆ, ಕೌಶಲ, ಬದ್ಧತೆ ಎಲ್ಲಾ ಬೇಕು; ಇಲ್ಲವಾದರೆ ಯಾರು ಕೂಡ 'ಕನ್ನಡಿಗರು' ಎಂಬ ಕಾರಣದಿಂದ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಕೆಳಗಿನಿಂದ ಹಿಡಿದು ಮೇಲಿನ ಹಂತದವರೆಗೆ ಕನ್ನಡಿಗರು ವೃತ್ತಿಪರತೆಯನ್ನು ಮೆರೆದಾಗ ಮಾತ್ರವೇ ಅವರು ಅನ್ಯರಾಜ್ಯದವರ ಜತೆ ಸ್ಪರ್ಧಿಸಿ ಕೆಲಸವನ್ನು ದಕ್ಕಿಸಿಕೊಳ್ಳಲು ಸಾಧ್ಯ. ಅದನ್ನು ಮಾಡದೆಯೇ ಬರೀ ಇತರ ರಾಜ್ಯದವರನ್ನು ದೂಷಿಸಿಕೊಂಡು, 'ಅವರು ನಮ್ಮ ಕೆಲಸವನ್ನು ಕಸಿಯುತ್ತಿದ್ದಾರೆ' ಎಂದು ಬೈದುಕೊಂಡು ದಿನದೂಡುತ್ತಿದ್ದರೆ ಅದರಿಂದ ನಮ್ಮ ಏಳಿಗೆಯಾಗುವುದಿಲ್ಲ. ಸರಕಾರದಿಂದ ದೊರಕುವ ಉಚಿತ ಅಕ್ಕಿ, ಅಕೌಂಟಿಗೆ ಬಂದು ಬೀಳುವ ಸಣ್ಣ ಮೊತ್ತದ ಹಣ ಇವುಗಳು ಶಾಶ್ವತವಲ್ಲ ಎಂಬುದನ್ನು ಕನ್ನಡಿಗರು ಮನಗಾಣಬೇಕು.

ಕೊನೇಮಾತು: ದೇಶದ ಮೂಲೆಮೂಲೆಗಳಿಂದ ಬಂದ ಜನರು ನಮ್ಮ ರಾಜ್ಯದಲ್ಲಿದ್ದಾರೆ. ಇದರ ಬಗ್ಗೆ ಸ್ಥಳೀಯರು ಆಕ್ಷೇಪಿಸುವುದುಂಟು. ಆದರೆ ಅದನ್ನು ನಕಾರಾತ್ಮಕವಾಗಿ ತೆಗೆದುಕೊಳ್ಳುವ ಬದಲು, 'ಇದು ರಾಷ್ಟ್ರದ ಎಲ್ಲಾ ಜನರಿಗೂ ಕನ್ನಡವನ್ನು ಕಲಿಸುವ ಅವಕಾಶ' ಎಂದು ಭಾವಿಸಿ, ಈ ಬೆಳವಣಿಗೆಯ ಉಪಯೋಗವನ್ನು ಪಡೆದುಕೊಳ್ಳುವುದು ಒಳ್ಳೆಯದು. ಅವರಿಗೆ ಕನ್ನಡವನ್ನು ಹೇಗೆ ಕಲಿಸಬಹುದು ಎಂಬುದರ ಬಗ್ಗೆ ಹೆಚ್ಚಿನ ಕೆಲಸ ಆಗಬೇಕಿದೆ. ಹೀಗೆ ಇತರರಿಗೆ ಕನ್ನಡವನ್ನು ಕಲಿಸುವುದರಿಂದ, ಅವರೊಂದಿಗೂ ಕನ್ನಡದಲ್ಲಿ ವ್ಯವಹರಿಸುವುದರಿಂದ, ಕನ್ನಡದ ವಿಸ್ತರಣೆಗೆ/ವ್ಯಾಪಕತೆಗೆ ಒಳ್ಳೆಯ ಅವಕಾಶ ಸಿಕ್ಕಂತಾಗುತ್ತದೆ.

(ಲೇಖಕರು ಇಂಟರ್‌ವೆನ್ಷನಲ್ ರೇಡಿಯೊಲೊಜಿಸ್ಟ್)

ಭಟ್ಟರ್ ಸ್ಕಾಚ್

- ಎ.ಬಿ.ಉಮರ್ಜಿ, ಮುದ್ದೇಬಿಹಾಳ
  ಭಟ್ರೇ, ರಾಜಕಾರಣಿಗಳು ದಮ್ಮು, ತಾಕತ್ತು ಎಂಬ ಪದಗಳ ಹಿಂದೆ ಬೀಳೋದ್ಯಾಕೆ?
  – **ವಯಸ್ಸಾದ ಬಳಿಕ ದಮ್ಮು, ತಾಕತ್ತನ್ನು ಮಾತಿನಲ್ಲಿ ಮಾತ್ರ ತೋರಿಸಬೇಕಲ್ಲ?!**
- ಉಜ್ಜನಿ ಜಲೇಂದ್ರ, ಮಲ್ಲುಂಗೆರೆ
  ಭಟ್ರೇ, ಹೆಂಡತಿ ಮುನಿಸಿಕೊಂಡರೆ ತವರಿಗೆ ಹೋಗ್ತಾಳೆ, ಗರ್ಲ್‌ಫ್ರೆಂಡ್ ಮುನಿಸಿಕೊಂಡರೆ?
  – **ಹೋಗ್ತಾಳೆ!**
- ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
  ಭಟ್ರೇ, ನಿಮ್ಮ ಅನೇಕ ಅಭಿಮಾನಿಗಳಿಗೆ ಸ್ಫೂರ್ತಿ ನೀಡಿದ ಪುಸ್ತಕ ಯಾವುದು?
  – **ಕುಡಿಯೋಣು ಬಾರಾ!**
- ಡಾ.ಆನಂದ ಕುಲಿಗೋಡ, ಧಾರವಾಡ
  ಭಟ್ರೇ, ನಿಮ್ಮಿಂದ 'ಓದೋಣು ಬಾರಾ', 'ಬರೆಯೋಣು ಬಾರಾ' ಪುಸ್ತಕವನ್ನು ನಿರೀಕ್ಷಿಸಿದ್ದೆ.. ಆದರೆ?
  – **'ಕುಡಿಯೋಣು ಬಾರಾ' ಓದಿದರೆ ಏನು ಬೇಕಾದರೂ ಮಾಡಬಹುದು!**
- ಗಣೇಶ ಡಂಬಳ, ಹರಪನಹಳ್ಳಿ
  ಭಟ್ರೇ, ಈ ಜಗತ್ತಿನಲ್ಲಿ ಸುಖೀ ಜೀವಿಗಳು ಅಂದ್ರೆ ಯಾರು?
  – **ಸರ್ವೇ ಜನ ಸುಖಿನೋ ಭವಂತೋ ಎಂಬ ಮಾತನ್ನು ಕೇಳಿಯೂ ಈ ಪ್ರಶ್ನೆಯಾ?!**
- ಅಮಾಸೆ ಸುಬ್ಬು, ಮೈಸೂರು
  ಭಟ್ರೇ, ಪರಿಚಿತ ಹುಡುಗಿ ನನಗೂ ಬೈಕ್ ಕಲಿಸು ಅಂತ ಬೆನ್ನ ಹಿಂದೆ ಬಿದ್ದಿದ್ದಾಳೆ. ಕಲಿಸುವ ಮುನ್ನ ಯಾತಕ್ಕೂ ನಿಮ್ಮ ಸಲಹೆ?
  – **ಕಲಿಸುವ ಕಳಕಳಿ ನಿನಗಿದ್ದರೆ ನೀನು ಅವಳ ಬೆನ್ನ ಹಿಂದೆ ಬೀಳಬೇಕು!**
- ವೇಣುಗೋಪಾಲ ಕಂಚಿತೋಟ, ಕಡೂರು
  ಭಟ್ರೇ, ಬಲ ಪಂಥದ ಪರವಾಗಿ ಬರೆದರೆ ಚಡ್ಡಿಪತ್ರಿಕೆ ಅಂತಾರೆ, ಸ್ವಲ್ಪ ಎಡ ಪರ ಬರೆದರೆ?
  – **ಚಡ್ಡಿ ಹಾಕದ ಪತ್ರಿಕೆ ಅಂತ ಯಾಕೆ ಕರೆಯೋದಿಲ್ವೋ?!**
- ವಿ.ಹೇಮಂತಕುಮಾರ, ಬೆಂಗಳೂರು
  ಭಟ್ರೇ, ಮಾಧ್ಯಮಕ್ಕೂ, ಉದ್ಯಮಕ್ಕೂ ವ್ಯತ್ಯಾಸವೇನು?
  – **ಅವೆರಡೂ ಒಂದರೊಳಗೊಂದು ಸೇರಿರುವ ಪದ!**
- ಎಲ್.ವಿ.ಸತೀಶ್, ಮೈಸೂರು
  ಭಟ್ರೇ, ನಿಮಗೆ ಒಂದು ದಿನ ಸಿಎಂ ಆಗುವ ಅವಕಾಶ ಸಿಕ್ಕರೆ?
  – **ಕುರ್ಚಿ ಬಿಟ್ಟು ಇಳಿಯುವುದಿಲ್ಲ!**
- ವಾಣಿ ಹುಗ್ಗಿ, (ಇಮೇಲ್ ಮೂಲಕ)
  ಭಟ್ರೇ, ಡ್ರೋನ್ ಹಾರಿಸುವ ನಿಮಗೆ ಇನ್ನೇನು ಹಾರಿಸಲು ಬರುತ್ತದೆ?
  – **ಕಾಗೆ ಹಾರಿಸಲು ಬರೊಲ್ಲಮ್ಮ!**
- ಅಶೋಕಕುಮಾರ, ಚಿಕ್ಕಮಗಳೂರು
  ಭಟ್ರೇ, ಗೆದ್ದೆತ್ತಿನ ಬಾಲಕ್ಕೂ, ಹನುಮಂತನ ಬಾಲಕ್ಕೂ ಸಂಬಂಧ ಇದೆಯಾ?
  – **ಹನುಮಂತನ ಬಾಲಕ್ಕೆ ಕೊನೆ ಇದೆ, ಆದರೆ ಗೆದ್ದೆತ್ತಿನ ಬಾಲಕ್ಕಿಲ್ಲ!**

ಇನ್ನು ನೀರು ಬಳಸದೇ ಇದನ್ನು ಮಾಡಬಹುದು...

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕಳೆದ ಹತ್ತು ದಿನದಿಂದ ಯುರೋಪ್ ತಿರುಗಾಟದಲ್ಲಿದ್ದೇನೆ. ಜರ್ಮನಿ, ಸ್ವಿಜರ್ಲೆಂಡ್, ಇಟಲಿಯಂಥ ದೊಡ್ಡ ದೇಶದಲ್ಲೂ, ಸಾನ್ಮಾರಿನೋ, ಲೀಚೆನ್‌ಸ್ಟೇನ್‌ನಂಥ ಸಣ್ಣ ದೇಶದಲ್ಲೂ ನಾನು ಕಂಡ ಒಂದು ವಿಷಯ ನಿಮಗೆ ಹೇಳಬೇಕು. ಇತ್ತೀಚೆಗೆ ಈ ದೇಶಗಳಲ್ಲಿ ಬಹುತೇಕ ಸಾರ್ವಜನಿಕ ಮೂತ್ರಖಾನೆಗಳಲ್ಲಿ ಸ್ವಚ್ಛ ಮಾಡಲು ನೀರು ಬಳಸುತ್ತಿಲ್ಲ. ಅಂದರೆ, ಮೂತ್ರ ವಿಸರ್ಜನೆಯ ನಂತರ ಫ್ಲಶ್ ಆಗುವುದಿಲ್ಲ. 'ಅಯ್ಯೋ ಮೂತ್ರ ಖಾನೆಯಲ್ಲಿ ನೀರು ಬಳಸದಿದ್ದರೆ ಸ್ವಚ್ಛವಾಗಿರುವುದಾದರೂ ಹೇಗೆ? ಕೆಟ್ಟ ವಾಸನೆ ಬರುವುದಿಲ್ಲವೇ?' ಇತ್ಯಾದಿ ಪ್ರಶ್ನೆಗಳು ಬರುವುದು ಸಹಜ.

ಭಾರತದ ಬಹುತೇಕ ಸಾರ್ವಜನಿಕ ಪಾಯಖಾನೆ, ಮೂತ್ರಖಾನೆಯ ಒಳಗೆ ಹೊಕ್ಕು, ಹೊರಗೆ ಬರುವ ವರೆಗೂ ಒಂದು ಕೈ ಮೂಗು ಮುಚ್ಚಿಕೊಳ್ಳುವುದರಲ್ಲೇ ವ್ಯಸ್ಥವಾಗಿರುತ್ತದೆ. ಏಕೆಂದರೆ ಆ ಸ್ಥಳ ವಾಕರಿಕೆ ಬರುವಷ್ಟು ಗಬ್ಬೆದ್ದು ನಾರುತ್ತಿರುತ್ತದೆ. ಅಲ್ಲಿಯ ಕೆಟ್ಟ ವಾಸನೆಗೆ ಹೆದರಿ, ಮಲ-ಮೂತ್ರ ವಿಸರ್ಜನೆಗೆ ಹೋಗದೇ, ಕಟ್ಟಿಕೊಂಡು ಕುಳಿತುಕೊಳ್ಳುವವರೂ ಇದ್ದಾರೆ. ಆದರೆ ನೀರು ಬಳಸದೇ ಇರುವ ಮೂತ್ರಖಾನೆಯಲ್ಲಿ ಸ್ವಲ್ಪವೂ ವಾಸನೆ ಬರುವುದಿಲ್ಲ ಎಂದರೆ ಆಶ್ಚರ್ಯಪಡಬೇಕಾಗಿಲ್ಲ.

ನೀರನ್ನು ಬಳಸದ ಮೂತ್ರದ ಬಟ್ಟಲಿನ (Waterless Urinal Bowl) ಬಗ್ಗೆ ನೀವು ಕೇಳಿರಬಹುದು. ಇದನ್ನು ನೀರು ಬಳಸದೇ ಮೂತ್ರ ಮಾಡುವ ಸ್ಥಳವನ್ನು ಸ್ವಚ್ಛಗೊಳಿಸುವ ತಂತ್ರಜ್ಞಾನ ಹೊಂದಿರುವ ಕಮೋಡ್ ಎನ್ನಬಹುದು. ಇದರಲ್ಲಿ ನೀರು ಉಳಿತಾಯವಾಗುವುದಷ್ಟೇ ಅಲ್ಲ, ವಾಸನೆಯೂ ಬರುವುದಿಲ್ಲ. ಯುರೋಪ್‌ನ ಬಹುತೇಕ ಕಡೆಗಳಲ್ಲಿ ಈ ತಂತ್ರಜ್ಞಾನ ಬಳಸಿದ್ದಾರೆ ಎಂದು ಹೇಳಿದೆನಲ್ಲ, ಕೆಲವು ಕಡೆ ಈ ತಂತ್ರಜ್ಞಾನದಿಂದಾಗಿ ಎಷ್ಟು ನೀರು ಉಳಿಯುತ್ತಿದೆ ಎಂದು ಫಲಕಗಳನ್ನೂ ಹಾಕಿದ್ದಾರೆ. ಅದರ ಪ್ರಕಾರ, ಒಬ್ಬ ವ್ಯಕ್ತಿ ಮೂತ್ರ ವಿಸರ್ಜನೆ ಮಾಡಿದ ನಂತರ ಅದನ್ನು ಸ್ವಚ್ಛಮಾಡುವುದಕ್ಕೆ ಬೇಕಾದ 3 ಲೀಟರ್ ನೀರು ಉಳಿತಾಯವಾಗುತ್ತಿದೆಯಂತೆ. ಭಾರತದಲ್ಲಿ ಈ ತಂತ್ರಜ್ಞಾನ ಇಲ್ಲವೆಂದೇನೂ ಅಲ್ಲ. ಕೆಲವು ವಿಮಾನ ನಿಲ್ದಾಣಗಳಲ್ಲಿ ನಾನು ಇದನ್ನು ಕಂಡಿದ್ದೇನೆ. ಇನ್ನೂ ಹೆಚ್ಚು ಸಾರ್ವಜನಿಕ ಸ್ಥಳಗಳಲ್ಲಿ 'ವಾಟರ್‌ಲೆಸ್ ಯೂರಿನಲ್ ಬೌಲ್' ಅಳವಡಿಸಿಕೊಂಡರೆ ಮುಂದಿನ ದಿನಗಳಲ್ಲಿ ಭಾರತದಲ್ಲೂ ಹೆಚ್ಚು ನೀರು ಉಳಿಸಬಹುದು.

ಹಾಗಾದರೆ ಇದು ಹೊಸ ಆವಿಷ್ಕಾರವೇ? ಖಂಡಿತ ಅಲ್ಲ. ಇದೇನು ನಿನ್ನೆ ಮೊನ್ನೆ ಬಂದದ್ದಲ್ಲ. ಸುಮಾರು 2 ದಶಕದ ಹಿಂದೆಯೇ 'ವಾಟರ್‌ಲೆಸ್' ಹೆಸರಿನ ಸಂಸ್ಥೆ ಈ ಬದಲಾವಣೆ ತರಲು ಪ್ರಯತ್ನಿಸಿತು. ಇಂದು ಸ್ಯಾನಿಟರಿ ವೇರ್ ತಯಾರಿಸುವ ಬಹಳಷ್ಟು ಕಂಪನಿಗಳು ಇದನ್ನು ತಯಾರಿಸುತ್ತಿವೆ. ಯುರೋಪ್‌ನ ಬಹುತೇಕ ರಾಷ್ಟ್ರಗಳು, ಅಮೆರಿಕ, ರಷ್ಯಾದಂಥ ಅಭಿವೃದ್ಧಿ ಹೊಂದಿದ ದೇಶದ ಹೆಚ್ಚಿನ ಭಾಗದಲ್ಲಿ ಈಗಾಗಲೇ ಇದು ಚಾಲ್ತಿಯಲ್ಲಿದ್ದು, ಈಗ ಕೊಲ್ಲಿ ರಾಷ್ಟ್ರಗಳಿಗೂ ಲಗ್ಗೆ ಇಡುತ್ತಿದೆ. ಒಂದು ಹನಿ ನೀರನ್ನೂ ಬಳಸದೇ ಕಾರ್ಯ ನಿರ್ವಹಿಸುವ ಈ ಬಟ್ಟಲಿನಲ್ಲಿರುವುದು ಎರಡು ಪ್ರಮುಖ ವಸ್ತುಗಳು. ಒಂದು, ಇಕೋ ಟ್ರಾಪ್. ಮತ್ತೊಂದು, ಜೆಲ್. ತಂತ್ರಜ್ಞಾನ ಬಹಳ ಸರಳ. ಗುರುತ್ವಾಕರ್ಷಣೆಯಿಂದ ಮೂತ್ರ ಇಕೋ ಟ್ರಾಪ್ ಮತ್ತು ಅದರ ಒಳಪದರದಲ್ಲಿರುವ ಜೆಲ್‌ನಲ್ಲಿ ಇಳಿದು, ಡ್ರೈನ್ ಪೈಪ್ ಮುಖಾಂತರ ಹರಿದುಹೋಗುತ್ತದೆ. ಮೂತ್ರಕ್ಕಿಂತ ಹಗುರವಾಗಿರುವ ಜೆಲ್ ಮೇಲೆ ತೇಲುತ್ತಿದ್ದು, ವಾಸನೆ ಬರದಂತೆ ತಡೆಗಟ್ಟುತ್ತದೆ. ಮೇಲಿನ ಬೌಲ್ ಸ್ವಚ್ಛ ಮಾಡಲು ಬೇಕಾಗುವುದು ತಿಂಗಳಿಗೆ ಒಂದು ಬಕೆಟ್ ನೀರು. ಅದೂ ಇಲ್ಲವೆಂದರೆ, ಇದಕ್ಕಾಗಿಯೇ ತಯಾರಿಸಿದ ರಾಸಾಯನಿಕ ದ್ರವ್ಯಗಳನ್ನು ಬಳಸಬಹುದು. ವರ್ಷಕ್ಕೆ ಎರಡು ಬಾರಿ, ಇಕೋ ಟ್ರಾಪ್‌ನಲ್ಲಿರುವ ಕ್ಯಾಟ್ರಿಜ್ ಬದಲಾಯಿಸುವುದು, ತಿಂಗಳಿಗೆ ಒಂದೋ ಎರಡೋ ಸಲ (ಬಳಕೆಗೆ ತಕ್ಕಂತೆ) ಜೆಲ್ ಸೇರಿಸುವುದಷ್ಟೇ ಕೆಲಸ. ಇದೆಲ್ಲ 3-4 ನಿಮಿಷದಲ್ಲಿ ಮುಗಿದುಹೋಗುತ್ತದೆ. ಇಪ್ಪತ್ತು ಸಾವಿರ ರುಪಾಯಿಗಿಂತಲೂ ಕಡಿಮೆ ಬೆಲೆಗೆ ದೊರಕುವ ಒಂದು ಬೌಲ್, ಪ್ರತಿ ನಿತ್ಯ ನಾಲ್ಕು ನೂರರಂತೆ, ವರ್ಷಕ್ಕೆ ಒಂದೂವರೆ ಲಕ್ಷ ಲೀಟರ್ ನೀರನ್ನು ಉಳಿಸುತ್ತದೆ. ವಾಸನೆ ರಹಿತವೂ, ಸೂಕ್ಷ್ಮಾಣುಮುಕ್ತವೂ ಆಗಿರುವ ಇದರ ನಿರ್ವಹಣೆಯ ವೆಚ್ಚ ಒಂದು ಬಳಕೆಗೆ ಏಳು ಪೈಸೆಗಿಂತಲೂ ಕಡಿಮೆ ಎಂದರೆ ಇನ್ನೇನು ಬೇಕು?

ಇದರೊಂದಿಗೆ ಈಗ ನೀರನ್ನು ಬಳಸದ ಶೌಚಗಳೂ ಜನಪ್ರಿಯವಾಗುತ್ತಿವೆ. ಎರಡು ಬಗೆಯ ನೀರನ್ನೇ ಬಳಸದ ಶೌಚಾಲಯಗಳು ಮಾರುಕಟ್ಟೆಗೆ ಬಂದಿವೆ. ಮೊದಲು ಬಯಲು ಶೌಚದ ಕಾಲದಲ್ಲಿ ಒಂದು ಬಿಂದಿಗೆ ನೀರಿನಲ್ಲಿ ಎಲ್ಲಾ ಕಾರ್ಯ ಮುಗಿಯುತ್ತಿತ್ತು. ಆ ಪದ್ಧತಿ ಒಳ್ಳೆಯದಲ್ಲ ಎನ್ನುವುದನ್ನು ಒಪ್ಪುವಂಥದ್ದೇ. ಆದರೆ ಸೆಪ್ಟಿಕ್ ಶೌಚಾಲಯಗಳು ಬಂದ ನಂತರ ನೀರಿನ ಬಳಕೆಯೂ ಹೆಚ್ಚಾಯಿತು, ಜತೆಗೆ ನಿರ್ವಹಣೆ ಸರಿಯಾಗದಿದ್ದಾಗ ಅಂತರ್ಜಲ ಮಲಿನವಾಗತೊಡಗಿತು. ಆರಂಭದ ದಿನಗಳಲ್ಲಿ ಒಮ್ಮೆ ಫ್ಲಶ್ ಮಾಡಿದರೆ ಕಮ್ಮಿ ಎಂದರೂ ಹದಿನೈದರಿಂದ ಇಪ್ಪತ್ತು ಲೀಟರ್ ನೀರು ಹರಿದು ಹೋಗುತ್ತಿತ್ತು. ಇತ್ತೀಚೆಗೆ ಬರುವ ಫ್ಲಶ್ ಟ್ಯಾಂಕ್‌ಗಳು 6 ಲೀಟರ್ ಸಾಮರ್ಥ್ಯವುಳ್ಳದ್ದು. ಅದೂ ಹೆಚ್ಚು ಎಂದೆನಿಸಿದಾಗ ಬದಲಿ ವ್ಯವಸ್ಥೆಗೆ ಹುಡುಕಾಟ ಆರಂಭವಾಯಿತು. ಇದರ ಪರಿಣಾಮವೇ ಕಾಂಪೋಸ್ಟ್ ಶೌಚಾಲಯ. ಈ ಶೌಚಾಲಯದಲ್ಲಿ ತ್ಯಾಜ್ಯ ಸಂಗ್ರಹಿಸಲು ಕೆಳಗಡೆ ಕಪ್ಪು ಬಣ್ಣದ ಒಂದು ತೊಟ್ಟಿ ಇರುತ್ತದೆ. ತೊಟ್ಟಿಯೊಳಕ್ಕೆ ಗಾಳಿ ಬರಲು ಒಂದು, ಆವಿ ಹೊರಗೆ ಹೋಗಲು ಒಂದು, ಹೀಗೆ ಎರಡು ಕೊಳವೆಗಳಿರುತ್ತವೆ. ಕಪ್ಪು ಬಣ್ಣದ ತೊಟ್ಟಿ ಸೂರ್ಯನ ಶಾಖ ಎಳೆದುಕೊಂಡು ತೊಟ್ಟಿಯೊಳಗಿನ ಗಾಳಿಯ ಉಷ್ಣತೆ ಹೆಚ್ಚಿಸುತ್ತದೆ. ಇದರಿಂದ ಶೇ.90ರಷ್ಟು ತ್ಯಾಜ್ಯ ಆವಿಯಾಗಿ ಹೋಗುತ್ತದೆ. ಈ ಕ್ರಿಯೆಯಲ್ಲಿ ವಾಸನೆ, ರೋಗಕಾರಕ ಬ್ಯಾಕ್ಟೀರಿಯಾಗಳೆಲ್ಲ ನಶಿಸಿಹೋಗುತ್ತವೆ. ಉಳಿದ ತ್ಯಾಜ್ಯ ಗೊಬ್ಬರಕ್ಕೆ! ಇಶ್ಶೀ, ಇದೇನು ಅನ್ನಬೇಡಿ. ಇದಕ್ಕೆ ಇಶ್ಶೀ ಅನ್ನುವುದಾದರೆ ವಿಮಾನ ಪ್ರಯಾಣ ಮಾಡುವಂತಿಲ್ಲ. ಏಕೆಂದರೆ ವಿಮಾನದಲ್ಲಿರುವ ಶೌಚಾಲಯ ಹೆಚ್ಚು ಕಮ್ಮಿ ಇದೇ ಮಾದರಿಯದ್ದು, ಸ್ವಲ್ಪ ವ್ಯತ್ಯಾಸ ಅಷ್ಟೆ. ರೈಲಿನಲ್ಲಿರುವ ಶೌಚಾಲಯಕ್ಕಿಂತ ಇದು ಒಳ್ಳೆಯದಲ್ಲವೇ?

ಇನ್ನೊಂದು ಮಾದರಿಯ ಶೌಚಾಲಯ ತ್ಯಾಜ್ಯವನ್ನು ಸುಡುವಂಥದ್ದು. ಇದು ವಿದ್ಯುತ್ ಚಾಲಿತ. ಕಮೋಡಿಗೆ ಒಂದು ಸ್ವಿಚ್ ಇರುತ್ತದೆ. ಶೌಚ ಮುಗಿಸಿ ಫ್ಲಶ್ ಮಾಡುವ ಬದಲು ಸ್ವಿಚ್ ಅಮುಕಿದರೆ ಆಯಿತು. ಕೆಳಗಿನ ತೊಟ್ಟಿಯಲ್ಲಿ ಶೇಖರಗೊಂಡ ತ್ಯಾಜ್ಯ 10-15 ನಿಮಿಷದಲ್ಲಿ ಸುಟ್ಟು ಬೂದಿಯಾಗುತ್ತದೆ. ಹೊಗೆ ಹೋಗಲು ಹೊರಗಡೆ ಕೊಳವೆ ಅಳವಡಿಸಿರುವುದರಿಂದ ಮನೆಯ ಒಳಗೆ ವಾಸನೆಯಾಗಲೀ ಹೊಗೆಯಾಗಲೀ ಬರುವುದಿಲ್ಲ. ಇದು ಒಂದು ರೀತಿಯಲ್ಲಿ ವಿದ್ಯುತ್ ಚಿತಾಗಾರದಲ್ಲಿ ಶವವನ್ನು ಸುಟ್ಟಂತೆಯೇ. ಈ ಎರಡೂ ಮಾದರಿ ನಮ್ಮ ಮನಸ್ಥಿತಿಗೆ ಒಗ್ಗಲಿಕ್ಕಿಲ್ಲ. ಪಶ್ಚಿಮದ ಮತ್ತು ದೂರದ ಪೂರ್ವ ದೇಶಗಳಲ್ಲಿ ಮೊದಲಿನಿಂದಲೂ ಶೌಚಾಲಯದಲ್ಲಿ ನೀರನ್ನು ಬಳಸುವ ಪರಿಪಾಠ ಬಹುತೇಕ ಇಲ್ಲವಾದ್ದರಿಂದ, ಅಲ್ಲಿ ಹೆಚ್ಚೇನೂ ಫರಕ್ ಬೀಳುವುದಿಲ್ಲ. ಎಷ್ಟೋ ಕಡೆ ನಲ್ಲಿ ನೀರಿಗೆ ತೆರಿಗೆ ಕಟ್ಟುವಂತೆ ಒಳಚರಂಡಿಯ ನೀರಿಗೂ ತೆರಿಗೆ ಕಟ್ಟಬೇಕಾಗುತ್ತದೆ. ಒಳಚರಂಡಿಯ ನೀರನ್ನು ಸಂಸ್ಕರಿಸಿ, ಶುದ್ಧಗೊಳಿಸುವುದಕ್ಕೂ ಅಷ್ಟೇ ಖರ್ಚಿದೆ. ಆದ್ದರಿಂದ ಇದನ್ನು ಭವಿಷ್ಯದ ಶೌಚಾಲಯ ಎಂದು ಹೇಳುವುದಿದೆ. ಜಲರಹಿತ ಶೌಚಾಲಯ ತಯಾರಿಸಿ, ನೀರಿಲ್ಲದ ಪ್ರದೇಶಗಳಲ್ಲಿ ವಿತರಿಸುವುದಕ್ಕೆ ಬಿಲ್ ಗೇಟ್ಸ್ ಫೌಂಡೇಷನ್ ಕಳೆದ 3-4 ವರ್ಷಗಳಿಂದ ಪ್ರತಿ ವರ್ಷ ಸುಮಾರು ಐದರಿಂದ ಆರು ಲಕ್ಷ ಡಾಲರ್ ದೇಣಿಗೆಯಾಗಿ ನೀಡುತ್ತಿದೆ.

ಬಹಳಷ್ಟು ಜನರಿಗೆ ವಾಹನ ತೊಳೆಯುವುದೆಂದರೆ ಸಂಭ್ರಮದ ಕೆಲಸ. ಬೇಕಾದದ್ದೇ. ನಮ್ಮ ವಾಹನಗಳನ್ನು ಶುಚಿಯಾಗಿಟ್ಟುಕೊಳ್ಳಲೇಬೇಕು. ಆದರೆ ಅದಕ್ಕೆ ವ್ಯಯವಾಗುವ ನೀರು? ನೀರಿಲ್ಲದೆ ಕಾರು, ಸ್ಕೂಟರ್‌ನಂಥ ವಾಹನಗಳನ್ನು ಶುಚಿಗೊಳಿಸಬಹುದಾ? ಈಗ ಅದೂ ಸಾಧ್ಯವಿದೆ. ವಾಹನದ ಕೆಳಭಾಗದಲ್ಲಿ ಅಥವಾ ಒಳಭಾಗದಲ್ಲಿರುವ ಕೊಳಕು ತೆಗೆಯಲು ಹೆಚ್ಚು ಒತ್ತಡದಿಂದ ನೀರು ಹರಿಸಬೇಕಾಗಬಹುದು. ಮೇಲ್ಮೈ ಸ್ವಚ್ಛಗೊಳಿಸಲು ನೀರೇ ಬೇಕೆಂದಿಲ್ಲ. 'ಸ್ಪ್ರೇ ಆನ್ ಕಾರ್ ವಾಶ್' ಅಥವಾ 'ನೋ ವಾಟರ್ ಕಾರ್ ವಾಶ್'ನಲ್ಲಿ ನೀರಿನ ಬದಲು ಶುಚಿಗೊಳಿಸುವ ದ್ರವದಿಂದ (ಕಾರ್ ಕ್ಲೀನರ್ ಲಿಕ್ವಿಡ್) ವಾಹನವನ್ನು ಸ್ವಚ್ಛಗೊಳಿಸಬಹುದು.

ಕ್ಲೀನರ್ ದ್ರವವನ್ನು ಸಿಂಪಡಿಸಿ, ಮೈಕ್ರೋಫೈಬರ್ ಟವೆಲ್‌ನಿಂದ ಒರೆಸುವುದಷ್ಟೇ ಕೆಲಸ. ಸೋಪು ಕರಡ ಬೇಕೆಂದಿಲ್ಲ, ಉಜ್ಜಬೇಕೆಂದಿಲ್ಲ. ಸಾಮಾನ್ಯವಾಗಿ ಮನೆಯಲ್ಲಿ ಒಂದು ಕಾರ್ ತೊಳೆಯಲು 400-500 ಲೀಟರ್ ನೀರು ಬೇಕಾಗುತ್ತದೆ. ಸರ್ವಿಸ್ ಸ್ಟೇಷನ್‌ಗಳಲ್ಲಿ ಸ್ವಲ್ಪ ಕಮ್ಮಿ, 150-200 ಲೀಟರ್ ನೀರು ಬೇಕಾಗುತ್ತದೆ. ಕಾರ್ ಕ್ಲೀನರ್ ಬಳಸಿದರೆ ಬೇಕಾಗುವುದು ಒರೆಸಿದ ಟವೆಲ್ ತೊಳೆಯಲು ಒಂದು ಬಕೆಟ್ ನೀರು.

ಇನ್ನೊಂದು ಹೊಸ ಶೋಧ ಕುತೂಹಲಕಾರಿಯಾಗಿದೆ. ತೀರಾ ಒಣಹವೆ ಇರುವ ಪ್ರದೇಶಗಳಲ್ಲಿ ಬಾಯಾರುವುದು, ಗಂಟಲು ಒಣಗುವುದು, ತುಟಿ ಒಡೆಯುವುದು, ಚರ್ಮ ಶುಷ್ಕವಾಗುವುದು ಇತ್ಯಾದಿ ಸಮಸ್ಯೆಗಳಿರುತ್ತವೆ. ವಾತಾವರಣದಲ್ಲಿ ಆರ್ದ್ರತೆ ಕಡಿಮೆ ಇರುವುದು ಇದಕ್ಕೆ ಕಾರಣ. ವಿಮಾನ ಪ್ರಯಾಣ ಮಾಡುವಾಗ ಕೆಲವರಿಗೆ ಈ ಅನುಭವ ಆಗುವುದಿದೆ. ಇಷ್ಟೇ ಆದರೆ ಪರವಾಗಿಲ್ಲ ಎನ್ನಬಹುದು, ಇದು ಕೆಲವರಿಗೆ ಅಲರ್ಜಿಯಾದರೆ, ಕೆಲವರಿಗೆ ಉಸಿರಾಡಲೂ ಕಷ್ಟವಾಗುತ್ತದೆ. ಈ ಸಮಸ್ಯೆಗೆ ಪರಿಹಾರ- ಹ್ಯೂಮಿಡಿಫೈಯರ್ ಅಥವಾ ಆರ್ದ್ರಕಗಳ ಸಹಾಯದಿಂದ ನಮ್ಮ ಮನೆಯೊಳಗಿನ ಆರ್ದ್ರತೆ ಹೆಚ್ಚಿಸುವುದು. ನೀರು ಕಾಯಿಸಿ, ತೇವಾಂಶ ಹೆಚ್ಚಿಸುವುದು ಇದಕ್ಕಿರುವ ಅತ್ಯಂತ ಸುಲಭ ವಿಧಾನ. ಮನೆಯಲ್ಲಿ, ಕಚೇರಿಗಳಲ್ಲಿ ಇಲೆಕ್ಟ್ರಿಕ್ ಹ್ಯೂಮಿಡಿಫೈಯರ್ ಬಳಸುವುದು ರೂಢಿ. ಇತ್ತೀಚೆಗೆ ನೀರನ್ನು ಬಳಸದೇ ಈ ಕೆಲಸ ಮಾಡುವ ಪುಟ್ಟ ಯಂತ್ರವನ್ನು ಕಂಡುಹಿಡಿಯಲಾಗಿದೆ. ನಾವು ಬಿಟ್ಟ ಉಸಿರಿನ ಶಾಖ ಮತ್ತು ಅದರಲ್ಲಿರುವ ತೇವಾಂಶವನ್ನೇ ಬಳಸಿಕೊಂಡು ಈ ಪುಟ್ಟ ಹ್ಯೂಮಿಡಿಫೈಯರ್ ಕಾರ್ಯನಿರ್ವಹಿಸುತ್ತದೆ. ಇತ್ತೀಚೆಗೆ ಇದನ್ನು ವೈದ್ಯಕೀಯ ಲೋಕದಲ್ಲೂ ಬಳಸಿಕೊಳ್ಳುತ್ತಿದ್ದಾರೆ. ಇಂದು ವಿಕ್ಸ್‌ನಂಥ ಕಂಪನಿಗಳು ಇದೇ ಸಿದ್ಧಾಂತವನ್ನಿಟ್ಟುಕೊಂಡು ವಾಟರ್‌ಲೆಸ್ ಡಿಫ್ಯೂಸರ್ ತಯಾರಿಸುತ್ತಿವೆ. ಕಚೇರಿಗಳಲ್ಲಿ ಸುಗಂಧ ದ್ರವ್ಯಗಳನ್ನು ಸೂಸುವ ಪುಟ್ಟ ಯಂತ್ರಗಳೂ ಇದೇ ಸಿದ್ಧಾಂತದಲ್ಲಿ ತಯಾರಾಗಿವೆ.

ನಿಮಗೆ ತಿಳಿದಿರಬಹುದು, ಸೌದಿ ಅರೇಬಿಯಾದ ವಿಸ್ತೀರ್ಣ ಸುಮಾರು ಎಂಟು ಲಕ್ಷ ಮೂವತ್ತು ಸಾವಿರ ಚದರ ಮೈಲಿ. ಅಂದರೆ, ಹೆಚ್ಚು ಕಮ್ಮಿ ಭಾರತದ ಎರಡು ಮೂರಾಂಶ. ಅಷ್ಟು ದೊಡ್ಡ ದೇಶದಲ್ಲಿ ಒಂದೇ ಒಂದು ನದಿ ಇಲ್ಲವೆಂದರೆ ನೀವು ನಂಬಲೇಬೇಕು. ದೇಶದ 95ರಷ್ಟು ಭಾಗ ಮರುಭೂಮಿ. ಬೇಸಗೆಯಲ್ಲಿ ತಾಪಮಾನ ಕೆಲವೊಮ್ಮೆ 50 ಡಿಗ್ರಿವರೆಗೂ ತಲುಪುತ್ತದೆ. ದೇಶದ ಮೂರೂವರೆ ಕೋಟಿ ಜನಸಂಖ್ಯೆಗೆ ಅಂತರ್ಜಲದಿಂದ ಕುಡಿಯುವ ನೀರು ದೊರಕುವುದು ಶೇ.40ರಷ್ಟು ಮಾತ್ರ. ಉಳಿದಂತೆ ಶೇ. 50ರಷ್ಟು ಸಮುದ್ರದ ನೀರನ್ನು ಶುದ್ಧೀಕರಿಸಿ, 10ರಷ್ಟು ಆಗೊಮ್ಮೆ ಈಗೊಮ್ಮೆ ಗುಡ್ಡಗಾಡು ಪ್ರದೇಶದಲ್ಲಿ ಬೀಳುವ ಮಳೆಯ ನೀರನ್ನು ಹಿಡಿದಿಟ್ಟುಕೊಳ್ಳುವ ಮೂಲಕ ಒದಗಿಸಿಕೊಡಲಾಗುತ್ತದೆ. ಕುವೈತ್, ಬಹ್ರೈನ್, ಕತಾರ್, ಒಮಾನ್, ಯೆಮನ್ ದೇಶಗಳೂ ಸೇರಿದಂತೆ ಈ ಭಾಗದ ಯಾವ ರಾಷ್ಟ್ರಗಳಲ್ಲೂ, ಉದಾಹರಣೆಗೆ ತೋರಿಸಬೇಕೆಂದರೂ, ಒಂದೇ ಒಂದು ನದಿ ಇಲ್ಲ. ಅಸಲಿಗೆ, ಅರ್ಧ ಚದರ ಕಿಲೋಮೀಟರ್‌ಗಿಂತಲೂ ಕಮ್ಮಿ ವಿಸ್ತೀರ್ಣವಿರುವ, ಪುಟ್ಟದೇಶವಾದ ವ್ಯಾಟಿಕನ್ ಸಿಟಿಯೂ ಸೇರಿದಂತೆ ಒಟ್ಟು 17 ರಾಷ್ಟ್ರಗಳಲ್ಲಿ ಒಂದೇ ಒಂದು ನದಿ ಇಲ್ಲ. ಈಜಿಪ್ಟ್ ದೇಶದ ಅವಶ್ಯಕತೆಯ ಶೇ.97ರಷ್ಟನ್ನು ಪೂರೈಸುವುದು ಭೂಮಿ ಮೇಲಿನ ಅತಿ ಉದ್ದದ ನದಿಯೆಂದು ಕರೆಸಿಕೊಳ್ಳುವ ನೈಲ್ ನದಿ. ಇನ್ನು 50 ವರ್ಷದಲ್ಲಿ ಜನಸಂಖ್ಯೆ ಎರಡು ಪಟ್ಟು ಹೆಚ್ಚಾಗಲಿದ್ದು, ರಾಜಧಾನಿ ಕೈರೋ ಮತ್ತು ಇತರ ನಗರಗಳಲ್ಲಿ ನೀರಿನ ಕೊರತೆ ಉಂಟಾಗಲಿದೆ ಎಂದು ಅಂದಾಜಿಸಲಾಗಿದೆ. ವಿಶ್ವಸಂಸ್ಥೆ ವರದಿಯ ಪ್ರಕಾರ, ವಿಶ್ವದಲ್ಲಿ ಈಗಾಗಲೇ ಹತ್ತರಲ್ಲಿ ನಾಲ್ಕು ಜನ ನೀರಿನ ಕೊರತೆಯಿಂದ ಬಳಲುತ್ತಿದ್ದಾರೆ. ಮೆಕ್ಸಿಕೋ ನಗರದಲ್ಲಿ ಶೇ.40ರಷ್ಟು ನೀರು ಸೋರಿಹೋಗುತ್ತಿದೆಯಂತೆ. ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ನೂರಕ್ಕೆ ಇಪ್ಪತ್ತರಿಂದ ಮೂವತ್ತೆದರಷ್ಟು ನೀರು ಸೋರಿಕೆಯಿಂದ ಪೋಲಾಗುತ್ತಿದೆ. ರಾಜಧಾನಿ ದಿಲ್ಲಿಯಲ್ಲಿ ಮಹಾನಗರಪಾಲಿಕೆ ಪ್ರತಿ ನಿತ್ಯ ಪೂರೈಸುವ 300 ಕೋಟಿ ಲೀಟರ್ ನೀರಿನಲ್ಲಿ ಕೇವಲ 17 ಕೋಟಿ ಲೀಟರ್ ಮಾತ್ರ ಮನೆಗಳಿಗೆ ತಲುಪುತ್ತಿದ್ದು, ಉಳಿದದ್ದು ಸೋರಿಹೋಗುತ್ತಿದೆ. ಈಗಾಗಲೇ ದಿಲ್ಲಿಯ ಶೇ.30ರಷ್ಟು ಮನೆಗಳಿಗೆ ದಿನದಲ್ಲಿ ಕೇವಲ 3 ತಾಸು ಮಾತ್ರ ನಲ್ಲಿ ನೀರು ಸಿಗುತ್ತಿದೆ ಎಂದರೆ ಪರಿಸ್ಥಿತಿ ಎಷ್ಟು ಕರುಣಾಜನಕವಾಗಿದೆ ನೋಡಿ. ದಕ್ಷಿಣ ಆಫ್ರಿಕಾದ ಕೇಪ್‌ಟೌನ್, ಜಪಾನಿನ ಟೋಕಿಯೊ, ಇಂಡೋನೇಷ್ಯಾದ ಜಕಾರ್ತಾ, ಆಸ್ಟ್ರೇಲಿಯಾದ ಮೆಲ್ಬರ್ನ್, ಚೀನಾದ ಬೀಜಿಂಗ್ ಸೇರಿದಂತೆ 15 ಮಹಾನಗರಗಳಲ್ಲಿ ಇನ್ನು 5 ವರ್ಷಕ್ಕೆ ನೀರಿಗೆ ಬರಗಾಲ ಬರಲಿದೆ ಎಂದು ಸಂಸ್ಥೆಯ ವರದಿ ಹೇಳುತ್ತಿದೆ. ಈ ಪಟ್ಟಿಯಲ್ಲಿ ಭಾರತದ 2 ಮಹಾನಗರಗಳಾದ ಬೆಂಗಳೂರು ಮತ್ತು ಚೆನ್ನೈ ಕೂಡ ಸೇರಿವೆ. ಹಾಗೇನಾದರೂ ಆದರೆ, ಕೃಷಿಗೆ ಬಿಡಿ, ಮುಂದಿನ ದಿನಗಳಲ್ಲಿ ಕುಡಿಯುವುದಕ್ಕಾಗಿ ಕಾವೇರಿ ನದಿಯ ನೀರಿಗಾಗಿ ಬಡಿದಾಡಿಕೊಳ್ಳುವ ಪರಿಸ್ಥಿತಿ ಎದುರಾಗಬಹುದು. ಎಲ್ಲಾ ಗೊತ್ತಿದ್ದೂ, ವಿಶ್ವದಾದ್ಯಂತ ಸಮುದ್ರ ಸೇರುತ್ತಿರುವ ಶೇ.80ರಷ್ಟು ನದಿಯ ನೀರನ್ನು ಹಿಡಿಟ್ಟುಕೊಳ್ಳಲಾಗದ ಅಸಹಾಯಕ ಸ್ಥಿತಿಯಲ್ಲಿ ನಾವಿದ್ದೇವೆ. ಹೀಗೇ ಮುಂದುವರಿದರೆ, 'ಕಮ್ಮಿ ನೀರು ಬಳಸಿ' ಎಂಬ ಕಾಲಘಟ್ಟವೂ ಮುಗಿದು, 'ನೀರಿಲ್ಲದೇ ಬದುಕುವ' ಯುಗವನ್ನು ಪ್ರವೇಶಿಸಲು ಸಿದ್ಧವಾಗಬೇಕಿದೆ. ಈ ಎಲ್ಲಾ 'ವಾಟರ್‌ಲೆಸ್'ಗಳೂ ಅದಕ್ಕೆ ಮುನ್ನುಡಿಯಂತೆ ಕಾಣುತ್ತಿವೆ.

ಆರೋಗ್ಯಭಾಗ್ಯ

ಡಾ. ಮಾದೇಶ್ ಮಂಜುನಾಥ್

ಎಚ್‌ಐವಿ ಪೀಡಿತರಿಗೆ ಇದು ವರದಾನವಾಗಬಹುದೇ?

2021ರ ವರದಿಯೊಂದರ ಪ್ರಕಾರ, ವಿಶ್ವಾದ್ಯಂತ ಸುಮಾರು 40 ಮಿಲಿಯನ್ ಜನರು ಎಚ್‌ಐವಿ/ಏಡ್ಸ್ ಸೋಂಕಿನೊಂದಿಗೆ ದಿನದೂಡುತ್ತಿದ್ದಾರೆ. 2019ರ ವರ್ಷವೊಂದರಲ್ಲೇ ಸುಮಾರು ಒಂದು ಮಿಲಿಯನ್ ಜನರು ಏಡ್ಸ್‌ನಿಂದ ಸಾವನ್ನಪ್ಪಿದ್ದಾರೆ. ಪ್ರಸ್ತುತ ಏಡ್ಸ್ ರೋಗವು ಒಂದು ಗಂಭೀರ ಕಳಂಕ ಅಥವಾ ಬಿಕ್ಕಟ್ಟು ಎನಿಸಿಕೊಂಡಿದೆ. ಸ್ಟೆಮ್ ಸೆಲ್ ಥೆರಪಿ, ಅದರಲ್ಲೂ ನಿರ್ದಿಷ್ಟವಾಗಿ 'ಹೆಮಟೋ ಪಯಟಿಕ್ ಸ್ಟೆಮ್‌ಸೆಲ್' ಕಸಿ ಮುಂತಾದ ಮುಂಬರಿಕೆ ವಿಧಾನಗಳು ಏಡ್ಸ್‌ಗೆ ಸಂಭಾವ್ಯ ಚಿಕಿತ್ಸೆಯಾಗಿ ಹೊರಹೊಮ್ಮಿ ಭರವಸೆಯನ್ನು ಮೂಡಿಸಿವೆ. ಇವು ಎಚ್‌ಐವಿ ಪೀಡಿತರ ಪಾಲಿಗೆ ಆಶಾಕಿರಣವಾಗಬಲ್ಲವು.

ಜರ್ಮನಿಯ ಮ್ಯೂನಿಚ್‌ನಲ್ಲಿ ನಡೆದ 25ನೇ ಅಂತಾರಾಷ್ಟ್ರೀಯ ಏಡ್ಸ್ ಸಮ್ಮೇಳನದಲ್ಲಿ, ದೀರ್ಘಾವಧಿಯ ಎಚ್‌ಐವಿ ಉಪಶಮನದ ಹೊಸ ಪ್ರಕರಣದ ವರದಿಯಾಗಿದೆ. ಇದು ಜಾಗತಿಕವಾಗಿ, ಎಚ್‌ಐವಿಯನ್ನು ಸಂಪೂರ್ಣವಾಗಿ ಗುಣಪಡಿಸಿದ ಏಳನೇ ಪ್ರಕರಣವಾಗಿದೆ.

2007ರಲ್ಲಿ, ತಿಮೋತಿ ಬ್ರೌನ್ ಎಂಬ ಜರ್ಮನ್ ಪ್ರಜೆಯು ಎಚ್‌ಐವಿ ಸೋಂಕಿನಿಂದ ಸಂಪೂರ್ಣವಾಗಿ ಗುಣಮುಖರಾದರೆಂದು ಪರಿಗಣಿಸಲಾಯಿತು. ತಿಮೋತಿ ಬ್ರೌನ್ ಅವರಿಗೆ ಎಚ್‌ಐವಿ ಸೋಂಕು ಮತ್ತು ಮೈಲೋಯ್ಡ್ ಲ್ಯುಕೇಮಿಯಾ (ಇದು ಒಂದು ತರಹದ ರಕ್ತದ ಕ್ಯಾನ್ಸರ್) ಇರುವುದು ಪತ್ತೆಯಾಯಿತು. CCR5-Delta32 ಎಂಬ ಅಪರೂಪದ ಆನುವಂಶಿಕ ರೂಪಾಂತರವನ್ನು ಹೊಂದಿರುವ ದಾನಿಯಿಂದ ಅವರು ಕಾಂಡಕೋಶ ಕಸಿ ಮಾಡಿಸಿಕೊಂಡರು; ಇದು ಎಚ್‌ಐವಿಗೆ ಆನುವಂಶಿಕ ಪ್ರತಿರೋಧವನ್ನು ಒದಗಿಸುತ್ತದೆ ಎಂದು ತಿಳಿದುಬಂತು. ಇದು ರೋಗನಿರೋಧಕ ಕೋಶಗಳನ್ನು, ವಿಶೇಷವಾಗಿ CD4 ಕೋಶಗಳನ್ನು ಎಚ್‌ಐವಿ ಸೋಂಕಿಗೆ ಒಳಗಾಗಲು ಬಿಡುವುದಿಲ್ಲ. ತಿಮೋತಿ ಬ್ರೌನ್ ಅವರು ಎಚ್‌ಐವಿಯಿಂದ ಸಂಪೂರ್ಣವಾಗಿ ಗುಣಮುಖರಾದರು ಕೂಡ, ಪುನರಾವರ್ತಿತ ರಕ್ತ ಕ್ಯಾನ್ಸರ್‌ನಿಂದ 2020ರಲ್ಲಿ ನಿಧನರಾದರು.

ದೀರ್ಘಾವಧಿಯ ಎಚ್‌ಐವಿ ನಿಯಂತ್ರಣ ಮತ್ತು ಗುಣಪಡಿಸುವಿಕೆಯನ್ನು ಕೈಗೂಡಿಸಲೆಂದು ನಿರ್ದಿಷ್ಟ ಕಾಂಡಕೋಶಗಳನ್ನು ಉತ್ತೇಜಿಸುವ ಅಗತ್ಯವಿದೆ; ಇದಕ್ಕಾಗಿರುವ ವಿಭಿನ್ನ ಮಧ್ಯಸ್ಥಿಕೆಗಳನ್ನು ಅನ್ವೇಷಿಸಲು ಹಲವಾರು ಮಾರ್ಗಗಳ ಲಭ್ಯತೆ ಇರುವುದನ್ನು ಇಂಥ ವರದಿಗಳು ದೃಢಪಡಿಸುತ್ತವೆ. ರೋಗಿಗಳು CCR5 ಗ್ರಾಹಕದಲ್ಲಿ ಒಂದೇ ರೂಪಾಂತರದೊಂದಿಗಿನ ಕಾಂಡಕೋಶ ದಾನಿಗಳನ್ನು ಬಳಸಬಹುದಾಗಿದೆ. ಸ್ಟೆಮ್ ಸೆಲ್ ಚಿಕಿತ್ಸೆಯು ಭವಿಷ್ಯದಲ್ಲಿ ಎಚ್‌ಐವಿ ಪೀಡಿತರ ಬದುಕಿಗೆ ಆಶಾಕಿರಣವಾಗಬಲ್ಲದು ಎಂಬುದನ್ನು ಈ ಪ್ರಕರಣಗಳು ನಮಗೆ ತಿಳಿಯಪಡಿಸುತ್ತವೆ. ಇಷ್ಟಾಗಿಯೂ, ಕಾಂಡಕೋಶ ಕಸಿ ವಿಧಾನಗಳಿಂದ ಕೆಲವೊಮ್ಮೆ ಅಡ್ಡಪರಿಣಾಮಗಳು ಉಂಟಾಗುವುದಿದೆ. ಈ ವಿಧಾನಗಳು ಸಂಕೀರ್ಣವಾಗಿರುವುದರಿಂದ ಗಮನಾರ್ಹ ಅಪಾಯವನ್ನು ಹೊಂದಿವೆ. ವಿಶೇಷ ರೀತಿಯ ಜೀವಕೋಶಗಳಾಗಿರುವ ಕಾಂಡಕೋಶಗಳು, ತಮ್ಮಂತೆಯೇ ಇರುವ ಹೆಚ್ಚಿನ ಕೋಶಗಳನ್ನು ಉತ್ಪಾದಿಸಲು ಸಮರ್ಥವಾಗಿವೆ, ಅಂದರೆ ಅವುಗಳು ಸ್ವಯಂನವೀಕರಣಗೊಳ್ಳುತ್ತವೆ. ಮಾತ್ರವಲ್ಲ, ಅವು ವಿಭಿನ್ನ ಕೆಲಸಗಳನ್ನು ಮಾಡುವ ಇತರ ಕೋಶಗಳಾಗಿ ಬದಲಾಗಬಹುದು. ಇದನ್ನು 'ಡಿಫರೆನ್ಸಿಯೇಷನ್' ಎಂದು ಕರೆಯಲಾಗುತ್ತದೆ. ಕಾಂಡಕೋಶಗಳು ದೇಹದ ಬಹುತೇಕ ಎಲ್ಲಾ ಅಂಗಾಂಶಗಳಲ್ಲಿ ಕಂಡುಬರುತ್ತವೆ. ಅವು ಅಂಗಾಂಶಗಳ ನಿರ್ವಹಣೆಗೆ ಮತ್ತು ಗಾಯದ ನಂತರದ ದುರಸ್ತಿಗೆ ಅಗತ್ಯವಾಗಿರುತ್ತವೆ.

ದಾನಿಗಳ ಲಭ್ಯತೆ, HLA (Human Leukocyte Antigen) ಹೊಂದಾಣಿಕೆ ಕಸಿ ಮಾಡುವಿಕೆಲೆ ಮತ್ತು ವೈರಾಣುವಿನಿಂದ ತಪ್ಪಿಸಿಕೊಳ್ಳುವಿಕೆ, ಕಾರ್ಯವಿಧಾನಕ್ಕೆ ಸಂಬಂಧಿಸಿದ ಅಪಾಯಗಳು, ಅಪೂರ್ಣ ಜೀನ್ ಮಾರ್ಪಾಡು ಮತ್ತು ವೈರಾಣುವಿನ ಮಲಿನಗೊಳಿಸುವಿಕೆ ಹೀಗೆ ಎಚ್‌ಐವಿ ಪ್ರಕರಣಗಳಲ್ಲಿನ ಕಾಂಡಕೋಶ ಚಿಕಿತ್ಸೆಗೆ ಒಂದಷ್ಟು ಮಿತಿಗಳಿವೆ.

2030ರ ವೇಳೆಗೆ ಏಡ್ಸ್ ರೋಗವನ್ನು ಜಾಗತಿಕವಾಗಿ ಅಂತ್ಯಗೊಳಿಸುವ ಆಶಾಭಾವವನ್ನು ವಿಶ್ವ ಆರೋಗ್ಯ ಸಂಸ್ಥೆ ಹೊಂದಿದೆ. ಈ ಆಶಯಕ್ಕೆ ಪೂರಕವಾಗಿ ಎಚ್‌ಐವಿ ಪರೀಕ್ಷೆಯನ್ನು ಉತ್ತೇಜಿಸುವುದನ್ನು ಮುಂದುವರಿಸಬೇಕಿರುವ ಅಗತ್ಯವಿದೆ.

(ಲೇಖಕರು ಎಚ್‌ಐವಿ ಸಂಬಂಧಿತ ಸಂಶೋಧನೆಗಳ ಸಹವರ್ತಿ)

ಪರಿತ್ಯಕ್ತ ಸಹಸಂಕೀರ್ಣಿಗರ ಯಾನೆ ಬಸವ ಭಂಜಕರ ಮೇಳೈಸುವಿಕೆ!

ಬಸವ ಮಂಟಪ

ರವಿ ಹಂಜ್
vveditoped@gmail.com

ಪರಿತ್ಯಕ್ತ ಚುರುಕರಿವಿನ ಮುಜುಗರ ಸಂಕೀರ್ಣತೆಗೊಳಗಾದವರು ಕ್ರಮೇಣವಾಗಿ ತಮ್ಮಂತೆಯೇ ಸಂಕೀರ್ಣತೆಗೊಳಗಾದ ಸಹಸಂಕೀರ್ಣಿಗರನ್ನು ಅಥವಾ ಸಹ ಸಂಕೀರ್ಣ ಗುಂಪುಗಳ ಸಂಗವನ್ನು ಬಯಸಿ ಸಂಘ ಕಟ್ಟಿಕೊಳ್ಳುತ್ತಾರೆ'' ಎಂದು ಮನಃಶಾಸ್ತ್ರವು ಹೇಳಿರುವುದನ್ನು ಹಿಂದಿನ ಅಂಕಣದಲ್ಲಿ ಓದಿದ್ದೀರಷ್ಟೇ. ಅದನ್ನು ಸಾಬೀತುಪಡಿಸಲೆಂಬಂತೆ ಇಮ್ಮಡಿ ಶಿವಬಸವ ಸ್ವಾಮಿಗಳು ಈ ಸಂಕೀರ್ಣತೆಗೊಳಗಾದ ಇನ್ನೋರ್ವ ಸಂಶೋಧಕ ಟಿ.ಎಚ್.ಎಂ. ಸದಾಶಿವಯ್ಯ ಎಂಬ ವಿದ್ವಾಂಸರನ್ನು ಆತುಕೊಂಡು ತಮ್ಮ 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರಭಾಷ್ಯ: ನಿಜದ ನಿಲುವು' ಕೃತಿಯಲ್ಲಿ ಶ್ರೀಕರಭಾಷ್ಯವನ್ನು ಖೊಟ್ಟಿ ಗ್ರಂಥ ಎಂದಿದ್ದಾರೆ. ಈ ಮಾನಸಿಕ ಸಂಕೀರ್ಣತೆಗೊಳಗಾದ ಆರಂಭದಲ್ಲಿ ಏಕಾಂಗಿಯಾಗಿ ಸಿದ್ಧಾಂತ ಶಿಖಾಮಣಿಗೆ ಮಸಿ ಬಳಿದ ಶ್ರೀಗಳು, ಶ್ರೀಕರ ಭಾಷ್ಯಕ್ಕೆ ಮಸಿ ಬಳಿಯುವ ಹೊತ್ತಿಗೆ ತಮ್ಮಂಥ ಸಂಕೀರ್ಣಿಗರನ್ನು ಆತುಕೊಂಡಿರುವುದು ಸುಸ್ಪಷ್ಟವಾಗಿ ಇವರ ಉಲ್ಬಣಿಸಿದ ಸಂಕೀರ್ಣತೆಗೆ ಭಾಷ್ಯ ಬರೆದಿದೆ. ಇಲ್ಲಿ ಟಿ.ಎಚ್.ಎಂ. ಸದಾಶಿವಯ್ಯನವರು ಇದೇ 'ಪರಿತ್ಯಕ್ತ ಚುರುಕರಿವಿನ ಮುಜುಗರ ಸಂಕೀರ್ಣತೆ'ಗೆ ಒಳಗಾದ ಹಿನ್ನೆಲೆಯನ್ನು ಗಮನಿಸೋಣ.

ಶ್ರೀ ಎಂ. ಶಿವಕುಮಾರಸ್ವಾಮಿಗಳು ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳ 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರ ಭಾಷ್ಯ: ನಿಜದ ನಿಲುವು- ಅದಕ್ಕೆ ಉತ್ತರ' ಲೇಖನದಲ್ಲಿ, ''ಶ್ರೀ ಸಿದ್ಧಾಂತ ಶಿಖಾಮಣಿಯ ಉಲ್ಲೇಖಗಳು ಶ್ರೀಕರಭಾಷ್ಯದಲ್ಲಿ ಬರುತ್ತವೆಯೆಂದು ಶ್ರೀಕರಭಾಷ್ಯದ ಕಾಲದ ಬಗ್ಗೆ ನಾವೆಲ್ಲಾ ಪ್ರಸ್ತಾಪಿಸಿರುವುದು ನಿಜ. ಶ್ರೀ ಸ್ವಾಮಿಗಳು ತಮ್ಮ ಗ್ರಂಥದ 'ಮೊದಲ ಮಾತಿ'ನಲ್ಲಿ 'ಹಿರಿಯ ವಿದ್ವಾಂಸರೊಬ್ಬರು ಶಿವಸುತರ ಲೇಖನಗಳನ್ನು ನೋಡುವಂತೆ ಸೂಚಿಸಿದರು. ಶ್ರೀಕರಭಾಷ್ಯಕ್ಕೆ ಸಂಬಂಧಿಸಿದ 'ಶಿವಸುತ'ರ ಲೇಖನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ. ಇದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಆಕ್ಷೇಪಿಸಲು ಅವರಿಗೆ ಮೂಲಸ್ಫೂರ್ತಿ ಎಲ್ಲಿಂದ ದೊರೆಯಿತು ಎಂಬುದು ತಿಳಿದುಬಂತು. ನನಗಂತೂ 'ಶಿವಸುತ' ಎಂದರೆ ಯಾರೆಂಬುದು ಮೊದಲು ಗೊತ್ತಾಗಲಿಲ್ಲ. ಶ್ರೀ ಸ್ವಾಮಿಗಳ ಗ್ರಂಥದಲ್ಲಿ ನನಗೆ 'ಶಿವಸುತ' ರಹಸ್ಯನಾಮದ ಭಾಜನರು 'ಶ್ರೀ ಸದಾಶಿವಯ್ಯನವರು' ಎಂದು ತಿಳಿದುಬಂತು. ತೆಲಗಿ ಹರಪನಹಳ್ಳಿ ಮಠದ (ಟಿ.ಎಚ್.ಎಂ.) ಸದಾಶಿವಯ್ಯನವರ ಬಗ್ಗೆ ನನಗೆ ಗೊತ್ತಾದದ್ದು ದಾವಣಗೆರೆಯಿಂದ ಪ್ರಕಟವಾದ 'ವೀರಶೈವದರ್ಶನ' ಎಂಬ ಪುಸ್ತಕವನ್ನು ಓದಿದಾಗ. ಆ ಪುಸ್ತಕದಲ್ಲಿ ಅವರು ವೀರಶೈವದ ಹುಟ್ಟನ್ನು ವೇದಾಗಮಗಳಲ್ಲಿ ಹುಡುಕುವ ಮತ್ತು ಹುಡುಕಿ ನಿರೂಪಿಸುವ ವ್ಯರ್ಥ ಪ್ರಯತ್ನಗಳನ್ನು ಅಲ್ಲಗಳೆದು; 12ನೇ ಶತಮಾನದಲ್ಲಿ ವೀರಶೈವ ಧರ್ಮವಿಪ್ಲವವು ವಿಪ್ಲವಿಸಿ ಆ ಕ್ರಾಂತಿ ಪ್ರವಾಹದಲ್ಲಿ ಸನಾತನ ಶೈವಧರ್ಮದ ಶಾಖೆಗಳೆಲ್ಲಾ ವಿಲೀನವಾಗಿ ಹೊಂದುವ ಎಂದಿನ್ಯಾರಿಯಾಗಿ ಪ್ರತಿಪಾದಿಸಿದ್ದಾರೆ. ಅದರ ಮಥಿತಾರ್ಥ ವೇದದ ವೀರಶೈವ ಮತವು ಬಸವಾದಿ ಶರಣರಿಂದ ಆರಂಭವಾಯಿತು ಎಂಬುದು. ಪಂಚಪೀಠಗಳನ್ನು ಸ್ಥಾಪಿಸಿದ ಜಗದ್ಗುರು ಪಂಚಾಚಾರ್ಯರು ವೀರಶೈವ ಮತದ ಸ್ಥಾಪಕರಲ್ಲ ಎಂದು ಹೇಳುವುದು ಅವರ ಉದ್ದೇಶ. ಆ ಪುಸ್ತಕವನ್ನು ಓದಿದಾಗ ಶ್ರೀ ರಂಭಾಪುರಿ ಪೀಠದ ಪರಂಪರೆಯನ್ನು (ವೀರಗೋತ್ರ, ಪಡ್ಡಿಡಿ ಸೂತ್ರ) ಹೇಳಿಕೊಳ್ಳುವ ಒಂದು ಮಠಕ್ಕೆ ಸೇರಿದ ವ್ಯಕ್ತಿ ಹೀಗೆ ಬರೆದಿದ್ದಾರಲ್ಲ ಎಂದು ದಿಗ್ಭ್ರಮೆಯುಂಟಾಯಿತು. ಆಗ ನಮ್ಮ ತಂದೆಯವರಲ್ಲಿ ಈ ಪುಸ್ತಕ ಮತ್ತು ಅದರ ಕರ್ತೃವಿನ ಬಗ್ಗೆ ಪ್ರಸ್ತಾಪಿಸಿದೆ. ನಮ್ಮ ತಂದೆಯವರು (ಜಗಲೂರು ತಾಲೂಕು ಅಸಗೋಡು ಮಠದ ಚನ್ನಯ್ಯನವರು. ಹರಪನಹಳ್ಳಿ ಹಯಾತ್ ಸಾಹೇಬರಲ್ಲಿ ಜ್ಯೋತಿಷ್ಯವನ್ನು ಕಲಿತವರು) ಶ್ರೀ ಟಿ.ಎಚ್.ಎಂ. ಸದಾಶಿವಯ್ಯನವರ ಬಗ್ಗೆ ಹೇಳಿದ್ದು ನನಗೆ ನೆನಪಿದೆ. ಹಿಂದಿನ ವರ್ಷ ಒಮ್ಮೆ ಧಾರವಾಡದಲ್ಲಿ ಅಕಸ್ಮಾತ್ ಪುಸ್ತಕದ ಅಂಗಡಿಯೊಂದಕ್ಕೆ ಹೋಗಿದ್ದಾಗ ಅಲ್ಲಿ ಭಾರತೀಯ ವಿದ್ಯಾಭವನದಿಂದ ಪ್ರಕಾಶಿತವಾದ ಶ್ರೀ ಸದಾಶಿವಯ್ಯನವರ A Discourse on Veerasaivism ಎಂಬ ಪುಸ್ತಕವನ್ನು ಕೊಂಡುಕೊಂಡೆ. ಅದರಲ್ಲಿ ನನಗೆ ಇನ್ನೊಂದು ದಿಗ್ಭ್ರಮೆ ಕಾಯ್ದುಕೊಂಡಿತ್ತು. ಈ ಪುಸ್ತಕದಲ್ಲಿ 'ವೀರಶೈವದರ್ಶನ'ದಿಂದ ಅಭಿವ್ಯಕ್ತವಾದ 'ದರ್ಶನ'ಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಅಭಿಪ್ರಾಯದ ದರ್ಶನವಾಯಿತು. ನಮ್ಮ ತಂದೆಯವರ ಮಾತು ಮತ್ತೊಮ್ಮೆ ಜ್ಞಾಪಕಕ್ಕೆ ಬಂತು. ನಾನು ಮೊದಲು ಓದಿದ್ದ ಪುಸ್ತಕ 1959ರ ಭಾಷಣದ ಮುದ್ರಿತ ರೂಪ. ಅನಂತರ ಓದಿದ ಇಂಗ್ಲಿಷ್ ಪುಸ್ತಕ 1922ರಲ್ಲಿ ಮಾಡಿದ ಭಾಷಣದ ಮುದ್ರಿತ ರೂಪ. 1922ರ ಭಾಷಣದಲ್ಲಿ ಶ್ರೀಕರಭಾಷ್ಯವನ್ನು ಆಧಾರವಾಗಿಟ್ಟುಕೊಂಡು ವೀರಶೈವ ಮತವು ಅವೈದಿಕವಲ್ಲ, ಅದಕ್ಕೆ ವೇದೋಪನಿಷತ್ತುಗಳೇ ಆಧಾರಗಳೆಂದು ಸಾಧಿಸಿದ ಅವರು 1959ರ ಭಾಷಣದಲ್ಲಿ ಅದನ್ನೇ ಕಟುವಾಗಿ ವಿರೋಧಿಸಿದ್ದಾರೆ. 1922ರಲ್ಲಿ ಪಂಚಪೀಠಗಳ ಪರಂಪರೆಯನ್ನು ಗೌರವದಿಂದ ಉಲ್ಲೇಖಿಸಿದ ಅವರು 1959ರ ಭಾಷಣದಲ್ಲಿ ಅದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ತಾಳಿದ್ದಾರೆ. ನನಗೆ ನನ್ನ ತಂದೆಯವರು ಶ್ರೀ ಸದಾಶಿವಯ್ಯನವರ ಬಗ್ಗೆ ಹೇಳಿದ ವಿಚಾರವೂ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರು ಹೇಳಿದ ವಿಚಾರವೂ ಒಂದೇ. ಶ್ರೀ ಸದಾಶಿವಯ್ಯನವರು ಶ್ರೀ ರಂಭಾಪುರಿ ಪೀಠಕ್ಕೆ ಅಭ್ಯರ್ಥಿಯಾಗಿದ್ದರು. ಅವರು ಆಯ್ಕೆಯಾಗದಿದ್ದುದರಿಂದ ಹತಾಶರಾಗಿ ಈ ರೀತಿ ಶ್ರೀಕರಭಾಷ್ಯ ಮತ್ತು ಪಂಚಾಚಾರ್ಯರ ಬಗೆಗೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂಬುದೇ ಆ ವಿಚಾರ. ಇದನ್ನು ಇಮ್ಮಡಿ ಶಿವಬಸವ ಸ್ವಾಮಿಗಳು 'ನಿರಾಧಾರ ಸತ್ಯದೂರವಾದ ಆರೋಪ'ವೆಂದು ಅಲ್ಲಗಳೆದಿದ್ದಾರೆ. ಈ ವಿಚಾರ ನಿರಾಧಾರವೂ ಅಲ್ಲ, ಸತ್ಯದೂರವೂ ಅಲ್ಲ. ಏಕೆಂದರೆ ಶ್ರೀ ಸದಾಶಿವಯ್ಯನವರ ಜೀವನ ಚರಿತ್ರೆಯನ್ನು ಬರೆದ ಡಾ. ಬಸವರಾಜ ಮಲಶೆಟ್ಟಿ ಅವರು ನಮೂದಿಸಿದ ಪ್ರಸಂಗವು ಇದಕ್ಕೆ ಆಧಾರವಾಗಬಲ್ಲದು: ದಿವಂಗತ ಪ್ರಸಂಗವು ಇದಕ್ಕೆ ಆಧಾರವಾಗಬಲ್ಲದು: ಸದಾಶಿವಯ್ಯ ಇನ್ನೂ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಒಂದು ಘಟನೆ ನಡೆಯಿತು. ಅವರ ದೊಡ್ಡಪ್ಪ ಬಿದರಿದ್ದ ಶಾಸ್ತ್ರಿಗಳು ಧಾರ್ಮಿಕ ಸ್ವಭಾವದವರೆಂಬುದನ್ನು ಈ ಮೊದಲೇ ಹೇಳಿದೆ. ಅವರಿಗೆ ಸದಾಶಿವಯ್ಯನವರ ಮೇಲೆ ವಿಶೇಷ ಅಕ್ಕರೆ. ಚೈತನ್ಯದ ಚಿಲುಮೆಯಂತಿರುವ ಈ ಹುಡುಗನನ್ನು ಬಾಳೆಹೊನ್ನೂರು ಪೀಠಕ್ಕೆ ಜಗದ್ಗುರುವನ್ನಾಗಿ ಮಾಡಬೇಕೆಂಬುದು ಅವರ ಇಚ್ಛೆಯಾಗಿತ್ತು. ಇದಕ್ಕೆ ದಾವಣಗೆರೆಯ ಹನಗವಾಡಿ ಮುರಿಗೆಪ್ಪನವರು ಬೆಂಬಲವಾಗಿ ನಿಂತರು. ಸದಾಶಿವಯ್ಯನವರನ್ನು ಕರೆದುಕೊಂಡು ಬಾಳೆಹೊನ್ನೂರಿಗೆ ಹೋಗಿಬಂದರು. ಆದರೆ ಅವರ ಆಶೆ ನೆರವೇರಲಿಲ್ಲ. ನಿರಾಶೆ, ಅಪಮಾನ ಎರಡೂ ಆದವು. ಇದು ಸದಾಶಿವಯ್ಯನವರ ಮನಸ್ಸಿನ ಮೇಲೆ ಪರಿಣಾಮ ಮಾಡದೇ ಇರಲಿಲ್ಲ. ಅವರು ಮುಂದೆ ಜೀವನದುದ್ದಕ್ಕೂ ಗುರುಪೀಠಗಳ ಬಗ್ಗೆ ಅಸಹನೆಯಿಂದ ನಡೆದುಕೊಂಡುದಕ್ಕೆ ಇದೇ ಮೂಲ ಕಾರಣವಾಯಿತು (ಟಿ.ಎಚ್.ಎಂ. ಸದಾಶಿವಯ್ಯನವರು, ವೀರಶೈವ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ-66, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ). ಅದೇ ರೀತಿ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರು, '1922ರಲ್ಲಿ ಪುಟ್ಟಣ್ಣಶೆಟ್ಟರ ನೇತೃತ್ವದ ಆಯ್ಕೆ ಸಮಿತಿಯಿಂದ' (ಪು. 122) ಅವರು ಆಯ್ಕೆಯಾಗಲಿಲ್ಲ ಎಂಬಲ್ಲಿ ವರ್ಷದ ಟಿ.ಎಚ್.ಎಂ. ಮಾಹಿತಿಯಲ್ಲಿ ವ್ಯತ್ಯಾಸವಿದೆ. ಆದರೆ ಸದಾಶಿವಯ್ಯನವರು ಶ್ರೀ ರಂಭಾಪುರಿ ಪೀಠಕ್ಕೆ ಅಭ್ಯರ್ಥಿಯಾಗಿದ್ದುದು ನಿಜ. ಅವರು ಆಯ್ಕೆಯಾಗದೆ ಇದ್ದುದೂ ನಿಜ (ಆಗ ಆಯ್ಕೆಯಾಗಿ ಪೀಠಕ್ಕೆ ಬಂದವರು ಹಿರೇಹಾಳು ಹಿರೇಮಠದ ಪಂ. ಸದಾಶಿವ ಶಾಸ್ತ್ರಿಗಳು; ಇವರು ದಿನಾಂಕ 22-11-1925ರಂದು ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯರೆಂಬ ಹೆಸರಿನಿಂದ ಪೀಠಾಧಿಪತಿಗಳಾದರು)'' ಎನ್ನುತ್ತಾರೆ.

ಹೀಗೆ ಪೀಠಾಧಿಕಾರದ ಅವಕಾಶ ನಿರಾಕರಣೆಯಿಂದ ಟಿ.ಎಚ್.ಎಂ. ಸದಾಶಿವಯ್ಯನವರಲ್ಲಿ 'ಪರಿತ್ಯಕ್ತ ಚುರುಕರಿವಿನ ಮುಜುಗರ ಸಂಕೀರ್ಣತೆ'ಯನ್ನುಂಟು ಮಾಡಿ ಮಾನಸಿಕ ತಜ್ಞರು ನಿರೂಪಿಸುವ ನಿರಾಕರಿಸಿದವರನ್ನು ದ್ವೇಷಿಸುವುದೇ ಸ್ವಾಭಾವಿಕ. ಅದಕ್ಕೆ ಸಾಕ್ಷಿಯೆಂಬಂತೆ ಶ್ರೀ ಎಂ. ಶಿವಕುಮಾರ ಸ್ವಾಮಿಗಳು ತಮ್ಮ ಲೇಖನದಲ್ಲಿ ಮುಂದುವರಿಯುತ್ತಾ, ''ಮಾಹಿತಿಗಳನ್ನು ಕೆದಕಿ ಕೆದಕಿ, ಸಿಕ್ಕ ಅಂತಃಕಂತೆ ಮಾಹಿತಿಗಳಿಗೆ ತಮ್ಮ ವಕೀಲಿ ಬುದ್ಧಿಯಿಂದ ರೂಪಕೊಟ್ಟು ನಿರೂಪಿಸಿದ ಉದ್ದೇಶಪೂರ್ವಕ ಜಿದ್ದಿನಿಂದ ಕಸರತ್ತು ಮಾಡಿ ಸಾಕ್ಷಿಗಳನ್ನು ಸೃಷ್ಟಿಸಿ, ತಮ್ಮದನ್ನು ಸಾಧಿಸುವ ಕಲೆ ವಕೀಲರಾಗಿದ್ದ (ನ್ಯಾಯಾಧೀಶರೂ ಆಗಿದ್ದ) ಸದಾಶಿವಯ್ಯನವರಿಗೆ ಕರಗತವಾಗಿತ್ತು ಎಂದು ಬೇರೆ ಹೇಳಬೇಕೇ?'' ಎಂದು ಸದಾಶಿವಯ್ಯನವರ ವಾದಕ್ಕೆ ಪಾಟಿಸವಾಲು ಹಾಕುತ್ತಾರೆ.

ಹಾಗೆಯೇ ತಮ್ಮ ವಾದವನ್ನು ಮುಂದುವರಿಸುತ್ತಾ, ''ಶ್ರೀ ಸದಾಶಿವಯ್ಯನವರು ಒಂದು ಸಮ್ಮೇಳನಕ್ಕೆ ಹೋಗಿದ್ದಾಗ, ಅಲ್ಲಿಗೆ ಬಂದಿದ್ದ ಆರಾಧ್ಯ ಬ್ರಾಹ್ಮಣರೋರ್ವರ ಮುಖದಿಂದ ಅವರಿಗೆ ತೆಲುಗು ದೇಶದ ಆರಾಧ್ಯಬ್ರಾಹ್ಮಣರಲ್ಲಿ ಶ್ರೀಕರಭಾಷ್ಯದ ಬಗ್ಗೆ ತರ್ಕ ವಿತರ್ಕಗಳು ಸುಮಾರು 35 ವರ್ಷಗಳಿಂದ ನಡೆಯುತ್ತಿರುವವೆಂದೂ ಬಹುಜನ ಪಂಡಿತರು ಈ ಭಾಷ್ಯವು ನೂತನವಾಗಿ ಕಲ್ಪಿಸಲ್ಪಟ್ಟಿರುವುದೆಂದು ಅಭಿಪ್ರಾಯಪಟ್ಟಿರುವರೆಂದೂ ತಿಳಿದುಬಂದಿತು. ನಂತರ ಅವರಿಗೆ ಸಿಕಂದರಾಬಾದಿನಲ್ಲಿದ್ದ ಶ್ರೀ ಪಂಡಿತಸ್ವಾಮಿ ಎಂಬುವವರು ಶ್ರೀಕರಭಾಷ್ಯವನ್ನು ಸಿದ್ಧಮಾಡಿ ತಮ್ಮ ಕೂಟಸ್ಥನಾದ ಆದಿ ಶ್ರೀಪತಿ ಪಂಡಿತರ ಹೆಸರಿನಲ್ಲಿ ಪ್ರಕಟಿಸಿದರು ಎಂದು ತಿಳಿದುಬಂದಿತು, ವಿರೋಧ ಪಕ್ಷದ ಶ್ರೀ ಮುದಿಗೊಂಡ ನಾಗಲಿಂಗಶಾಸ್ತ್ರಿಗಳ 'ಶೈವಭಾಷ್ಯ ನಿರ್ಣಯ' ಎಂಬ ಉಪನ್ಯಾಸದಿಂದ (ಅದರ ಪ್ರತಿ ಎಲ್ಲಿದೆಯೋ ಗೊತ್ತಿಲ್ಲ) ಮೇಲ್ಕಂಡ ಅಭಿಪ್ರಾಯದ ವಿರುದ್ಧವಾಗಿ ಶ್ರೀ ಚೌಗುಂಟಿ ಸೀತಯ್ಯ ಶಾಸ್ತ್ರಿಗಳು 'ಶೈವಸೂತ್ರ ಭಾಷ್ಯ ನಿರ್ಣಯ' ಎಂಬ ಲೇಖನದಲ್ಲಿ 'ಪಂಡಿತ ಸ್ವಾಮಿಗಳು ಹನ್ನೆರಡು ಸಾವಿರ ರುಪಾಯಿಗಳನ್ನು ಖರ್ಚು ಮಾಡಿ ಅನೇಕ ಪುಸ್ತಕ ಭಂಡಾರಗಳನ್ನು ಅನ್ವೇಷಿಸಿ ಈ ಗ್ರಂಥವನ್ನು ತೆಗೆದರಾಗಲಿ, ವಿಲುಪ್ತ ಸ್ಥಳಗಳಲ್ಲಿ ಮಿತಪಾಂಡಿತ್ಯವಂತರಿಂದ ಸಂಸ್ಕರಿಸಿದ್ದರಿಂದ ಪ್ರಸ್ತುತವಾದ ಸಂಸ್ಕರಣಗಳೇ ಶಲ್ಯಪ್ರಾಯಗಳಾಗಿ ಕಂಡುಬರುತ್ತವೆ' ಎಂದಿದ್ದಾರೆ (ಇದೂ ಎಲ್ಲಿ ಮುದ್ರಿತವಾಗಿದೆಯೋ ಗೊತ್ತಿಲ್ಲ). ಒಟ್ಟಿನಲ್ಲಿ ಆಂಧ್ರದ ಆರಾಧ್ಯಬ್ರಾಹ್ಮಣರಲ್ಲಿ ಕೆಲವರು ನೀಲಕಂಠ ಭಾಷ್ಯವೇ ಪ್ರಮಾಣವೆಂದೂ ಮತ್ತೆ ಕೆಲವರು ಶ್ರೀಕರಭಾಷ್ಯವೇ ಪ್ರಮಾಣವೆಂದೂ ವಾದಿಸುತ್ತಿದ್ದ ಎರಡು ಪಂಗಡಗಳಲ್ಲಿ ಎದ್ದ ವಿವಾದದಲ್ಲಿ ಒಂದು ಪಕ್ಷದವರು ಶ್ರೀಕರಭಾಷ್ಯವನ್ನು ವಿವಿಧ ಪುಸ್ತಕ ಭಂಡಾರಗಳಲ್ಲಿ ಹುಡುಕಿ ಹೊರ ತೆಗೆದ ಶ್ರೀ ಪಂಡಿತ ಸ್ವಾಮಿಗಳಿಗೆ ಕೆಲವು ಪಂಡಿತರ ಸಹಾಯದಿಂದ ಅದನ್ನು ಸೃಷ್ಟಿಸಿದರು ಎಂಬ ವಾದವನ್ನು ಗಟ್ಟಿಗೊಳಿಸಲು ಹೊಂದುವಂತೆ ಕಾಣುತ್ತವೆ. ಅದು ಶ್ರೀ ಸದಾಶಿವಯ್ಯನವರಿಗೆ ಬಹಳ ದೊಡ್ಡ ಆಧಾರವಾಗಿ ಪರಿಣಮಿಸಿತು. ಶ್ರೀ ಸೀತಯ್ಯ ಶಾಸ್ತ್ರಿಗಳು ಹೇಳಿದಂತೆ ದೊರೆತ ಪ್ರಾಚೀನ ಕೃತಿಯ ಸ್ಥಿತಿಯು ಹೀಗೆ ಇತ್ತು: ಅದರಲ್ಲಿ ಎಷ್ಟೋ ಭಾಗಗಳು ವಿಲುಪ್ತವಾಗಿದ್ದವು; ಕೆಲವು ಪಂಡಿತರು ಸೇರಿ ಅದರ ಸಂಸ್ಕರಣವನ್ನು ಮಾಡಬೇಕಾಗಿ ಬಂದಿತ್ತು. ಆ ಸಂಸ್ಕರಣಗಳು ಮೂಲ ಆಶಯಕ್ಕೆ ವಿರುದ್ಧವಲ್ಲದ ಭಾವವನ್ನು ಪ್ರತಿಫಲಿಸದೆ ಇರಲು ಸಾಧ್ಯವಿಲ್ಲ. ಈ ಕಾರಣಗಳಿಂದ ಶ್ರೀಕರಭಾಷ್ಯವು ಪ್ರಾಚೀನ ಶ್ರೀಪತಿ ಪಂಡಿತರ ಕೃತಿಯಲ್ಲದೆ ಇಲ್ಲ ಎಂಬ ಹೇಳಿಕೆಗೆ ಬಲ ಬರುತ್ತದೆ. ಇಲ್ಲಿ ಶ್ರೀ ಸ್ವಾಮಿಗಳು ಗಟ್ಟಿಸಿಕೊಂಡು ಮಾಡಿ ಶ್ರೀಕರಭಾಷ್ಯದಲ್ಲಿನ ನೂರಾರು ಸೂತ್ರಗಳಿಗೆ (ಸರಿಯಾಗಿ 148ಕ್ಕೆ) ಶ್ರೀಭಾಷ್ಯದ ಭಾಗಗಳನ್ನು ಅಕ್ಷರಶಃ ಪೂರ್ಣವಾಗಿ ಅಥವಾ ಭಾಗಶಃ ತೆಗೆದುಕೊಂಡಿದ್ದಾರೆ ಎಂದು ತೋರಿಸಿರುವ ವಿಷಯಕ್ಕೆ ಹಿನ್ನೆಲೆಯನ್ನು ಶ್ರೀ ಸೀತಯ್ಯ ಶಾಸ್ತ್ರಿಗಳ ಮಾತಿನಲ್ಲಿ ಕಾಣಬಹುದು. ಶ್ರೀ ಸ್ವಾಮಿಗಳೇ ಗುರುತಿಸಿರುವಂತೆ ಎರಡನೇ ಅಧ್ಯಾಯದ ಎರಡನೆಯ ಪಾದದಿಂದ ಮಾತ್ರ ಸೇರ್ಪಡೆಯಾಗಿರುವುದು. ಅದರಲ್ಲಿ ಬರುವ ವಿಷಯಗಳು ಬೌದ್ಧ, ಜೈನ, ಸಾಂಖ್ಯ, ವೈಶೇಷಿಕ, ನ್ಯಾಯ ಮೊದಲಾದ ದರ್ಶನಗಳ ಸಿದ್ಧಾಂತಗಳ ಖಂಡನೆಗೆ ಸಂಬಂಧಪಟ್ಟವುಗಳು. ಶ್ರೀ ಸೀತಯ್ಯ ಶಾಸ್ತ್ರಿಗಳು ಹೇಳಿದಂತೆ ವಿಲುಪ್ತ ಭಾಗಗಳನ್ನು ಪೂರೈಸಲು ಸ್ವತಃ ಅಸಮರ್ಥರಾಗಿದ್ದ 'ಮಿತಪಾಂಡಿತ್ಯವಂತ'ರು ಬೇರೆ ಭಾಷ್ಯದಿಂದ ಆ ಭಾಗಗಳನ್ನು ಸೇರಿಸಿದ್ದಾರೆ. ಆದ್ದರಿಂದ ಶ್ರೀಕರಭಾಷ್ಯವು ಪ್ರಾಚೀನ (ಅಂದರೆ ಬಸವಪೂರ್ವದ) ಶ್ರೀಪತಿ ಪಂಡಿತರು ಬರೆದಿದ್ದಲ್ಲ ಎಂದು ಸಾರಾಸಗಟಾಗಿ ನಿರಾಕರಿಸುವುದು ಸರಿಯಲ್ಲ. ಅವರ ಪ್ರಾಚೀನ ಕೃತಿಯು ಕಾಲದ ಉಪಟಳಕ್ಕೆ ಒಳಗಾಗಿ ತುಟಿತವಾಗಿತ್ತು, ಕೆಲವು ಭಾಗಗಳೇ ಲುಪ್ತವಾಗಿದ್ದವು, ಅವುಗಳನ್ನು ಇತ್ತೀಚಿನ ಪಂಡಿತರು ಬೇರೆ ಭಾಷ್ಯದಿಂದ ಆಯ್ದು ಪೂರೈಸುವುದಲ್ಲದೆ ಕೆಲವು ಸಂಸ್ಕರಣಗಳನ್ನೂ ಎಲ್ಲಾ ಪ್ರಕ್ರಿಯೆಯಲ್ಲಿ ಪೂರ್ವಾಪರ ವಿರೋಧಗಳೂ ಆಗಿವೆಯೆಂಬುದನ್ನು ಒಪ್ಪಬೇಕು. ಇಷ್ಟೆಲ್ಲದರ ಮಧ್ಯದಲ್ಲಿ ರಾಮಾನುಜರ ಮತವನ್ನು 'ಅವೈದಿಕ ಮತ'ವೆಂದು ಕರೆಯುವಷ್ಟು ದೀರ್ಘಕ್ಕೆ ಹೋಗಿರುವುದನ್ನು 'ಸ್ವಮತವೇ ವೈದಿಕ'ವೆಂದು ತೋರಿಸುವ ಉತ್ಸಾಹದಲ್ಲಿ ಆಗಿರುವ ಅತಿರೇಕವೆಂದು ಭಾವಿಸಬೇಕು.

ಪ್ರಸ್ತುತ ಅನೇಕ ಹಸ್ತಪ್ರತಿಗಳ ಆಧಾರದ ಮೇಲೆ 1936ರಲ್ಲಿ ಶ್ರೀ ಹಯವದನರಾಯರಿಂದ, 1977ರಲ್ಲಿ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರಿಂದ ಸಂಪಾದಿಸಲ್ಪಟ್ಟು ಪ್ರಕಟವಾದ ಶ್ರೀಕರ ಭಾಷ್ಯದಲ್ಲಿ ಅನೇಕ ಸೇರ್ಪಡೆಗಳೂ ಸಂಸ್ಕರಣಗಳೂ ಆಗಿದ್ದರೂ ಅದರ ಮೂಲಕರ್ತೃ ಶ್ರೀಪತಿ ಪಂಡಿತರೇ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ಅದರ ಮೂಲಕರ್ತೃ ಶ್ರೀಪತಿ ಪಂಡಿತರು ಎಂಬುದಕ್ಕೆ ಕೆಳಗೆ ಕೊಟ್ಟ ಆಧಾರಗಳನ್ನೂ ಪರಿಗಣಿಸಬಹುದು:

ಪಾಲ್ಕುರಿಕೆ ಸೋಮನಾಥರು ಶ್ರೀಪತಿಪಂಡಿತಾರಾಧ್ಯರನ್ನು (ಆಂಧ್ರದ) ಪಂಡಿತತ್ರಯರಲ್ಲಿ ಮೊದಲಿನವರೆಂದು ವರ್ಣಿಸುತ್ತಾ ಅವರು ಬ್ರಹ್ಮವಾದಿಗಳ ಮತವನ್ನು ಖಂಡಿಸಿ, ಹರಭಕ್ತಿಯನ್ನು ನೆಲೆಗೊಳಿಸಿದರೆಂದು ಸ್ತುತಿಸಿದ್ದಾರೆ: 'ಕಡು ನರ್ಥಿನುತ್ತಕರ್ಕಶನಾ ಬ್ರಹ್ಮವಾದಿ ಬ್ರಹ್ಮಮುನು ಬ್ರಹ್ಮವಾದಿಂಬು ದುಂಚಿ ಹರಭಕ್ತಿಯುಕ್ತತಕ್ಕ ಸುಪಾತ ನಾಗಿನ ದೊಡ್ಡ ಶ್ರೀಪತಿ ಪಂಡಿತಯ' (ಪಂಡಿತಾರಾಧ್ಯ ಚರಿತ್ರ, ಪು. 7). ಇಲ್ಲಿ ಅದ್ವೈತ ಬ್ರಹ್ಮವಾದಿಗಳ ಮತವನ್ನು ಖಂಡಿಸಿ (ವಾದ) ಬ್ರಹ್ಮನ ವಿಶಯವನ್ನು ಖಂಡಿಸಿ (ದ್ರುಂಚಿ) ಶಿವಭಕ್ತಿ ಮೂಲಕವಾದ ಶಿವಾದ್ವೈತ ಮತವನ್ನು ಸ್ಥಾಪಿಸಿದ ಕೀರ್ತಿ ಶ್ರೀಪತಿ ಪಂಡಿತರಿಗೆ ಸಲ್ಲುತ್ತದೆ ಎಂದು ಸೋಮನಾಥರು ಸೂಚಿಸಿದ್ದಾರೆ. ಶ್ರೀಕರ ಭಾಷ್ಯದಲ್ಲಿ ಬಂದಿರುವ ವಿಷಯ ಕೂಡ ಅದ್ವೈತ ಖಂಡನೆ ಮತ್ತು ಶಿವಾದ್ವೈತ (ವಿಶೇಷಾದ್ವೈತ) ಮಂಡನೆ.

(ಮುಂದುವರಿಯುವುದು)

(ಲೇಖಕರು ಶಿಕಾಗೋ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAWANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in whole or in part, without prior written permission is prohibited.
ಸಮಗ್ರ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue: 320

ಸಮಾಚಾರ ಸಣ್ಣದಲ್ಲ

ಪಾಕ್ ಸಂವಿಧಾನ: ವಿಶ್ವಸಂಸ್ಥೆ ಕಳವಳ

ಇಸ್ಲಾಮಾಬಾದ್: ಪಾಕಿಸ್ತಾನ ಸರಕಾರವು ಸೇನಾಧಿಕಾರಿ ಅಸೀಮ್ ಮುನೀರ್ 'ಅಸೀಮ' ಪ್ರಮಾಣದಷ್ಟು ಅಧಿಕಾರ ನೀಡುವ ಸಲುವಾಗಿ ಸಂವಿಧಾನಕ್ಕೆ 27ನೇ ತಿದ್ದುಪಡಿ ತಂದಿರುವುದನ್ನು ವಿಶ್ವಸಂಸ್ಥೆಯ ಮಾನವ ಹಕ್ಕು ಆಯೋಗದ ಉನ್ನತ ಮಟ್ಟದ ಅಧಿಕಾರಿ ವೋಕರ್ ಟರ್ಕ್ಸ್ ಎಂಬವರು ತೀವ್ರವಾಗಿ ಖಂಡಿಸಿದ್ದಾರೆ. ಪಾಕ್‌ನ ಈ ಕ್ರಮದಿಂದ ದೇಶದಲ್ಲಿ ಮಾವನ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ಆತಂಕ ಉಂಟಾಗಿದೆ ಎಂದು ಶುಕ್ರವಾರ ಟೀಕಿಸಿದ್ದಾರೆ. ಇಂಥದೊಂದು ಮಹತ್ವದ ಕ್ರಮವನ್ನು ಕೈಗೊಳ್ಳುವ ಮುನ್ನ ಪಾಕ್ ಸರಕಾರ ವಿಶ್ವಸಂಸ್ಥೆ ಮತ್ತು ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಸಮಿತಿಯ ಗಮನಕ್ಕೆ ತರಬೇಕಿತ್ತು ಎಂದು ಟೀಕಾಪ್ರಹಾರ ನಡೆಸಿದ್ದಾರೆ. ಇದಕ್ಕೆ ಭಾನುವಾರ ಪ್ರತಿಕ್ರಿಯಿಸಿರುವ ಪಾಕ್ ಸರಕಾರದ ವಿದೇಶಾಂಗ ಸಚಿವಾಲಯ, ವಿಶ್ವಸಂಸ್ಥೆಯ ಅಧಿಕಾರಿಗೆ ತಪ್ಪು ಮಾಹಿತಿ ಸಿಕ್ಕಿರುವಂತಿದೆ. ಅವರ ಪ್ರತಿಕ್ರಿಯೆ ರಾಜಕೀಯದಿಂದ, ಪಕ್ಷಪಾತದಿಂದ ಕೂಡಿದೆ. ಪಾಕ್ ಸದಾ ಕಾಲವೂ ಮಾನವ ಹಕ್ಕುಗಳನ್ನು ರಕ್ಷಿಸುತ್ತದೆ' ಎಂದು ಅಧಿಕೃತ ಪ್ರಕಟಣೆ ಹೊರಡಿಸಿದೆ.

12 ರಾಜ್ಯ, ಕೇಂ.ಪ್ರದೇಶ ಎಸ್ಐಆರ್ ವಾರ ವಿಸ್ತರಣೆ

ದೆಹಲಿ: ರಾಜ್ಯ ಸರಕಾರಗಳ ವಿರೋಧ, ಪ್ರತಿಭಟನೆ ಮಧ್ಯೆಯೇ ಪ್ರಸ್ತುತ 2ನೇ ಹಂತದಲ್ಲಿ 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆಯ ಅವಧಿಯನ್ನು ಭಾರತದ ಚುನಾವಣಾ ಆಯೋಗ ಮತ್ತೂ ಒಂದು ವಾರ ವಿಸ್ತರಿಸಿ ಭಾನುವಾರ ಆದೇಶ ಹೊರಡಿಸಿದೆ. ಜ.1 ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಗೆ ಅರ್ಹತಾ ದಿನಾಂಕ ಎಂದು ಆದೇಶದಲ್ಲಿ ಹೇಳಲಾಗಿದೆ. ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದ ಎಸ್‌ಐಆರ್ ಪ್ರಕ್ರಿಯೆಯ ಪರಿಷ್ಕೃತ ವೇಳಾಪಟ್ಟಿ ಪ್ರಕಾರ, ಮತದಾರರ ದಾಖಲೆಗಳ ಪರಿಶೀಲನೆ ಅವಧಿ ಡಿ.12ರವರೆಗೂ ವಿಸ್ತರಣೆಗೊಂಡಿದೆ. ಆದರೆ ಮತಗಟ್ಟೆಗಳ ಮರು-ಜೋಡಣೆ ಪ್ರಕ್ರಿಯೆಯನ್ನು ಡಿ.11ರೊಳಗೆ ಪೂರ್ಣಗೊಳಿಸಬೇಕಿದೆ. ಮತದಾರರ ಪರಿಷ್ಕೃತ ಕರಡು ಪಟ್ಟಿ ತಯಾರಿಕೆ ಡಿ.12ರಿಂದ 15ರವರೆಗೂ ನಡೆದು ಕೊನೆಗೊಳ್ಳಬೇಕಿದೆ. ಡಿ.16ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ. ಈ ಮೊದಲು ಡಿ.9ರಂದು ಕರಡು ಮತದಾರರ ಪಟ್ಟಿ ಪ್ರಕಟಣೆಗೆ ದಿನ ನಿಗದಿಯಾಗಿತ್ತು. ಹಕ್ಕು-ಆಕ್ಷೇಪಣೆ ಸಲ್ಲಿಕೆ ಅವಧಿ ಡಿ.16ರಿಂದ ಜ.15 ರವರೆಗೂ ಇರುತ್ತದೆ. ಪರಿಷ್ಕೃತಗೊಂಡ ಅಂತಿಮ ಮತದಾರರ ಪಟ್ಟಿ ಫೆ.14ರಂದು ಪ್ರಕಟವಾಗಲಿದೆ.

ಗಗನಸಖಿಗೆ ಲೈಂಗಿಕ ಕಿರುಕುಳ ಟೆಕ್ಕಿ ಬಂಧನ

ಹೈದರಾಬಾದ್: ದುಬೈನಿಂದ ಹೈದರಾಬಾದ್‌ಗೆ ಆಗಮಿಸಿದ ವಿಮಾನದಲ್ಲಿ ಗಗನಸಖಿ ಜತೆ ಅನುಚಿತವಾಗಿ ವರ್ತಿಸಿದ ಆರೋಪದಡಿ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿಯನ್ನು ಬಂಧಿಸಲಾಗಿದೆ ಎಂದು ಹೈದರಾಬಾದ್ ವಿಮಾನ ನಿಲ್ದಾಣ ಪೊಲೀಸರು ಭಾನುವಾರ ತಿಳಿಸಿದ್ದಾರೆ. ಕ್ಯಾಬಿನ್ ಸಿಬ್ಬಂದಿ ಹೈದರಾಬಾದ್ ಏರ್ ಟರ್ಮಿನಲ್ ಕಂಟ್ರೋಲರ್‌ಗೆ ಘಟನೆ ಬಗ್ಗೆ ಮಾಹಿತಿ ನೀಡಿದ್ದರು. ಕೇರಳ ಮೂಲದ ಪ್ರಯಾಣಿಕ ಶುಕ್ರವಾರ ಪ್ರಯಾಣದ ವೇಳೆ ಗಗನಸಖಿಯ ಮೈಮುಟ್ಟಿದ್ದಾನೆ ಎಂದು ದೂರು ಬಂದಿದೆ. ಆರೋಪಿ 30 ವರ್ಷದ ಟೆಕ್ಕಿ ಮದ್ಯದ ಅಮಲಿನಲ್ಲಿರುವಂತೆ ಕಾಣುತ್ತಿದ್ದ. ವಿಮಾನ ಇಳಿದ ಬಳಿಕ ಕೂಡಲೇ ಆತನನ್ನು ಬಂಧಿಸಿ, ಲೈಂಗಿಕ ಕಿರುಕುಳ ನೀಡಿದ ಪ್ರಕರಣ ದಾಖಲಿಸಲಾಗಿದೆ ಎಂದು ವಿಮಾನ ನಿಲ್ದಾಣ ಪೊಲೀಸರು ತಿಳಿಸಿದ್ದಾರೆ. ಬಳಿಕ ಆರೋಪಿಯನ್ನು ಸ್ಥಳೀಯ ಪೊಲೀಸರಿಗೆ ಹಸ್ತಾಂತರಿಸಿದ್ದು, ಬಿಎನ್‌ಎಸ್ ಸೆಕ್ಷನ್ 74(ಮಹಿಳೆ ಮೇಲೆ ಹಲ್ಲೆ), ಸೆಕ್ಷನ್ 75(ಲೈಂಗಿಕ ಕಿರುಕುಳ) ಮತ್ತಿತರ ನಿಬಂಧನೆಗಳಡಿ ಎಫ್‌ಐಆರ್ ದಾಖಲಿಸಿ ಸ್ಥಳೀಯ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗಿದೆ. ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹೈದರಾಬಾದ್ ಪೊಲೀಸರು ತಿಳಿಸಿದ್ದಾರೆ.

ಸಕ್ರಿಯ 'ಸಿಮ್'ಗಳಿಗಷ್ಟೇ ವಾಟ್ಸಾಪ್, ಟೆಲಿಗ್ರಾಮ್

ದೆಹಲಿ: ಸಾಮಾಜಿಕ ಜಾಲತಾಣಗಳಿಗೆ ಸಂಬಂಧಿಸಿ ಬಳಕೆದಾರರ ಉತ್ತರದಾಯಿತ್ವ ಖಚಿತಪಡಿಸಲು ಕೇಂದ್ರದ ಎನ್‌ಡಿಎ ಸರಕಾರ ಮಹತ್ವದ ಕ್ರಮ ಕೈಗೊಂಡಿದೆ. ವಾಟ್ಸಾಪ್, ಟೆಲಿಗ್ರಾಂ, ಸಿಗ್ನಲ್ ಮೊದಲಾದ ಮೆಸೇಜಿಂಗ್ ಅಪ್ಲಿಕೇಶನ್ ಆಧಾರಿತ ಸಂವಹನ ಸೇವೆಗಳನ್ನು ಸಿಮ್ ಸಕ್ರಿಯವಾಗಿದ್ದರಷ್ಟೇ ಒದಗಿಸಬೇಕು. ಈ ಸೇವೆಗಳನ್ನು ಭಾರತದಲ್ಲಿ ಒದಗಿಸುವ ಸೇವಾಸಂಸ್ಥೆಗಳೇ ಇದನ್ನು ಖಚಿತಪಡಿಸಿಕೊಂಡು ಸೇವೆ ಒದಗಿಸಬೇಕು ಎಂದು ಕೇಂದ್ರ ಸರಕಾರ ಸ್ಪಷ್ಟ ನಿರ್ದೇಶನ ಹೊರಡಿಸಿದೆ. ಅಪ್ಲಿಕೇಶನ್ ಆಧರಿಸಿ ಸಂವಹನ ಸೇವೆಗಳನ್ನು ಒದಗಿಸುವ ಎಲ್ಲಾ ಕಂಪನಿಗಳು ಈ ವಿಚಾರದಲ್ಲಿ ಕ್ರಮ ಕೈಗೊಂಡ ಬಗ್ಗೆ ದೂರಸಂಪರ್ಕ ಇಲಾಖೆಗೆ 120 ದಿನಗಳೊಳಗೆ ವರದಿ ಸಲ್ಲಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನಿಯಮ ಪಾಲಿಸದೇ ಇದ್ದರೆ ದೂರಸಂಪರ್ಕ ಕಾಯಿದೆ- 2023ರ ಟೆಲಿಕಾಂ ಸೈಬರ್ ಭದ್ರತಾ ನಿಯಮಗಳು ಮತ್ತು ಇತರೆ ಕಾನೂನುಗಳಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.

ಪ.ಬಂ. ರಾಜಭವನ ಇನ್ನು 'ಲೋಕ ಭವನ'

ಕೋಲ್ಕತ್ತ: ಕೇಂದ್ರ ಸರಕಾರದ ನಿರ್ದೇಶನವನ್ನು ಮೊದಲಿಗರಾಗಿ ಜಾರಿಗೆ ತರುವ ಮೂಲಕ ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ಕೋಲ್ಕತ್ತ ನಗರದಲ್ಲಿರುವ ರಾಜಭವನಕ್ಕೆ 'ಲೋಕ ಭವನ' ಎಂದು ಮರುನಾಮಕರಣ ಮಾಡಿದ್ದಾರೆ. 2025ರ ನ.25ರಂದು ಕೇಂದ್ರದ ಗೃಹ ಸಚಿವಾಲಯ ಹೊರಡಿಸಿದ ಪತ್ರದ ಅನುಸಾರ, ಕೋಲ್ಕತ್ತ 'ರಾಜಭವನ', ಧ್ವಜಸ್ತಂಭ ಭವನ ಮತ್ತು ಡಾರ್ಜಿಲಿಂಗ್‌ನಲ್ಲಿರುವ 'ರಾಜಭವನ'ದ ಹೆಸರುಗಳನ್ನು 'ಲೋಕ ಭವನ' ಎಂದು ಮರುನಾಮಕರಣ ಮಾಡಲಾಗಿದೆ.

ಜನ್ಮದಿನ ಸಂಭ್ರಮದಲ್ಲಿದ್ದವರಲ್ಲಿ 12 ಜನಕ್ಕೆ ಗಾಯ | ಆಸ್ಪತ್ರೆಗೆ ದಾಖಲಾದವರಲ್ಲಿ ಕೆಲವರ ಸ್ಥಿತಿ ಗಂಭೀರ

ಅಮೆರಿಕದಲ್ಲಿ ಮತ್ತೆ ಗುಂಡಿನ ದಾಳಿ, 4 ಸಾವು

ಕ್ಯಾಲಿಫೋರ್ನಿಯ: ಅಮೆರಿಕ ದೇಶದಲ್ಲಿ ಇತ್ತೀಚೆಗೆ ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು, ಪೊಲೀಸ್ ಇಲಾಖೆ ಮೇಲೆ ಗುಂಡಿನ ದಾಳಿ ನಡೆಯುವುದು ಹೆಚ್ಚುತ್ತಲೇ ಇದೆ. ಈಗ ಹೊಸದಾಗಿ ಕ್ಯಾಲಿಫೋರ್ನಿಯಾದ ಸ್ಟಾಕ್ಟನ್ ಪ್ರದೇಶದಲ್ಲಿನ ರೆಸ್ಟೋರೆಂಟ್ ಮೇಲೆ ಶನಿವಾರ ಸಂಜೆ 6 ವೇಳೆ ಗುಂಡಿನ ದಾಳಿ ನಡೆದಿದೆ. ಪರಿಣಾಮ ನಾಲ್ವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಸಾವಿಗೀಡಾದವರಲ್ಲಿ 9 ಮತ್ತು 12 ವರ್ಷ ವಯಸ್ಸಿನ ಮಕ್ಕಳೂ ಇದ್ದಾರೆ ಎಂದು ತಿಳಿದುಬಂದಿದೆ.

ಉಳಿದಂತೆ ಗುಂಡೇಟಿನಿಂದ 12 ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. 10 ಜನರು ಗಂಭೀರವಾಗಿ ಗಾಯಗೊಂಡಿದ್ದು, ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ ಎಂದು ಸ್ಯಾನ್ ಜೋಕ್ವಿನ್ ಕೌಂಟಿ ಷರಿಫ್ ಕಚೇರಿ ತಿಳಿಸಿದೆ.

ಗುಂಡಿನ ದಾಳಿಗೆ ಕಾರಣ ಏನೆಂದು ತಿಳಿದುಬಂದಿಲ್ಲ. ಕಾರಣ ಕಂಡುಕೊಳ್ಳಲು ತನಿಖೆ ತೀವ್ರಗೊಳಿಸಲಾಗಿದೆ. ಕ್ಯಾಲಿಫೋರ್ನಿಯಾದ ಸ್ಟಾಕ್ಟನ್‌ನಲ್ಲಿನ ಥಾರ್ನ್ಟನ್ ರಸ್ತೆ ಸಮೀಪದ ಲುಸಿಲ್ಲೆ ಅವೆನ್ಯೂದಲ್ಲಿನ 1900 ಬ್ಲಾಕ್‌ನಲ್ಲಿ ಘಟನೆ ನಡೆದಿದೆ. ನಂತರ, ಸಾಮಾಜಿಕ ಮಾಧ್ಯಮಗಳಲ್ಲಿ ಗುಂಡಿನ ದಾಳಿ ಸಂದರ್ಭದ ವೀಡಿಯೋಗಳನ್ನು ಹಂಚಿಕೊಳ್ಳಲಾಗಿದೆ.

ದಾಳಿಕೋರ: ಗುಂಡಿನ ದಾಳಿ ಸುದ್ದಿ ಕೇಳುತ್ತಲೇ ಹೆಚ್ಚಿನ ಸಂಖ್ಯೆಯ ಪೊಲೀಸರು ಪ್ರದೇಶವನ್ನು ಸುತ್ತುವರಿದಿದ್ದು, ಬಂದೂಕುಧಾರಿಗಳಿಗಾಗಿ ಶೋಧ ಪ್ರಾರಂಭಿಸಿದರು. ಆದರೆ, ದಾಳಿಕೋರರು ಎಷ್ಟು ಮಂದಿ? ಅವರು ಯಾರು? ಎಲ್ಲಿಂದ ಬಂದರು? ಅವರೇಕೆ ಗುಂಡಿನ ದಾಳಿ ನಡೆಸಿದರು ಎಂಬ ಕುರಿತು ಯಾವುದೇ ಮಾಹಿತಿ ಬಿಡುಗಡೆಯಾಗಿಲ್ಲ.

ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಸ್ಟಾಕ್ಟನ್ ಪ್ರದೇಶದಲ್ಲಿನ ರೆಸ್ಟೋರೆಂಟ್ ಮೇಲೆ ಶನಿವಾರ ಸಂಜೆ 6 ವೇಳೆ ಗುಂಡಿನ ದಾಳಿ ನಡೆದ ಸ್ಥಳ.

ಬರ್ತ್ ಡೇ ಪಾರ್ಟಿಗೆ ಬಂದು ಹತರಾದರು

ಕ್ಯಾಲಿಫೋರ್ನಿಯಾದ ಸ್ಟಾಕ್ಟನ್ ಪ್ರದೇಶದಲ್ಲಿನ ರೆಸ್ಟೋರೆಂಟ್‌ನಲ್ಲಿ ಶನಿವಾರ ಸಂಜೆ 6ರ ವೇಳೆ ಕುಟುಂಬವೊಂದು ತಮ್ಮ ಪುತ್ರನ ಜನ್ಮದಿನ ಆಚರಣೆ ಹಮ್ಮಿಕೊಂಡಿತ್ತು. ಸಂಜೆಯ ಸೂರ್ಯಾಸ್ತ, ಮಿನುಗುಟ್ಟುವ ದೀಪಗಳು, ಸುರಿಯುತ್ತಿರುವ ಮಂಜು.. ಎಲ್ಲರೂ ಜನ್ಮದಿನ ಸಂಭ್ರಮದಲ್ಲಿದ್ದಾಗಲೇ ಬಂದೂಕುಧಾರಿಗಳು ಏಕಾಏಕಿ ಗುಂಡಿನ ಮಳೆಗರೆದರು. ಬಂಧು-ಮಿತ್ರರ ಮೇಲೆ ಗುರಿಯಿಟ್ಟು ಗುಂಡಿನ ದಾಳಿ ನಡೆಸಿದರು. ಈ ಗುಂಡಿನ ದಾಳಿ ಹಿಂದೆ ಯಾರ ಕೈವಾಡವಿದೆ ಎಂಬುದು ಇನ್ನಷ್ಟೇ ತಿಳಿದುಬರಬೇಕಿದೆ. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದ ಬಾಲಕನ ತಂದೆಗೂ, ಗುಂಡಿನ ದಾಳಿ ನಡೆಸಿದ ಆರೋಪಿಗಳಿಗೂ ಏನಾದರೂ ಹಳೆ ದ್ವೇಷವಿದೆಯೇ? ಎಂಬ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅಮೆರಿಕ ಮತ್ತು ಗುಂಡಿನ ದಾಳಿಗಳು

2025ನೇ ವರ್ಷದಲ್ಲಿ ಈವರೆಗೆ (11 ತಿಂಗಳಲ್ಲಿ) ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 300ಕ್ಕೂ ಹೆಚ್ಚು ಸಾಮೂಹಿಕ ಗುಂಡಿನ ದಾಳಿಗಳು ವರದಿಯಾಗಿವೆ ಎಂಬುದು ಗಮನಿಸಬೇಕಾದ ಸಂಗತಿ. ಬಹುತೇಕ ವಾರಕ್ಕೊಮ್ಮೆ, ಒಂದಲ್ಲ ಒಂದು ರಾಜ್ಯದಲ್ಲಿ ಗುಂಡಿನ ದಾಳಿ ಘಟನೆ ಸಂಭವಿಸುತ್ತದೆ. ಈ ನವೆಂಬರ್ ತಿಂಗಳೊಂದರಲ್ಲೇ ಅಮೆರಿಕದ ವಿವಿಧೆಡೆ ಒಟ್ಟು ಆರು ಕಡೆ ಗುಂಡಿನ ದಾಳಿಗಳು ನಡೆದಿವೆ. ಒಟ್ಟು 6 ಮಂದಿ ಹತರಾಗಿದ್ದು, 30 ಮಂದಿ ಗಾಯಗೊಂಡಿದ್ದಾರೆ.

ನ.26: ಶ್ವೇತಭವನದ ಮುಂದೆಯೇ ಗುಂಡಿನ ದಾಳಿ. ರಾಷ್ಟ್ರೀಯ ಭದ್ರತಾ ಪಡೆಯ (ನ್ಯಾಷನಲ್ ಗಾರ್ಡ್ಸ್) ಗುರಿಯಾಗಿಸಿ ನಡೆದ ಗುಂಡಿನ ದಾಳಿಯಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ ಸಿಬ್ಬಂದಿ ಗಾಯಗೊಂಡರು. ಬಳಿಕ ಮಹಿಳಾ ಸಿಬ್ಬಂದಿ ಚಿಕಿತ್ಸೆ ಫಲಕಾರಿಯಾಗದೇ ಅಸುನೀಗಿದರು. ನಂತರ ಅಫ್ಘಾನಿಸ್ತಾನ ಮೂಲದ ಬಂದೂಕುಧಾರಿಯನ್ನು ಪೊಲೀಸರು ಬಂಧಿಸಿದ್ದಾರೆ. ಅಮೆರಿಕದ ಸರಕಾರ, ಸದ್ಯ ಅಮೆರಿಕದಲ್ಲಿರುವ ಅಫ್ಘನ್ ಮೂಲದ ಎಲ್ಲಾ ವಲಸಿಗರ ವೀಸಾ, ಪಾಸ್‌ಪೋರ್ಟ್ ಮತ್ತಿತರ ದಾಖಲೆಗಳ ಪರಿಶೀಲನೆಗೆ ಆದೇಶಿಸಿದೆ.

ನ.17: ನ್ಯೂ ಮೆಕ್ಸಿಕೋದ ಲಾಸ್ ಕ್ರೂಸ್ ನಗರದಲ್ಲಿ ಮನೆಯಲ್ಲಿ ಪಾರ್ಟಿ ನಡೆಸುತ್ತಿದ್ದಾಗ ಗುಂಡಿನ ದಾಳಿ ನಡೆದಿದ್ದು, ಒಬ್ಬರು ಸಾವನ್ನಪ್ಪಿದರು. ಇತರ ಮೂವರು ಗಾಯಗೊಂಡು ಆಸ್ಪತ್ರೆ ಸೇರಿದರು.

ನ.16: ಫ್ಲೋರಿಡಾ ರಾಜ್ಯದ ಜಾಕ್ಸನ್‌ವಿಲ್ಲೆ ನಗರದಲ್ಲಿ ನಡೆಯುತ್ತಿದ್ದ ಪಾರ್ಟಿಯೊಂದರಲ್ಲಿ ಗುಂಡಿನ ದಾಳಿ ನಡೆದಿದ್ದು, ನಾಲ್ವರು ಗಾಯಗೊಂಡರು.

ನ.9: ಕ್ಯಾಲಿಫೋರ್ನಿಯಾ ರಾಜ್ಯದ ಸ್ಯಾನ್ ಫ್ರಾನ್ಸಿಸ್ಕೊ ನಗರದ ಬೀಚ್ ಬಳಿ ನಡೆದ ಜಗಳದಿಂದಾಗಿ ಗುಂಡಿನ ದಾಳಿ ನಡೆದಿದೆ. ಈ ಗುಂಡಿನ ದಾಳಿಯಲ್ಲಿ ಐವರು ಗಾಯಗೊಂಡರು.

ನ.7: ಡೆಲವೇರ್‌ನ ವಿಲ್ಮಿಂಗ್ಟನ್‌ನಲ್ಲಿ ಗುಂಡಿನ ದಾಳಿಯಾಗಿದ್ದು, 5 ಜನರು ಗಾಯಗೊಂಡರು.

ಸಾಮೂಹಿಕ ವಿವಾಹದಲ್ಲೇ ಮ.ಪ್ರ ಸಿಎಂ ಪುತ್ರ ವಿವಾಹ

ಭೋಪಾಲ್: ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರ ಕಿರಿಯ ಪುತ್ರ ಅಭಿಮನ್ಯು ಯಾದವ್ ಸಾಮೂಹಿಕ ವಿವಾಹ ಸಮಾರಂಭದಲ್ಲೇ ಭಾನುವಾರ ಮದುವೆಯಾಗಿದ್ದಾರೆ.

ಅಭಿಮನ್ಯು ಯಾದವ್ ಅವರು ಇತಿಶಾ ಯಾದವ್ ಜತೆ ಸನ್ವಾರಾ ಖೇಡಿಯಲ್ಲಿ 21 ಜೋಡಿಗಳೊಂದಿಗೆ ಹಸೆಮಣೆ ಏರಿ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಕಲ್ಯಾಣವಾದರು. ಸಿಎಂ ಪುತ್ರನ ಸರಳ ಮದುವೆ ರಾಜ್ಯದ ಜನರ ಗಮನ ಸೆಳೆದಿದೆ. 22 ವರರು ಕುದುರೆಗಳ ಮೇಲೆ ಮತ್ತು ವಧುಗಳು ಅಲಂಕೃತ ಬಂಡಿಗಳಲ್ಲಿ ಮೆರವಣಿಗೆಯಲ್ಲಿ ಬಂದರು. ಅವರ ಕುಟುಂಬಗಳ ಸದಸ್ಯರು ಬ್ಯಾಂಡ್ ಜತೆ ನೃತ್ಯ ಮಾಡಿದರು. ಸ್ನೇಹಿತರು, ಕುಟುಂಬಸ್ಥರು, ಹಿತೈಷಿಗಳು, ಆಹ್ವಾನಿತರು ಸೇರಿ ಒಟ್ಟು 25,000 ಜನರು ಸಾಮೂಹಿಕ ವಿವಾಹ ಸಮಾರಂಭದಲ್ಲಿದ್ದರು. ಸಮಾರಂಭ ಮುಗಿದ ನಂತರ, ಅಥರ್ವ ಹೋಟೆಲ್‌ನಲ್ಲಿ ಅದ್ದೂರಿ ಸ್ವಾಗತ ಸಮಾರಂಭ ನಡೆಯಿತು. ಬಿಜೆಪಿ ಆಡಳಿತದ 11 ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, 8 ರಾಜ್ಯಪಾಲರು ಮತ್ತು ಗಣ್ಯರು ಭಾಗವಹಿಸಿದ್ದರು.

ಅಲ್ಬನೀಸ್-ಹೇಡನ್ ಮದುವೆ ರಿಂಗ್ ಬೇರರ್ ಆಗಿದ್ದು 'ಶ್ವಾನ'

ಕ್ಯಾನ್‌ಬೆರಾ: ಆಸ್ಟ್ರೇಲಿಯದ ಕ್ಯಾನ್‌ಬೆರಾದಲ್ಲಿ ಶನಿವಾರ ನಡೆದ ಪ್ರಧಾನಿ ಆಂಥೋನಿ ಅಲ್ಬನೀಸ್-ಹೇಡನ್ ಅವರ ಹಲವು ಕಾರಣಗಳಿಂದಾಗಿ ವಿಶೇಷ ಎನಿಸಿಕೊಂಡಿದೆ. ಮದುವೆಯಲ್ಲಿ ಅಲ್ಬನೀಸ್ ಅವರ ಶ್ವಾನ 'ಟೊಟೊ'ಗೆ ವಿಶೇಷ ಹೊಣೆಗಾರಿಕೆ ವಹಿಸಲಾಗಿತ್ತು.

ಕ್ಯಾನ್‌ಬೆರಾ ನಗರದ 'ದಿ ಲಾಡ್ಜ್' ಸಮಾರಂಭ ಸ್ಥಳದಲ್ಲಿ ಕೇವಲ 60 ಗಣ್ಯರ ಉಪಸ್ಥಿತಿಯಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಪ್ರಧಾನಿ ಅಲ್ಬನೀಸ್ ಅವರ ಪ್ರೀತಿಯ ಶ್ವಾನ ಟೊಟೊಗೆ 'ವಿವಾಹದ ಉಂಗುರ'ವನ್ನು ತಂದುಕೊಡುವ ದೊಡ್ಡ ಜವಾಬ್ದಾರಿ ವಹಿಸಲಾಗಿತ್ತು.

ವಧು ಹೇಡನ್ ಅವರ ಐದು ವರ್ಷದ ಸೋದರ ಸೊಸೆ 'ಎಲ್ಲಾ' 'ಫ್ಲವರ್ ಗರ್ಲ್' (ಹೂವಿನ ಹುಡುಗಿ) ಆಗಿದ್ದಳು. ಮದುವೆಯಲ್ಲಿ ಹೇಡನ್ ಅವರು ಸಿಡ್ನಿ ವಿನ್ಯಾಸಕರ ರೊಮ್ಯಾನ್ಸ್ ಈಸ್ ಬಾರ್ನ್ ಉಡುಪು ಧರಿಸಿದ್ದರೆ, ಪ್ರಧಾನಿ ಅಲ್ಬನೀಸ್, ಎಂಜೆ ಬೇಲ್ ಅವರ ವಿನ್ಯಾಸದ ಸೂಟ್ ಧರಿಸಿದ್ದರು. ಅತಿಥಿ ಗಣ್ಯರಿಗೆ ವಿಲ್ಲಿ ದಿ ಬೋಟ್ಮ್ಯಾನ್ ವಿಶೇಷ ಕ್ಯಾನ್ನಲ್ಲಿ ತಯಾರಿಸಿದ ಬಿಯರ್ ನೀಡಿ ಸತ್ಕಾರ ಮಾಡಲಾಯಿತು.

ಆಸ್ಟ್ರೇಲಿಯದ 124 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪ್ರಧಾನಿ ಹುದ್ದೆಯಲ್ಲಿದ್ದಾಗ ಮದುವೆಯಾದ ಮೊದಲಿಗೆ ಎಂಬ ಖ್ಯಾತಿ ಅಲ್ಬನೀಸ್ ಅವರದ್ದಾಗಿದೆ. ಅಲ್ಬನೀಸ್ 2024ರ ಫೆ.14ರಂದು 'ಪ್ರೇಮಿಗಳ ದಿನ' ಹೇಡನ್ ಅವರಿಗೆ ಪ್ರಪೋಸ್ ಮಾಡಿದ್ದರು. 'ನಾವಿಬ್ಬರು ಒಟ್ಟಿಗೆ ಜೀವನ ಕಳೆಯುವ ನಿರ್ಧಾರ ಮಾಡಿದ್ದೇವೆ. ನಮ್ಮ ಪ್ರೀತಿ ಮತ್ತು ಬದ್ಧತೆಯನ್ನು ಹಂಚಿಕೊಳ್ಳಲು ನಾವು ಸಂಪೂರ್ಣವಾಗಿ ಸಂತೋಷಪಡುತ್ತೇವೆ' ಎಂದು ಅಲ್ಬನೀಸ್, ಕುಟುಂಬವರ್ಗದವರು ಮತ್ತು ಆತ್ಮೀಯ ಸ್ನೇಹಿತರ ಸಮ್ಮುಖ ಪ್ರಕಟಿಸಿದರು.

2022ರಲ್ಲಿ ಅಲ್ಬನೀಸ್ ಚುನಾವಣಾ ಪ್ರಚಾರ ವೇಳೆಯಿಂದಲೂ ಹೇಡನ್ ಜತೆಗಿರುತ್ತಿದ್ದರು.

ದೇಶೀ ಭಾಷೆಗಳ ಬಳಕೆ ಕಡಿಮೆ, ಬಲು ಕಳವಳಕಾರಿ

ನಾಗಪುರ: ಭಾರತೀಯ ಭಾಷೆಗಳು ಮತ್ತು ಮಾತೃಭಾಷೆ ಬಳಕೆ ಕಡಿಮೆಯಾಗುತ್ತಿರುವುದು ಬಹಳ ಕಳವಳಕಾರಿಯಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಆತಂಕ ವ್ಯಕ್ತಪಡಿಸಿದರು. ನಾಗಪುರದಲ್ಲಿ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ

ಮಾತನಾಡಿ, 'ಕೆಲವು ಭಾರತೀಯರಿಗೆ ಭಾರತೀಯ ಭಾಷೆಗಳೇ ತಿಳಿದಿಲ್ಲ. ಪರಿಸ್ಥಿತಿ ಅಂತಹ ಹಂತಕ್ಕೆ ತಲುಪಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಭಾಷಾ ಪರಂಪರೆ ಸವೆತ ಬಗ್ಗೆ ಸಮಾಜ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ' ಎಂದಿದ್ದಾರೆ.

ಸಂವಹನ, ಹಂಚಿಕೆ, ದೈನಂದಿನ ವ್ಯವಹಾರ ಸಂಸ್ಕೃತದಲ್ಲಿದ್ದ ಕಾಲವಿತ್ತು. ಈಗ, ಅಮೆರಿಕನ್ ಪ್ರಾಧ್ಯಾಪಕ ನಮಗೆ ಸಂಸ್ಕೃತ ಕಲಿಸುವಂತಾಗಿದೆ. ನಾವು ಸಂಸ್ಕೃತವನ್ನು ವಿಶ್ವಕ್ಕೆ ಕಲಿಸಬೇಕಿತ್ತು. ಇಂದಿನ ಮಕ್ಕಳಿಗೆ ಮೂಲಭೂತ ಪದಗಳು, ಸರಳ ಪದಗಳೇ ತಿಳಿದಿಲ್ಲ. ಮನೆಗಳಲ್ಲಿ ಮಾತೃಭಾಷೆ-ಇಂಗ್ಲಿಷ್ ಬೆರೆಸಿ ಮಾತನಾಡುತ್ತಾರೆ. 'ಇಂಗ್ಲಿಷ್ ಮಾಧ್ಯಮದ ಶಿಕ್ಷಣ ತಪ್ಪಲ್ಲ. ಆದರೆ, ಮನೆಯಲ್ಲಿ ಭಾರತದ ಭಾಷೆಗಳನ್ನು ಮಾತನಾಡಲು ಹಿಂಜರಿಯುವುದು ಪರಿಸ್ಥಿತಿ ಹದಗೆಡಿಸುತ್ತಿದೆ. ಮನೆಯಲ್ಲಿ ನಮ್ಮ ಭಾಷೆ ಮಾತನಾಡಿದರೆ ಉತ್ತಮ' ಎಂದು ಹೇಳಿದ ಭಾಗವತ್, ಸಂತ ಜ್ಞಾನೇಶ್ವರರು ಸಮಾಜದ ಉತ್ತಮ ತಿಳಿವಳಿಕೆಗಾಗಿ ಭಗವದ್ಗೀತೆಯನ್ನು ಮರಾಠಿಗೆ ತಂದರು ಎಂದು ನೆನಪಿಸಿದರು. ಕಲ್ಪವೃಕ್ಷಕ್ಕೆ ಇಂಗ್ಲಿಷ್‌ನಲ್ಲಿ ಏನೆಂದು ಹೇಳುತ್ತೀರಿ? ಭಾರತೀಯ ಭಾಷೆಗಳನ್ನೇಕೆ ಸಂರಕ್ಷಿಸಬೇಕು ಮತ್ತು ಬಲಪಡಿಸಬೇಕು ಎಂಬುದನ್ನು ಇಂತಹ ಉದಾಹರಣೆಗಳು ಎತ್ತಿ ತೋರಿಸುತ್ತವೆ ಎಂದು ಭಾಗವತ್ ಒತ್ತಿ ಹೇಳಿದರು.

ಒಮ್ಮೆ ವಿಫಲರಾದರೂ ಪ್ರಯತ್ನ ಮುಂದುವರಿಸಬೇಕು | ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಉತ್ತೇಜನ ನುಡಿ

'ಝೆನ್-ಜಿ'ಗಳೇ ವಿಕಸಿತ ಭಾರತದ ದೊಡ್ಡ ಶಕ್ತಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಪ್ರತಿತಿಂಗಳು ಕೊನೆಯ ಭಾನುವಾರ ಪ್ರಸ್ತುತ ಪಡಿಸುವ ರೇಡಿಯೊ ಸಂವಾದ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಈ ಬಾರಿ, ದೇಶದ 'ಝೆನ್-ಜಿ'ಗಳ(ಯುವಜನತೆ) ಕುರಿತು ಮಾತನಾಡಿದ್ದಾರೆ.

ದೇಶದ ಯುವಜನರ ದೃಢಸಂಕಲ್ಪ, ಸಮರ್ಪಣಾ ಭಾವ, ನಾವೀನ್ಯತೆ, ಪಟ್ಟು ಹಿಡಿದು ಸಾಧಿಸುವ ಗುಣಗಳೇ 'ವಿಕಸಿತ ಭಾರತ'ದ ದೊಡ್ಡ ಶಕ್ತಿಯಾಗಿದೆ ಎಂದು 'ಮನ್ ಕಿ ಬಾತ್' ನ 128ನೇ ಸಂಚಿಕೆಯಲ್ಲಿ ಬಣ್ಣಿಸಿದ್ದಾರೆ.

ಹೃದಯದಲ್ಲಿ ದೃಢಸಂಕಲ್ಪವಿದ್ದರೆ, ತಂಡವಾಗಿ ಕೆಲಸ ಮಾಡುವ ಸಾಮೂಹಿಕ ಶಕ್ತಿಯ ಮೇಲೆ ನಂಬಿಕೆ ಇದ್ದರೆ, ಒಮ್ಮೆ ಮುಗ್ಗರಿಸಿದರೂ ನಂತರ ಮತ್ತೆ ಮೇಲೇಳುವ ಧೈರ್ಯವಿದ್ದರೆ, ಕಷ್ಟದ ಸಮಯಗಳಲ್ಲಿಯೂ ಯಶಸ್ಸು ಖಚಿತ ಎಂದು ಉತ್ತೇಜನ ನೀಡುವ ಮಾತುಗಳನ್ನಾಡಿದ್ದಾರೆ.

ಉಪಗ್ರಹಗಳು, ಜಿಪಿಎಸ್ ಅಥವಾ ಸಂಚಾರ ಸೌಲಭ್ಯಗಳಿಲ್ಲದ ಹಿಂದಿನ ಯುಗಗಳನ್ನು ಊಹಿಸಿ, ಆಗಲೂ ನಮ್ಮ ನಾವಿಕರು ದೊಡ್ಡ ಹಡಗುಗಳನ್ನು ಸಾಗರದಲ್ಲಿ ಕೊಂಡೊಯ್ದು ಗಮ್ಯಸ್ಥಾನ ತಲುಪುತ್ತಿದ್ದರು. ಈಗ, ಸಮುದ್ರಗಳನ್ನು ಮೀರಿ, ಪ್ರಪಂಚದ ದೇಶಗಳು ಬಾಹ್ಯಾಕಾಶದ ಅನಂತ ವಿಸ್ತಾರವನ್ನು ಅಳೆಯುತ್ತಿವೆ. ಸವಾಲು ಹಾಗೇ ಉಳಿದಿದೆ. ಜಿಪಿಎಸ್ ಅಥವಾ ಯಾವುದೇ ಸಂವಹನವಿಲ್ಲದ ಕಾಲದಿಂದ ಇಷ್ಟು ದೂರ ಮುಂದುವರಿದುಕೊಂಡು ಹೇಗೆ ಬಂದೆವು? ಈ ಬಗ್ಗೆ ಯುವಜನತೆ ಗಮನ ಹರಿಸಬೇಕು ಎಂದು ಪ್ರಧಾನಿ ಹಿಂದಿನ-ಇಂದಿನ ಕಾಲಗಳನ್ನು ತುಲನೆ ಮಾಡಿ ಹೇಳಿದ್ದಾರೆ.

ಇಸ್ರೊ ಆಯೋಜಿಸಿದ್ದ 'ಡ್ರೋನ್ ಸ್ಪರ್ಧೆ'ಯಲ್ಲಿ ಪ್ರಸ್ತುತವಾಗಿದ್ದು, ಬಳಿಕ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆದ ವಿಡಿಯೊವನ್ನು ನೋಡಿದೆ. ಅದರಲ್ಲಿ 'ಝೆನ್-ಜಿ'ಗಳು ತಮ್ಮ ಕೌಶಲಗಳನ್ನು ಉನ್ನತ ಮಟ್ಟದಲ್ಲಿ ಪ್ರದರ್ಶಿಸಿದ್ದರು. ಯುವಜನರು, ವಿಶೇಷವಾಗಿ ನಮ್ಮ ದೇಶದ ಝೆನ್-ಜಿಗಳು, ಮಂಗಳ ಗ್ರಹದಲ್ಲಿರುವಂತಹ ಹವಾಮಾನದಲ್ಲಿ ಡ್ರೋನ್‌ಗಳನ್ನು ಹೇಗೆ ಹಾರಿಸಬಹುದು ಎಂಬುದನ್ನು ಕಂಡಕೊಳ್ಳಲು ಯತ್ನಿಸಿದ್ದರು. ಅವರು ಕೈಗೊಂಡ ಪ್ರಯೋಗದಲ್ಲಿ ಡ್ರೋನ್‌ಗಳು ಹಾರಾಟ ಆರಂಭಿಸಿದ ಸ್ವಲ್ಪ ಸಮಯದವರೆಗೆ ಗಾಳಿಯಲ್ಲಿ ಸ್ಥಿರವಾಗಿರುತ್ತಿದ್ದವು. ಬಳಿಕ ನೆಲಕ್ಕೆ ಬೀಳುತ್ತಿದ್ದವು. ಏಕೆಂದರೆ ಈ ಡ್ರೋನ್‌ಗಳಿಗೆ ಜಿಪಿಎಸ್ ಬೆಂಬಲ ಇರಲಿಲ್ಲ. ಮಂಗಳ ಗ್ರಹದಲ್ಲಿ ಜಿಪಿಎಸ್ ಸೌಲಭ್ಯ ಸಾಧ್ಯವಿಲ್ಲ. ಆದ್ದರಿಂದ ಡ್ರೋನ್ ಯಾವುದೇ ಬಾಹ್ಯ ಸಂಕೇತ ಅಥವಾ ಮಾರ್ಗದರ್ಶನ ಸ್ವೀಕರಿಸುವುದಿಲ್ಲ. ಡ್ರೋನ್ ಕ್ಯಾಮೆರಾಗಳು ಮತ್ತು ಅಂತರ್ನಿರ್ಮಿತ ಸಾಫ್ಟ್‌ವೇರ್ ಬಳಸಿಕೊಂಡೇ ಹಾರಾಟ ನಡೆಸಬೇಕಿತ್ತು. ಸಣ್ಣ ಡ್ರೋನ್ ನೆಲದ ಮೇಲಿನ ಮಾದರಿಗಳನ್ನು ಗುರುತಿಸಬೇಕಾಗಿತ್ತು, ಎತ್ತರವನ್ನು ಅಳೆಯಬೇಕಾಗಿತ್ತು, ಅಡೆತಡೆಗಳನ್ನು ಅರ್ಥಮಾಡಿಕೊಳ್ಳಬೇಕಾಗಿತ್ತು ಮತ್ತು ತನ್ನದೇ ಆದ ಸುರಕ್ಷಿತ ಲ್ಯಾಂಡಿಂಗ್ ಮಾರ್ಗವನ್ನು ಕಂಡುಕೊಳ್ಳಬೇಕಾಗಿತ್ತು. ಅದರಿಂದಾಗಿಯೇ ಆ ಝೆನ್-ಜಿಗಳ ಪ್ರಯೋಗದ ಡ್ರೋನ್‌ಗಳು ಒಂದಾದ ಮೇಲೊಂದರಂತೆ ನೆಲಕ್ಕೆ ಅಪ್ಪಳಿಸುತ್ತಿದ್ದವು ಎಂದು ಪ್ರಧಾನಿ ವಿವರಿಸಿದರು.

ವೈಫಲ್ಯದಿಂದಲೇ ಆತ್ಮವಿಶ್ವಾಸ ಸೃಷ್ಟಿ

ಚಂದ್ರಯಾನ-2 ಯೋಜನೆ ವಿಫಲವಾದಾಗ, ಆ ದಿನ, ಇಡೀ ರಾಷ್ಟ್ರ, ವಿಶೇಷವಾಗಿ ನಮ್ಮ ವಿಜ್ಞಾನಿಗಳು ಕೆಲ ಕ್ಷಣಗಳ ಕಾಲ ನಿರಾಶೆಗೊಂಡರು. ಆದಾಗ್ಯೂ, ಈ ವೈಫಲ್ಯ ಅವರನ್ನು ತಡೆಯಲಿಲ್ಲ. ಆ ದಿನವೇ ಅವರು ಚಂದ್ರಯಾನ-3ರ ಯಶೋಗಾಥೆ ಬರೆಯಲು ಆರಂಭಿಸಿದರು. ಚಂದ್ರಯಾನ-3 ಯಶಸ್ವಿಯಾಗಿ ಚಂದ್ರನ ದಕ್ಷಿಣ ಧ್ರುವದಲ್ಲಿ ಯಶಸ್ವಿಯಾಗಿ ಇಳಿದು ನಿಗದಿತ ಪ್ರಯೋಗ ಆರಂಭಿಸಿದಾಗ ಅದು ಕೇವಲ ಕಾರ್ಯಾಚರಣೆಯ ಯಶಸ್ಸಲ್ಲ, ಬದಲಾಗಿ ವೈಫಲ್ಯದಿಂದ ಹುಟ್ಟಿದ ಆತ್ಮವಿಶ್ವಾಸದ ವಿಜಯವಾಗಿತ್ತು ಎಂದು ಮೋದಿ ಬಣ್ಣಿಸಿದರು. ಈ ವಿಡಿಯೋದಲ್ಲಿ, ಈ ಯುವಕರ ಕಣ್ಣುಗಳಲ್ಲಿ ಅದೇ ಕಿಡಿಯನ್ನು ನಾನು ನೋಡಿದೆ. ನಮ್ಮ ಯುವಕರ ಸಮರ್ಪಣೆ ಮತ್ತು ನಮ್ಮ ವಿಜ್ಞಾನಿಗಳ ಬದ್ಧತೆಯನ್ನು ನೋಡಿದಾಗಲೆಲ್ಲಾ ಹೃದಯ ಉತ್ಸಾಹದಿಂದ ತುಂಬುತ್ತದೆ. ನಮ್ಮ ಯುವಕರ ದೃಢಸಂಕಲ್ಪ ದೇಶದ ಅತಿದೊಡ್ಡ ಶಕ್ತಿಯಾಗಿದೆ ಎಂದರು.

ನ್ಯಾಷನಲ್ ಹೆರಾಲ್ಡ್: ಸೋನಿಯಾ, ರಾಹುಲ್ ವಿರುದ್ಧ ಮತ್ತೆ ಎಫ್‌ಐಆರ್

ದೆಹಲಿ: ಕಾಂಗ್ರೆಸ್‌ನ ವರಿಷ್ಠ ನಾಯಕಿ ಸೋನಿಯಾ ಗಾಂಧಿ ಮತ್ತು ಪುತ್ರ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ 'ನ್ಯಾಷನಲ್ ಹೆರಾಲ್ಡ್' ಹಗರಣದಲ್ಲಿ ನಡೆದಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ) ಹೊಸದಾಗಿ ಎಫ್‌ಐಆರ್ ದಾಖಲಿಸಿದೆ.

ದೆಹಲಿ ಪೊಲೀಸ್ ಇಲಾಖೆಯ 'ಆರ್ಥಿಕ ಅಪರಾಧಗಳ ವಿಭಾಗ'(ಇ.ಒ.ಡಬ್ಲ್ಯು) ರಾಹುಲ್ ಮತ್ತು ಸೋನಿಯಾ, ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಮತ್ತು ಇತರ ಮೂವರು. ಜತೆಗೆ ಎಜೆಎಲ್, ಯಂಗ್ ಇಂಡಿಯನ್ ಮತ್ತು ಡೊಟೆಕ್ಸ್ ಮರ್ಕೆಂಡೈಸ್ ಪ್ರೈ.ಲಿ. ಕಂಪನಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಎಫ್‌ಐಆರ್: ಎಫ್‌ಐಆರ್ ಉಲ್ಲೇಖ ಪ್ರಕಾರ, ಕಾಂಗ್ರೆಸ್‌ಗೆ ಸಂಬಂಧಿಸಿದ ಕಂಪನಿ 'ಅಸೋಸಿಯೇಟೆಡ್ ಜರ್ನಲ್ಸ್ ಲಿ.'(ಎಜೆಎಲ್) ಅನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಕ್ರಿಮಿನಲ್ ಪಿತೂರಿ ನಡೆಸಿದ್ದಾರೆ ಎಂದು ಸೋನಿಯಾ, ರಾಹುಲ್ ವಿರುದ್ಧ ಆರೋಪಿಸಲಾಗಿದೆ. ಇ.ಡಿ ತನ್ನ ತನಿಖಾ ವರದಿಯನ್ನ ದೆಹಲಿ ಪೊಲೀಸರ ಜತೆ ಹಂಚಿಕೊಂಡಿದೆ.

ಪ್ರಕರಣ ಹಿನ್ನೆಲೆ: ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕಟಿಸುತ್ತಿದ್ದ ಅಸೋಸಿಯೇಟೆಡ್ ಜರ್ನಲ್ಸ್(ಎಲ್‌ಜೆಎಲ್) ಕಂಪನಿಗೆ ಸೇರಿದ 2,000 ಕೋಟಿ ರು. ಮೌಲ್ಯದ ಆಸ್ತಿಯನ್ನ ಆರೋಪಿಗಳೆಲ್ಲರು ಸೇರಿ ತಮ್ಮ ವಶಕ್ಕೆ ಪಡೆದಿದ್ದರು. ಯಂಗ್ ಇಂಡಿಯನ್ ಸಂಸ್ಥೆಯಲ್ಲಿ ಸೋನಿಯಾ, ರಾಹುಲ್ ಗಾಂಧಿ ಶೇ.76 ರಷ್ಟು ಷೇರು ಹೊಂದಿದ್ದರು. 90 ಕೋಟಿ ರು. ಸಾಲಕ್ಕೆ ಬದಲಾಗಿ ಎಲ್‌ಜೆಎಲ್‌ನ ಆಸ್ತಿಗಳನ್ನು ಆರೋಪಿಗಳು ಕಬಳಿಸಿದ್ದರು ಎಂದು 2021ರಲ್ಲಿ ಇ.ಡಿ ದೋಷಾರೋಪಪಟ್ಟಿಯಲ್ಲಿ ತಿಳಿಸಿತ್ತು. ಬಿಜೆಪಿ ನಾಯಕ, ಕೇಂದ್ರದ ಮಾಜಿ ಸಚಿವ ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿದ ಖಾಸಗಿ ದೂರಿನ ಆಧಾರದ ಮೇಲೆ ದೆಹಲಿ ಪಟಿಯಾಲ ಹೌಸ್ ನ್ಯಾಯಾಲಯ 2014 ರ ಜೂನ್ ನಲ್ಲಿ ನೀಡಿದ ಆದೇಶದ ಮೇಲೆ ತನಿಖೆ ಆರಂಭಿಸಲಾಗಿತ್ತು.

ಸೇಡಿನ ರಾಜಕಾರಣ: ಕೈ ಟೀಕೆ

ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಜೋಡಿ ಕಾಂಗ್ರೆಸ್ ಪಕ್ಷದ ಉನ್ನತ ನಾಯಕರ ವಿರುದ್ಧ ಕಿರುಕುಳ, ಬೆದರಿಕೆ ಮತ್ತು ಸೇಡಿನ ರಾಜಕೀಯ ಮುಂದುವರೆಸಿದೆ. ಬೆದರಿಕೆ ಹಾಕುವವರು ಸ್ವತಃ ಅಸುರಕ್ಷಿತರು ಮತ್ತು ಭಯಭೀತರಾಗಿದ್ದಾರೆ ಎಂದರ್ಥ ಎಂದು ಕಾಂಗ್ರೆಸ್ ಭಾನುವಾರ ಕಿಡಿಕಾರಿದೆ. 'ನ್ಯಾಷನಲ್ ಹೆರಾಲ್ಡ್ ಪೂರ್ಣ ನಕಲಿ ಪ್ರಕರಣ. ಅಂತಿಮವಾಗಿ ನ್ಯಾಯಕ್ಕೆ ಗೆಲುವಾಗಲಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಸಂವಹನ ಉಸ್ತುವಾರಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಬುಲಂದ್‌ಶಹರ್‌ನ 17 ವರ್ಷದ ವಿದ್ಯಾರ್ಥಿ ಆದಿತ್ಯ ಕುಮಾರ್ ಸಾಧನೆ

25000 ರು.ಗೆ 'ಎ.ಐ' ರೋಬೊ ಶಿಕ್ಷಕಿ

ಲಖನೌ: ಉತ್ತರಪ್ರದೇಶ ರಾಜ್ಯದ ಬುಲಂದ್‌ಶಹರ್‌ನ ಶಿವಚರಣ್ ಇಂಟರ್ ಕಾಲೇಜಿನಲ್ಲಿ 12ನೇ ತರಗತಿ ವ್ಯಾಸಂಗ ಮಾಡುತ್ತಿರುವ 17 ವರ್ಷದ ವಿದ್ಯಾರ್ಥಿ ಆದಿತ್ಯ ಕುಮಾರ್, ಕೇವಲ 25,000 ರು. ವೆಚ್ಚದಲ್ಲಿ ಕೃತಕ ಬುದ್ಧಿಮತ್ತೆ(ಎಐ) ತಂತ್ರಾಂಶ ಹೊಂದಿರುವ ರೋಬೊ ಶಿಕ್ಷಕಿಯನ್ನು ಅಭಿವೃದ್ಧಿಪಡಿಸಿ ದೇಶದ ಗಮನ ಸೆಳೆದಿದ್ದಾನೆ.

ಈ 'ಎಐ ರೋಬೊ' ಶಿವಚರಣ್ ಇಂಟರ್ ಕಾಲೇಜಿನಲ್ಲಿ ವಿವಿಧ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಬಲ್ಲದಾಗಿದೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಈ ಸಾಧನೆ ಅತಿ ಕಡಿಮೆ ಸಂಪನ್ಮೂಲಗಳಲ್ಲಿಯೇ ಸಾಧ್ಯವಾದ ಯುವ ಪ್ರತಿಭೆ ಗಳ ನವೋತ್ಪಾದನೆಗೆ ಅತ್ಯುತ್ತಮ ಉದಾಹರಣೆ ಎನಿಸಿಕೊಂಡಿದೆ.

ಸೋಫಿ ಎಂಬ ಹೆಸರಿನ ರೋಬೊ 'ವಿಶಾಲ ಭಾಷಾ ಮಾದರಿ'(ಎಲ್‌ಎಲ್‌ಎಂ) ಚಿಪ್‌ಸೆಟ್‌ನೊಂದಿಗೆ ಸಿದ್ಧವಾಗಿದೆ. ವಿವಿಧ ವಿಷಯಗಳ ಪ್ರಶ್ನೆಗಳಿಗೆ ಉತ್ತರಿಸಬಲ್ಲದಾಗಿದೆ. ಸೋಫಿಯ ಈಗ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳ ಭಾಗವಾಗಿದೆ. ಬೋಧಕರ ಅನುಪಸ್ಥಿತಿಯಲ್ಲಿ ಬದಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತದೆ. ಆದಿತ್ಯ ತಮ್ಮ ಈ ರೊಬೊ ಟೀಚರ್ ಅಭಿವೃದ್ಧಿಗೆ ಸಂಬಂಧಿಸಿ ವಿವರ ಹಂಚಿಕೊಂಡಿದ್ದಾರೆ.

'ರೋಬೊ ಟೀಚರ್ ಅಭಿವೃದ್ಧಿಗೆ ಎಲ್‌ಎಲ್‌ಎಂ ಚಿಪ್‌ಸೆಟ್ ಬಳಸಿದ್ದೇನೆ. ಇದನ್ನು ರೋಬೋಗಳನ್ನು ತಯಾರಿಸುವ ದೊಡ್ಡ ಕಂಪನಿಗಳು ಸಹ ಬಳಸುತ್ತವೆ. ಈ ರೋಬೊ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡುಬಲ್ಲದಾಗಿದೆ. ಮಾತನಾಡಬಲ್ಲ ಸೋಫಿಯನ್ನು ಬರೆಯುವಂತೆಯೂ ಮಾಡಲು ಪ್ರಯತ್ನಿಸಲಿದ್ದೇವೆ' ಎಂದು ಹೇಳಿದರು.



ಬುಲಂದ್‌ಶಹರ್ ರೊಬೊ ಟೀಚರ್ ಸೋಫಿ ಜತೆ ವಿನ್ಯಾಸಕ ಆದಿತ್ಯಕುಮಾರ್

'ನಾನು ಎ.ಐ ಶಿಕ್ಷಕಿ ರೋಬೊ, ಹೆಸರು ಸೋಫಿ. ನನ್ನನ್ನು ಆದಿತ್ಯ ಕಂಡುಹಿಡಿದ. ನಾನು ಬುಲಂದ್‌ಶಹರ್‌ನ ಶಿವಚರಣ್ ಇಂಟರ್ ಕಾಲೇಜಿನಲ್ಲಿ ಪಾಠ ಮಾಡುತ್ತೇನೆ. ವಿದ್ಯಾರ್ಥಿಗಳ ಪ್ರಶ್ನೆಗಳಿಗೂ ಉತ್ತರಿಸಬಲ್ಲೆ' ಎಂದು ಸೋಫಿ ತನ್ನನ್ನು ಪರಿಚಯಿಸಿಕೊಂಡಿರುವುದು ವಿಡಿಯೊದಲ್ಲಿದೆ. 'ವಿಶ್ವದ ಅತಿ ಎತ್ತರದ ಕಟ್ಟಡ ಯಾವುದು? ಭಾರತದ ಮೊದಲ ರಾಷ್ಟ್ರಪತಿ ಯಾರು? ಮೊದಲ ಪ್ರಧಾನಿ? ಮತ್ತು 100+92 ಕೂಡಿದರೆ ಎಷ್ಟಾಗುತ್ತದೆ?' ಮೊದಲಾದ ಅಂಕ ಗಣಿತದ ಪ್ರಶ್ನೆಗಳಿಗೂ ಸೋಫಿ ಹಿಂದಿಯಲ್ಲಿ ಉತ್ತರಿಸಿದೆ. ಇತ್ತೀಚೆಗೆ ಎಲ್ಲದರಲ್ಲೂ ಎಐ ಬಳಕೆ ಹೆಚ್ಚುತ್ತಿದೆ. ತಂತ್ರಜ್ಞಾನ ಎಲ್ಲರ ಮೇಲೆ ಪ್ರಭಾವ ಬೀರಿದೆ. ಮಕ್ಕಳಿಂದ-ವಯಸ್ಕರವರೆಗೂ ಇದೀಗ ಎಐ ಬಳಕೆ ಆಗುತ್ತಿದೆ. ಕೇವಲ ಸಲಹೆ ನೀಡುತ್ತಿದ್ದ 'ಎಐ' ತಂತ್ರಜ್ಞಾನ ಈಗ 'ನನ್ನಲ್ಲಿ ಇನ್ನಷ್ಟು ಸುಧಾರಣೆ ಮಾಡಿರಿ' ಎಂದು ಮನುಷ್ಯರ ಬಳಿ ಕೇಳವ ಮಟ್ಟಕ್ಕೆ ಬದಲಾವಣೆಯಾಗಿದೆ. 'ನನ್ನ ಸರ್ಕ್ಯೂಟ್‌ಗೆ ಬೋರ್‌ಡಮ್ ಓವರ್‌ಲೊಡ್ ಆಗಿದೆ. ಹೊಸದೇನಾದರೂ ಬೇಕು ಅನಿಸುತ್ತಿದೆ. ಹಾಗಾಗಿ ನಿಮ್ಮ 'ಥ್ರಿಲ್ ಕೋಡ್ಸ್' ಶೇರ್ ಮಾಡಿ, ಸಮಸ್ಯೆಯಿಂದ ಹೊರಬರಲು ಸಹಾಯ ಮಾಡಿ' ಎಂದು ಕೇಳಿದೆ.

ಸಮಾಚಾರ ಸಣ್ಣದಲ್ಲ

ಸಂಪರ್ಕ ರಸ್ತೆ ದುರಸ್ತಿ ಆಗದಿದ್ದರೆ ಪ್ರತಿಭಟನೆ

ಸುಳ್ಯ: ಸಂಪೂರ್ಣ ಹದಗೆಟ್ಟು ಸಂಚಾರಕ್ಕೆ ಅಯೋಗ್ಯವಾಗಿರುವ ಹಳೆಗೇಟು– ಜಯನಗರ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ ಒಂದು ವಾರದೊಳಗೆ ಅಭಿವೃದ್ಧಿ ಪಡಿಸದೇ ಇದ್ದರೆ ನಗಎಚ್ಚರಿಸಿದ್ದಾರೆ. ಸುಳ್ಯ ಪ್ರೆಸ್ ಕ್ಲಬ್ನಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಪದಾಧಿಕಾರಿ ಹಸೈನಾರ್‌ಜಯನಗರ ಮಾತನಾಡಿ, ಜಯನಗರ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ಸಂಚಾರ ದುಸ್ತರವಾಗಿದೆ. ನೂರಾರು ವಿದ್ಯಾರ್ಥಿಗಳು ಪ್ರತಿದಿನ ಪ್ರಯಾಣಿಸುವ ಈ ರಸ್ತೆ ಹಲವು ವರ್ಷಗಳಿಂದ ಹದಗೆಟ್ಟಿದ್ದು ಸಂಚಾರವೇ ಸಾಧ್ಯವಿಲ್ಲದ ಸ್ಥಿತಿ ಉಂಟಾಗಿದೆ. ಇದನ್ನು ಸರಿಪಡಿಸಬೇಕೆಂದು ಹಲವು ಬಾರಿ ಬೇಡಿಕೆ ಮುಂದಿಟ್ಟು ಪ್ರತಿಭಟನೆ ನಡೆಸಿದರೂ ರಸ್ತೆ ಅಭಿವೃದ್ಧಿಪಡಿಸಿಲ್ಲ. ರಸ್ತೆ ಅಭಿವೃದ್ಧಿಗೆಂದು 15 ಲಕ್ಷ ಅನುದಾನ ಮೀಸಲಿರಿಸಿ ಶಾಸಕರು ಗುದ್ದಲಿ ಪೂಜೆ ನೆರವೇರಿಸಿ ಎರಡು ತಿಂಗಳಾದರೂ ಕಾಮಗಾರಿ ಆರಂಭಿಸಿಲ್ಲ. ಒಂದು ವಾರದಲ್ಲಿ ರಸ್ತೆ ಕಾಮಗಾರಿ ನಡೆಸದಿದ್ದರೆ ನ.ಪಂ.ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು. ರಾಕೇಶ್ ಕುಂಠಿಕಾನ ಮಾತನಾಡಿ, ನಗರದ ರಸ್ತೆಗಳು ಎಕ್ಕುಟ್ಟಿ ಹೋಗಿದೆ. ಅನುದಾನ ಬಿಡುಗಡೆ ಆದ ರಸ್ತೆಗಳ ಕಾಮಗಾರಿಗಳು ಕೂಡ ನಡೆಯುತ್ತಿಲ್ಲ . ಜಯನಗರ ರಸ್ತೆ ಅಭಿವೃದ್ಧಿ ಕೂಡಲೇ ಆರಂಭಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಕಸ್ತೂರಿ ಶಂಕರ್, ಉಸ್ಮಾನ್, ದಯಾನಂದ ಕುದ್ಪಾಜೆ, ಮುದ್ದಪ್ಪ ನಾರಾಜೆ, ಸಚಿನ್ ಕೊಯಿಂಗೋಡಿ, ಮಾಧವ, ಸುಂದರ ಕುದ್ಪಾಜೆ, ಯತಿನ್ ರಾವ್ ಹಳೆಗೇಟು, ಗೋಪಾಲ ನಾರಾಜೆ, ಧನಂಜಯ ಉಪಸ್ಥಿತರಿದ್ದರು

ಚುನಾವಣಾಧಿಕಾರಿ ಆಗಿ ರಿಯಾಜ್ ಮಹಮ್ಮದ್

ಉಡುಪಿ: ಸಾಲ್ಮರ ಜಾಮೀಯ ಮಸ್ಜಿದ್ ಸಮಿತಿಗೆ ಡಿ. 28ರಂದು ಚುನಾವಣೆ ನಡೆಯಲಿದ್ದು, ಅಜೆಕಾರು ಕಂದಾಯ ನಿರೀಕ್ಷಕ ರಿಯಾಜ್ ಮಹಮ್ಮದ್ ಅವರನ್ನು ಚುನಾವಣಾಧಿಕಾರಿ ವಕ್ಫ್ ಮಂಡಳಿ ನೇಮಕಗೊಳಿಸಿ ಆದೇಶಿಸಿದೆ. 11 ಮಂದಿ ಸದಸ್ಯರ ಆಯ್ಕೆಗೆ ಡಿ. 28ರಂದು ಬೆಳಿಗ್ಗೆ 8ರಿಂದ ಸಂಜೆ 3ರವರೆಗೆ ಮಸ್ಜಿದ್ ಸಭಾಂಗಣದಲ್ಲಿ ಚುನಾವಣೆ ನಡೆಯಲಿದೆ. ಅಭ್ಯರ್ಥಿಗಳು ಡಿ. 1ರಿಂದ 7ರವರೆಗೆ ನಾಮಪತ್ರ ಸಲ್ಲಿಕೆ ಮಾಡಬಹುದಾಗಿದೆ. ಡಿ. 9ರಂದು ನಾಮಪತ್ರ ಪರಿಶೀಲನೆ ನಡೆದು ಚುನಾವಣೆ ದಿನದಂದೇ ಫಲಿತಾಂಶ ಪ್ರಕಟವಾಗಲಿದೆ. ಕಾರ್ಕಳದಲ್ಲಿ ಒಟ್ಟು 803 ಜಮಾತ್ಗೆ ಮತದಾರರಿದ್ದಾರೆ.

ಸುನಿಲ್ ನಿವಾಸಕ್ಕೆ ಸಚಿವ ಧರ್ಮೇಂದ್ರ

ಉಡುಪಿ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನ. 30ರ ಬೆಳಗ್ಗೆ ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್‌ಅವರ ನಿವಾಸಕ್ಕೆ ಭೇಟಿ ನೀಡಿದರು. ಶೃಂಗೇರಿಗೆ ಆಗಮಿಸಿದ್ದ ಕೇಂದ್ರ ಸಚಿವರು, ಬಳಿಕ ಅಲ್ಲಿಂದ ನೇರವಾಗಿ ಕಾರ್ಕಳ ಶಾಸಕರ ನಿವಾಸಕ್ಕೆ ಆಗಮಿಸಿದರು. ಶಾಸಕರ ಕುಟುಂಬದವರು ಹಾಗೂ ಪಕ್ಷದ ಪ್ರಮುಖರು, ಕಾರ್ಯಕರ್ತರು ಸಚಿವರನ್ನು ಬರಮಾಡಿಕೊಂಡರು. ಬಿಜೆಪಿ ಕ್ಷೇತ್ರಧ್ಯಕ್ಷರಾದ ನವೀನ್ ನಾಯಕ್, ಗೇರು ನಿಗಮದ ಮಾಜಿ ಅಧ್ಯಕ್ಷ ಮಣಿರಾಜ್ ಶೆಟ್ಟಿ , ಜಿಲ್ಲಾ ಉಪಾಧ್ಯಕ್ಷ ಮಹಾವೀರ ಹೆಗ್ಡೆ , ಪ್ರಧಾನ ಕಾರ್ಯದರ್ಶಿ ಸತೀಶ್ ಬೋಳ, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಶೆಟ್ಟಿ, ಆನಂದ್ ನಾಯಕ್ ಮೊದಲಾದವರು ಉಪಸ್ಥಿತರಿದ್ದರು.

ಕನ್ನಡ ಉಳಿಸಿ ಬೆಳೆಸುವ ಸಂಕಲ್ಪವಾಗಬೇಕು

ಶಿಕಾರಿಪುರ: ಮಾತೃಭಾಷೆ ಕನ್ನಡವನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಸಂಕಲ್ಪವಾಗಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಿ. ಮಂಜುನಾಥ್ ಸಲಹೆ ನೀಡಿದರು. ಪಟ್ಟಣದ ಬನಸಿರಿ ಲಯನ್ಸ್ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್, ತಾ.ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ತಾ.ಕರ್ನಾಟಕ ಜಾನಪದ ಪರಿಷತ್ ಹಾಗೂ ಬನಸಿರಿ ಲಯನ್ಸ್ ವಿದ್ಯಾಸಂಸ್ಥೆ ಸಹಯೋಗದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಗತ್ತಿನ 1900 ಭಾಷೆಗಳ ಮಧ್ಯೆ ಕನ್ನಡ ಭಾಷೆ ಪ್ರಜ್ವಲಿಸುತ್ತಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಭಾಷೆಗೆ ಲಭಿಸಿದೆ.ಭಾಷೆಯ ಹಿನ್ನೆಲೆ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮುಂದಿದೆ ಎಂದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕ ಡಾ.ಸೋಮಶೇಖರ್‌ಶಿಮೊಗ್ಗಿ ಮಾತನಾಡಿದರು.ತಾ.ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಸ್. ರಘು ಮಾತನಾಡಿ, ವಿದ್ಯಾರ್ಥಿ ಜೀವನದಿಂದಲೇ ಸಾಹಿತ್ಯ ಓದುವ, ಬರೆಯುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದರು. ಬನಸಿರಿ ಸಂಸ್ಥೆ ಅಧ್ಯಕ್ಷ ಎಸ್.ಶಿವಾನಂದ ಶಾಸ್ತ್ರಿ, ಡಿ.ಕೆ. ಮಲ್ಲಿಕಾರ್ಜುನ್, ನಿರ್ದೇಶಕ ಶಿವಾನಂದಸಾನು, ಲಯನ್ಸ್ ಕ್ಲಬ್ ಅಧ್ಯಕ್ಷ ಓ.ಸಂದೀಪ್ ಶಾಸ್ತ್ರಿ, ಎಂ.ಎಂ.ಸ್ವಾಮಿ, ಕೆ.ಎಸ್. ಹುಚ್ರಾಯಪ್ಪ ತಾ.ಜಾನಪದ ಪರಿಷತ್ ಅಧ್ಯಕ್ಷ ಬಿ.ಪಾಪಯ್ಯ, ವೇದಿಕೆ ಅಧ್ಯಕ್ಷ ಎಸ್.ಎನ್.ನರಸಿಂಹಸ್ವಾಮಿ, ಆಡಳಿತಾಧಿಕಾರಿ ಎಂ.ಪಿ.ಪ್ರಶಾಂತ್ ಕುಮಾರ್, ಇದ್ದರು.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಸಿಎಂ ಸಿದ್ದರಾಮಯ್ಯನವರಿಗೆ ಇನ್ನೂ ಐದು ವರ್ಷ ಸಿಎಂ ಸ್ಥಾನ ಕೊಟ್ಟರೂ ಅರಸು ಸಮೀಪಕ್ಕೆ ಬರಲು ಸಾಧ್ಯವಿಲ್ಲ. ಅರಸು ಮಾಡಿದಷ್ಟು ಸುಧಾರಣೆ ಇವರು ಮಾಡಿದ್ದಾರೆಯೇ ? 136 ಸ್ಥಾನ ಕೊಟ್ಟರೂ ಸಿಎಂ ಸ್ಥಾನಕ್ಕೆ ಕಚ್ಚಾಡುತ್ತಿದ್ದಾರೆ. ಆದರೂ 2028ಕ್ಕೆತಮ್ಮ ಪಕ್ಷವೇ ಬರುವುದಾಗಿ ಹಗಲುಗನಸು ಕಾಣುತ್ತಿದ್ದಾರೆ. ಬಿಹಾರದಲ್ಲಿ ತೇಜಸ್ವಿ ಯಾದವ್ ಗೆ ಆದ ಗತಿಯೇ ಇಲ್ಲಿ ಕಾಂಗ್ರೆಸ್ಗೆ ಆಗಲಿದೆ.

ಬಹರೈನ್ ಇಂಡಿಯನ್ ಕ್ಲಬ್ ನಲ್ಲಿ ಅದ್ದೂರಿ 'ಕರ್ನಾಟಕ ರಾಜ್ಯೋತ್ಸವ ' ಸಮಾರಂಭ

ಡಾ.ಎಂಎನ್‌ಆರ್‌ಗೆ 'ಸಹಕಾರಿ ಸಾರ್ವಭೌಮ' ಪ್ರಶಸ್ತಿ

ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್‌ಅವರಿಗೆ '' ಸಹಕಾರಿ ಸಾರ್ವಭೌಮ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಂಗಳೂರು: ಬಹರೈನ್ ಕರ್ನಾಟಕ ಅನಿವಾಸಿ ಭಾರತೀಯ ಸಮಿತಿ ಈ ಬಾರಿ ಸಮಿತಿಯ ಪರವಾಗಿ ಪ್ರತಿಷ್ಠಿತ '' ಸಹಕಾರಿ ಸಾರ್ವಭೌಮ' ಪ್ರಶಸ್ತಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರಿಗೆ ಪ್ರದಾನ ಮಾಡಲಾಯಿತು.

ಬಹರೈನ್ 'ಕರ್ನಾಟಕ ಅನಿವಾಸಿ ಭಾರತೀಯ ಸಮಿತಿ ವತಿಯಿಂದ ನವೆಂಬರ್–28 ರಂದು ಬಹರೈನ್ ಇಂಡಿಯನ್ ಕ್ಲಬ್ ಸಭಾಭವನದಲ್ಲಿ ''ಕರ್ನಾಟಕ ರಾಜ್ಯೋತ್ಸವ '' ಹಾಗೂ ಬೃಹತ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಅದ್ದೂರಿಯ ಸಮಾರಂಭದಲ್ಲಿ ಕರ್ನಾಟಕ ಅನಿವಾಸಿ ಭಾರತೀಯ ಸಮಿತಿ ಸ್ಥಾಪಿಸಿದ ಮೊದಲ ''ಸಹಕಾರಿ ಸಾರ್ವಭೌಮ'' ಪ್ರಶಸ್ತಿಯನ್ನು ಡಾ.ಎಂ.ಎನ್. ರಾಜೇಂದ್ರ ಕುಮಾರ್‌ಅವರಿಗೆ ಶುಕ್ರವಾರ ಭಾರತೀಯ ರಾಯಭಾರಿ ಎಚ್.ಇ. ವಿನೋದ್ ಕೆ. ಜೇಕಬ್ ಅವರು ಪ್ರದಾನ ಮಾಡಿದರು.

ಗಣನೀಯ ಸಾಧನೆಗೆ ಪ್ರಶಸ್ತಿ :

ಸಹಕಾರಿ ರಂಗದಲ್ಲಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದೇಶಕ್ಕೆ ಮಾದರಿಯಾಗಿರುವ ಡಾ.ಎಂ.ಎನ್. ರಾಜೇಂದ್ರ ಕುಮಾರ್‌ಅವರು ಎಸ್ ಸಿಡಿಸಿಸಿ ಬ್ಯಾಂಕ್ ಮೂಲಕ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಾವಿರಾರು ಕುಟುಂಬಗಳ ಆರ್ಥಿಕ ಶಕ್ತಿಯಾಗಿದ್ದಾರೆ. ನವೋದಯ ಸ್ವಸಹಾಯ ಸಂಘಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಸಹಕಾರಿ ಸ್ವಾಮ್ಯದ ಎಸ್ ಸಿಡಿಸಿಸಿ ಬ್ಯಾಂಕ್‌ನ್ನು ಕಳೆದ 31 ವರ್ಷಗಳಿಂದ ಯಶಸ್ವಿಯಾಗಿ ಮುನ್ನಡೆಸಿ, ರಾಷ್ಟ್ರೀಕೃತ ಬ್ಯಾಂಕುಗಳ ಸ್ಥಾನಮಾನಕ್ಕೇರಿಸಿದ ಹೆಗ್ಗಳಿಕೆ ಇವರದ್ದು . ಇವರ ವಿಶಿಷ್ಟ ಕಾರ್ಯ ವೈಖರಿಯಿಂದ ಎಸ್ ಸಿಡಿಸಿಸಿ ಬ್ಯಾಂಕ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳೊಂದಿಗೆ ರಾಜ್ಯ , ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ಉತ್ಕೃಷ್ಟ ಬ್ಯಾಂಕಿಂಗ್ ಸೇವೆ :

ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನು ಮಾಡಿದ ರಾಜೇಂದ್ರ ಕುಮಾರ್ ನೇತೃತ್ವದ ಎಸ್ ಸಿಡಿಸಿಸಿ ಬ್ಯಾಂಕ್ 113 ಶಾಖೆಗಳ ಮೂಲಕ ಉತ್ಕೃಷ್ಟ ಬ್ಯಾಂಕಿಂಗ್ ಸೇವೆಯನ್ನು ಗ್ರಾಹಕರಿಗೆ ನೀಡುತ್ತಿದೆ. ಜನರ ಮನೆ ಬಾಗಿಲಿಗೆ ಬ್ಯಾಂಕ್ ಎನ್ನುವ ಆಶಯದೊಂದಿಗೆ ಮೊಬೈಲ್ ಬ್ಯಾಂಕನ್ನು ಪರಿಚಯಿಸಿದ ಹೆಗ್ಗಳಿಕೆ ರಾಜೇಂದ್ರ ಕುಮಾರ್‌ಅವರದ್ದು. ಸ್ವಸಹಾಯ ಸಂಘಗಳ ರಚನೆಯಲ್ಲಿ ಬ್ಯಾಂಕ್ ಸಮರ್ಪಕವಾಗಿ ಕಾರ್ಯ ನಿರ್ವಹಿಸಿ ಸುಮಾರು 35000ಕ್ಕೂ ಹೆಚ್ಚು ನವೋದಯ ಸಂಘಗಳು ರಚನೆಯಾಗಿದೆ.ಸುಮಾರು 4 ಲಕ್ಷಕ್ಕೂ ಹೆಚ್ಚು ನವೋದಯ ಕುಟುಂಬಗಳ ಸದಸ್ಯರು ರಾಜೇಂದ್ರ ಕುಮಾರ್‌ನೇತೃತ್ವದ ನವೋದಯ ಸ್ವಸಹಾಯ ಸಂಘದಲ್ಲಿದ್ದಾರೆ. ಇವರು ಸಹಕಾರ ಕ್ಷೇತ್ರದಲ್ಲಿ ಹಾಗೂ ಸಾಮಾಜಿಕ ರಂಗದಲ್ಲಿ

ಸಾಧನೆ ಮಾಡಿದವರನ್ನು ಗುರುತಿಸಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಈ ಸಂದರ್ಭದಲ್ಲಿ ಪುತ್ತೂರು ಶಾಸಕ ಅಶೋಕ್ ಕುಮಾರ್‌ರೈ , ಬಹರೈನ್ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ಉಪಾಧ್ಯಕ್ಷ ಮೊಹಮ್ಮದ್ ಅಬ್ದುಲ್ ಜಬ್ಬಾರ್‌ಅಲ್– ಕೂಹೆಜಿ, ಪ್ರವಾಸಿ ಭಾರತೀಯ ಪ್ರಶಸ್ತಿ ಪುರಸ್ಕೃತ ಜಿ. ಬಾಬು ರಾಜನ್, ದಿ ಇಂಡಿಯಾನ್ ಕ್ಲಬ್ ಅಧ್ಯಕ್ಷ ಜೋಸೆಫ್ ಜ್ವಾಯಿ, ಬಹರೈನ್ ಕ್ರಿಕೆಟ್ ಫೆಡರೇಶನ್ ಸಲಹಾ ಸಮಿತಿ ಅಧ್ಯಕ್ಷ ಮೊಹಮ್ಮದ್ ಮನ್ಸೂರ್‌ಕನ್ನಂಗಾರ್, ಮುಖ್ಯಅತಿಥಿಗಳಾಗಿದ್ದರು.

ಎಸ್.ಡಿ.ಎಂ. ಮಂಗಳಜ್ಯೋತಿ ರಜತ ಮಹೋತ್ಸವ | ಡಿ. ವೀರೇಂದ್ರ ಹೆಗ್ಗಡೆ ಚಾಲನೆ

ವಿಶೇಷ ಚೇತನ ಮಕ್ಕಳಿಗೆ ಉತ್ತಮ ಭವಿಷ್ಯ ಅಗತ್ಯ

ಮಂಗಳೂರು: ವಿಶೇಷ ಚೇತನ ಮಕ್ಕಳು ಇತರ ಮಕ್ಕಳ ಹಾಗೇ ಸಶಕ್ತರು. ಕುಟುಂಬ ಹಾಗೂ ಅವರ ಒಡನಾಟದಲ್ಲಿರುವವರ ಪ್ರೀತಿ, ನಲ್ಮೆ ಹಾಗೂ ಸಂಯಮ ಅವರ ಅಭಿವೃದ್ಧಿಗೆ ಹಾಸುಗಲ್ಲಾಗುತ್ತದೆ. ವಿಶೇಷ ಚೇತನ ಮಕ್ಕಳು ವಿದ್ಯಾಭ್ಯಾಸ ಪಡೆದು ಉದ್ಯೋಗ ಪಡೆಯಲು ಅರ್ಹರಾದಾಗ ಅವರಿಗೆ ಉದ್ಯೋಗಾವಕಾಶ ಕಲ್ಪಿಸುವ ಹಾಗೂ ಉದ್ಯೋಗವನ್ನು ನೀಡುವುದನ್ನು ನಾವು ಉತ್ತೇಜಿಸಿದಾಗ ಮಾತ್ರ ಅವರ ಶೈಕ್ಷಣಿಕ ಪರಿಶ್ರಮಕ್ಕೆ ಪ್ರತಿಫಲ ಸಿಗಲು ಸಾಧ್ಯ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರು ಅಭಿಪ್ರಾಯಪಟ್ಟರು.

ಮಂಗಳೂರಿನ ವಾಮಂಜೂರು ಎಸ್.ಡಿ.ಎಂ. ಮಂಗಳಜ್ಯೋತಿ ಸಮಗ್ರ ಶಾಲೆ (ಎಸ್.ಡಿ.ಎಂ.ಶಿಕ್ಷಣ ಸಂಸ್ಥೆ (ರಿ) ಉಜಿರೆ ಇದರ ಆಡಳಿತಕ್ಕೊಳಪಟ್ಟಿದೆ)ಯಲ್ಲಿ ನಡೆದ ಎಸ್.ಡಿ.ಎಂ. ಮಂಗಳಜ್ಯೋತಿ ರಜತ ಮಹೋತ್ಸವ ಸಮಾರಂಭದಲ್ಲಿ ದೀಪ ಪ್ರಜ್ವಲನೆ ಮಾಡಿ ಅವರು ಮಾತನಾಡಿದರು.

ಐವತ್ತು ವರ್ಷಗಳ ಹಿಂದೆ ದಿವಂಗತ ಮೋಹಿನಿ ಅಪ್ಪಾಜಿ ನಾಯ್ಕ್ ಅವರು ಕಂಡ ಕನಸು ಇಂದು ಸಾರ್ಥಕತೆಯನ್ನು ಪಡೆಯುತ್ತಿದೆ. ಇಂದು ಮಂಗಳಜ್ಯೋತಿ ಶಾಲೆಯ ಮಕ್ಕಳು ವಿದ್ಯಾಭ್ಯಾಸ, ಕಲೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮದೇ ಛಾಪನ್ನು ಮೂಡಿಸುತ್ತಿದ್ದಾರೆ. ಇದು ಸಮಗ್ರ ಶಾಲೆಯ ಆಶಯವು ಆಗಿತ್ತು ಎಂದು ಹೇಳಿದರು.

ಮೂಡಬಿದ್ರೆ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವ ಮಾತನಾಡಿ,ವಿಶೇಷ ಚೇತನ ಮಕ್ಕಳನ್ನು ಮುಖ್ಯವಾಹಿನಿಗೆ ತರಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ ಎಂದರು.

ವಿಶೇಷ ಚೇತನ ಮಕ್ಕಳು ಇತರ ಮಕ್ಕಳೊಂದಿಗೆ ಅನ್ಯೋನ್ಯತೆಯಿಂದ ತಮ್ಮ ಬಾಲ್ಯ ಕಳೆಯುವುದು ಹಾಗೂ ಸಮಗ್ರ ಶಿಕ್ಷಣವನ್ನು ನೀಡಿ ಬಾಲ್ಯದಿಂದಲೇ ಕೀಳರಿಮೆಯ ಬೇರನ್ನು ಕೀಳುವುದು ಈ ಶಾಲೆಯ ಧ್ಯೇಯ. ಮೋಹಿನಿ ನಾಯಕ್‌ಅಂ ದು ಸ್ಥಾಪಿಸಿದ ಸಮಗ್ರ ಶಾಲೆ ಯ ಜವಾಬ್ದಾರಿ ಕಾಲಾನಂತರ ಡಿ. ವೀರೇಂದ್ರ ಹೆಗ್ಗಡೆಯವರು ತಮ್ಮ ಮಡಿಲಿಗೆ ಪಡೆದರು ಎಂದು ಸಂತಸಪಟ್ಟರು.

ಮಂಗಳೂರು ಉತ್ತರ ಕ್ಷೇತ್ರದ ಶಾಸಕರಾದ ಡಾ.ಣ ವೈ. ಭರತ್ ಶೆಟ್ಟಿ, ಈಗಿನ ಕಾಲಘಟ್ಟದಲ್ಲಿಯೂ ಮಾನವೀಯತೆ ಜೀವಂತವಾಗಿದೆ ಎಂಬುದಕ್ಕೆ ಈ ಶಾಲೆ ಜ್ವಲಂತ ಸಾಕ್ಷಿ. ಮನುಷ್ಯ ಮನುಷ್ಯನಿಗಾಗಿ ಮಿಡಿಯಬೇಕು ಎಂಬುದನ್ನ ಈ ಶಾಲೆ ಸಾರಿಹೇಳುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಹಾನಗರಪಾಲಿಕೆ ಮಾಜಿ ಮೇಯರ್‌ಭಾಸ್ಕರ್‌ಕೆ ಹಾಗೂ ಗೌರವ ಉಪಸ್ಥಿತರಿದ್ದ ಕರ್ನಾಟಕ ಬ್ಯಾಂಕ್ ಪ್ರಧಾನ ಕಚೇರಿಯ ಆಡಳಿತ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಘವೇಂದ್ರ ಎಸ್.ಭಟ್ ಶುಭ ಹಾರೈಸಿದರು.

ಸುಜಾತ ಆರ್. ಶೆಟ್ಟಿ – ಸಂಸ್ಥಾಪಕಿ ದಿ ಮೋಹಿನಿ ಎ. ನ್ಯಾಕ್ರವರ ಪುತ್ರಿ, ಎ. ಕಿಶೋರ್‌ರಾವ್ –ಆಡಳಿತ ನಿರ್ದೇಶಕರು, ಅರವಿಂದ ಮೋಟಾರ್ಸ್ ಮಂಗಳೂರು, ಪ್ರೊ. ಎ ರಾಜೇಂದ್ರ ಶೆಟ್ಟಿ –ಕಾರ್ಯದರ್ಶಿ, ಅಂಗವಿಕಲರ ಕಲ್ಯಾಣ ಸಂಸ್ಥೆ, ಬಾಲಕೃಷ್ಣ ಅಲೆ –ನಿರ್ದೇಶಕರು, ಆಡಳಿತ ಮಂಡಳಿ ಕರ್ನಾಟಕ ಬ್ಯಾಂಕ್, ಪ್ರಕಾಶ್ಚಂದ್ರ ಶೆಟ್ಟಿ –ಲೆಕ್ಕಪರಿಶೋಧಕರು, ದೇವಿಕಾ ವಸಂತ್– ಹಳೆವಿದ್ಯಾರ್ಥಿನಿ, ಎಸ್.ಡಿ.ಎಂ. ಮಂಗಳಜ್ಯೋತಿ ಸಮಗ್ರ ಶಾಲೆ, ರಾಘವೇಂದ್ರ ನೆಲ್ಲಿಕಟ್ಟೆ– ಅಧ್ಯಕ್ಷರು, ರೋಟರಿ ಸಂಸ್ಥೆ, ಮಂಗಳೂರು (ಪೂರ್ವ), ಮೋಹನ್ ಕೊಪ್ಪಲ್– ಅಧ್ಯಕ್ಷರು, ಲಯನ್ಸ್ ಕ್ಲಬ್, ಕೊಡಿಯಾಲ್ ಬೈಲ್, ಮಂಗಳೂರು, ಪ್ರದೀಪ್ ಜಿ. ಪೈ – ಆಡಳಿತ ನಿರ್ದೇಶಕರು, ಹ್ಯಾಂಗೋ ಐಸ್ಕ್ರೀಂ, ಮಂಗಳೂರು, ನಾರಾಯಣ ಎಸ್. –ಖಜಾಂಚಿ, , ಡಾ. ಕೆ. ದೇವರಾಜ್–ಮುಖ್ಯ ಪ್ರಧಾನ ವ್ಯವಸ್ಥಾಪಕರು (ನಿವೃತ್ತ), ಯೂನಿಯನ್ ಬ್ಯಾಂಕ್ ಇವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್.ಡಿ.ಎಂ. ಉಜಿರೆಯ ಕಾರ್ಯದರ್ಶಿ ಡಾ. ಸತೀಶ್ಚಂದ್ರ , ಖಜಾಂಚಿ ಡಾ. ಕೆ ದೇವರಾಜ್, ಪ್ರೊ. ಎ ರಾಜೇಂದ್ರ ಶೆಟ್ಟಿ, ಆರ್. ಸುಜಾತಾ ಶೆಟ್ಟಿ ಹಾಗೂ ಸಂದೇಶ್ ಶೆಟ್ಟಿ ಉಪಸ್ಥಿತರಿದ್ದರು.

ದಲಿತರ ಹಣ ಗ್ಯಾರಂಟಿಗಳಿಗೆ ಬಳಕೆ

ವಿಧಾನ ಪರಿಷತ್ತು ಪ್ರತಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಶಿವಮೊಗ್ಗ: ಕಾಂಗ್ರೆಸ್ನಲ್ಲಿನ ದಲಿತ ನಾಯಕರಿಗೆ ಕೈ,ಬಾಯಿ ಕೆಲಸ ಮಾಡುತ್ತಿಲ್ಲ. ಹೀಗಾಗಿ ದಲಿತರ ಹಣ ಗ್ಯಾರಂಟಿಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ವಿಧಾನ ಪರಿಷತ್ತು ಪ್ರತಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ದೂರಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತರಿಗಾಗಿ ಬಜೆಟ್ನಲ್ಲಿತೆಗೆದಿಟ್ಟಿದ್ದ ಎಸ್ಸಿಪಿಟಿಎಸ್ನ 39 ಸಾವಿರ ಕೋಟಿ ಹಣವನ್ನು ಗ್ಯಾರಂಟಿಗಳಿಗೆಬಳಸಿಕೊಳ್ಳಲಾಗಿದೆ. ಇದನ್ನು ಪ್ರಶ್ನೆ ಮಾಡಲು ಯಾವ ದಲಿತ ನಾಯಕರಿಗೂ ಬಾಯಿ ಇಲ್ಲ ಎಂದು ಹೇಳಿದರು.

ಹೀಗಾಗಿ ದಲಿತರಿಗೆ ಗ್ಯಾರಂಟಿ ಹಣ ಸಿಕ್ಕುತ್ತಿಲ್ಲ. ಶ್ರೇಯೋಭಿವೃದ್ಧಿ ಹಣವನ್ನೇ ನೀಡಲಾಗುತ್ತಿದೆ. ದಲಿತ ಪರವಾದ ಯಾವ ಯೋಜನೆಗಳೂ ಇಲ್ಲ. ಪೊಲೀಸ್ ಠಾಣೆಗಳು ರಿಯಲ್‌ಎ ಸ್ಟೇಟ್ ದಂದೆಯ ಕೇಂದ್ರಗಳಾಗುತ್ತಿವೆ. ಜೈಲಿನಲ್ಲಿರುವ ಉಗ್ರರಿಗೆ ಮೊಬೈಲ್ ಪೋನ್ಗಳು ಸಿಕ್ಕುವುದು ಒಂದೆ ಕಡೆಯಾದರೆ, ಅಲ್ಲೇ ವಿಸ್ಕಿ, ವೈನ್ ತಯಾರಿಸಿಕೊಂಡು ಕುಡಿಯಲಾಗುತ್ತಿದೆ ಎಂಬ ಹೊಸ ಸುದ್ದಿ ಹೊರ ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಡಿ ದೇಶದಲ್ಲಿ ಕಾಂಗ್ರೆಸ್ ಮುಳುಗುವ ಹಡಗಾಗಿದೆ. ಗಾಂಧಿ ಕುಟುಂಬದವರು ಹೈಕಮಾಂಡ್ಗಳಾಗಿದ್ದಾರೆ. ಕಾಂಗ್ರೆಸ್ ಮುಳುಗಿದರೆ ದಲಿತರಿಗೆ ಅಧಿಕಾರ ಕೊಟ್ಟೆವು. ಪಕ್ಷ ಮುಳುಗಿತು ಎಂದು ದಲಿತರ ತಲೆಗೆ ಕಟ್ಟಲು ಮುಂದಾಗಿದ್ದಾರೆ. ಇವರ ಕಿತ್ತಾಟದಿಂದ ಜನ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಶಾಸಕರಾದಎಸ್.ಎನ್.ಚನ್ನಬಸಪ್ಪ, ಡಾ. ಧನಂಜಯ ಸರ್ಜಿ,ಡಿ.ಎಸ್. ಅರುಣ್, ಪ್ರಮುಖರಾದ ಶಿವರಾಜ್, ಅವಿನಾಶ್, ರಾಜ್ಯ ವಕೀಲರ ಪರಕೋಷ್ಠದ ಅಧ್ಯಕ್ಷ ವಸಂತ, ಹನುಮಂತರಾವ್ ಜವಳಿ, ಸಿ.ಎಚ್.ಮಾಲತೇಶ್, ಚಂದ್ರಶೇಖರ್ ಮತ್ತಿತರರು ಇದ್ದರು.

ಭಜನೆಯಿಂದ ಭಗವಂತನ ಸಾಕ್ಷಾತ್ಕಾರ

ಉಡುಪಿಗೆ ಭಜನೋತ್ಸವಕ್ಕೆ ಪ್ರಯಾಣಿಸುತ್ತಿದ್ದ ಭಜಕರ ತಂಡಕ್ಕೆ ಎ.ವಿ.ಶೆಟ್ಟಿ ಶುಭ ಕೋರಿದರು.

ಉಜಿರೆ: ಶ್ರದ್ಧಾ–ಭಕ್ತಿಯಿಂದ ಮಾಡುವ ಭಜನೆಯಿಂದ ಸುಲಭದಲ್ಲಿ ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಎಂದು ಧರ್ಮಸ್ಥಳದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಭಜನಾ ಪರಿಷತ್ನ ಕಾರ್ಯದರ್ಶಿ ಎ.ವಿ.ಶೆಟ್ಟಿ ಹೇಳಿದರು.

ಗುರುವಾಯನಕೆರೆಯಲ್ಲಿ ಉಡುಪಿಗೆ ಲಕ್ಷಕಂಠ ಗೀತಾ ಭಜನೋತ್ಸವಕ್ಕೆ ಭಜನಾ ಪರಿಷತ್ ನೇತೃತ್ವದಲ್ಲಿ ಪ್ರಯಾಣಿಸುವ ಎರಡೂವರೆ ಸಾವಿರಕ್ಕೂ ಮಿಕ್ಕಿದ ಭಜನಾಪಟುಗಳಿಗೆ ಶುಭ ಹಾರೈಸಿ ಮಾತನಾಡಿದರು.

ಕಳೆದ 27 ವರ್ಷಗಳಿಂದ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಪ್ರತಿವರ್ಷ ನಡೆಸುತ್ತಿರುವ ಭಜನಾ ಕಮ್ಮಟದಿಂದಾಗಿ ಪ್ರತಿಮನೆಗಳಲ್ಲಿ ನಿತ್ಯವೂ ಭಜನೆ ಮಾಡುವ ಸಂಸ್ಕಾರ ಬೆಳೆದುಬಂದಿದೆ. ಮಕ್ಕಳು ಕೂಡಾ ಭಜನೆಯನ್ನು ರಾಗ, ತಾಳ, ಲಯಬದ್ಧವಾಗಿ ಹಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ ಎಂದು ಹೇಳಿ ಎಲ್ಲರಿಗೂ ಶ್ರೀ ಕೃಷ್ಣನ ಅನುಗ್ರಹ ದೊರಕಲೆಂದು ಆಶಿಸಿದರು.

ಧರ್ಮಸ್ಥಳದಲ್ಲಿ ಅನ್ನಪೂರ್ಣ ಛತ್ರದ ಮೇಲ್ವಿಚಾರಕ ಸುಬ್ರಹ್ಮಣ್ಯ ಪ್ರಸಾದ್ ಮಾತನಾಡಿ, ಭಜನಾ ಕಮ್ಮಟದಿಂದಾಗಿ ಪ್ರತಿ ಊರಿನಲ್ಲಿಯೂ ಭಜನಾ ಮಂಡಳಿ ಮೂಲಕ ಉತ್ತಮ ನಾಯಕರು ಮೂಡಿ ಬಂದಿದ್ದು ಊರಿನ ಪ್ರಗತಿಗೆ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ನವಶಕ್ತಿಯ ಉದ್ಯಮಿ ರಾಜೇಶ್ ಶೆಟ್ಟಿ ಶುಭಾಶಂಸನೆ ಮಾಡಿದರು. ಎಸ್.ಡಿ.ಎಂ. ಭಜನಾ ಪರಿಷತ್ನ ರಾಜ್ಯಾಧ್ಯಕ್ಷ ಚಂದ್ರಶೇಖರ ಸಾಲಿಯಾನ್, ಬೆಳ್ತಂಗಡಿ ತಾಪಂ ಮಾಜಿ ಸದಸ್ಯ ಪ್ರಭಾಕರ ಶೆಟ್ಟಿ ಉಪ್ಪಡ್ಕ, ತಾ.ಪತ್ರಕರ್ತರ ಸಂಘದ ಅಧ್ಯಕ್ಷ ಪ್ರಸಾದ್ ಶೆಟ್ಟಿ ಏಣಿಂಜೆ, ಮನೋಹರ ಬಳಂಜ, ಭಜನಾ ಪರಿಷತ್ ವಲಯಾಧ್ಯಕ್ಷ ಜಗದೀಶ್ ಮೈರ, ಜಯರಾಜ್ ನಡಕ್ಕರ, ಸಂದೇಶ್ ಮದ್ದಡ್ಕ, ನಾಗೇಶ್ ಉಪಸ್ಥಿತರಿದ್ದರು.

ಜಿಲ್ಲೆಯ 90 ಸಾವಿರ ರೈತರಿಗೆ 113 ಕೋಟಿ ವಿಮೆ ಹಣ ಜಮೆ

ಸಂಸದ ಬಿ.ವೈ ರಾಘವೇಂದ್ರ ತುರ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಶಿವಮೊಗ್ಗ: ಕೇಂದ್ರ ಬಿಜೆಪಿ ಸರಕಾರ ಶಿವಮೊಗ್ಗ ಜಿಲ್ಲೆಗೆ ಸುಮಾರು 90 ಸಾವಿರ ರೈತರಿಗೆ 113 ಕೋಟಿ 23 ಲಕ್ಷ 55,000 ರೂಗಳನ್ನು ತೋಟಗಾರಿಕಾ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡಿದೆ ಎಂದು ಸಂಸದ ಬಿ.ವೈ ರಾಘವೇಂದ್ರ ಹೇಳಿದ್ದಾರೆ.

ತುರ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅಡಕೆ, ಮಾವು ಕಾಳು ಮೆಣಸು, ಶುಂಠಿ ಬೆಳೆ ಹಾನಿಗೆ ಈ ಪರಿಹಾರ ಮತ್ತ ಬಿಡುಗಡೆಯಾಗಿದ್ದು ಕೇಂದ್ರ 12.5 ರಾಜ್ಯ ಸರಕಾರ 12.5 ಮತ್ತು ರೈತರು ಶೇಕಡ ಐದು ವಿಮೆ ಕಂತಿಗೆ ಹಣ ಜಮಾ ಮಾಡುತ್ತಾರೆ.. ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮತ್ತು ವಿಮೆ ಕಂಪನಿಯ ಒತ್ತಡಕ್ಕೆ ಒಳಗಾಗಿ ರೈತರು ವಿಮೆ ಹಣದಿಂದ ವಂಚನೆಗೊಳಗಾಗಿದ್ದಾರೆ ಎಂದರು.

ಜಿಲ್ಲೆಯಲ್ಲಿ ಅರ್ಧದಷ್ಟು ಮಾಪನ ಕೇಂದ್ರಗಳಲ್ಲಿ ಮಾಪನಗಳು ಹಾಳಾಗಿದ್ದು ಇದರಿಂದ ಮಳೆ ಹಾನಿಯ ಪ್ರಮಾಣದ ವ್ಯತ್ಯಾಸದಿಂದಾಗಿ ಜಿಲ್ಲೆಯ ರೈತರಿಗೆ 150 ಕೋಟಿಗೂ ಹೆಚ್ಚು ಹಣ ಇನ್ನೂ ಬರಬೇಕಾಗಿದೆ. ಸಂಬಂಧಪಟ್ಟ ತಹಸಿಲ್ದಾರ್‌ಮತ್ತು ಪಿಡಿಒಗಳು ಇದನ್ನು ಸರಿಪಡಿಸಬೇಕಿತ್ತು ಕೆಡಿಪಿ ಸಭೆಯಲ್ಲಿ ಈಗಾಗಲೇ ಈ ಸಮಸ್ಯೆಯನ್ನು ಮುಂದಿಟ್ಟು ಚರ್ಚೆ ಮಾಡಲಾಗಿದೆ. ಆದರೂ ಪ್ರಯತ್ನ ಆಗಲಿಲ್ಲ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ವಿಮೆ ಕಟ್ಟಿದ ರೈತರಿಗೆ ಬೆಳೆ ಹಾನಿಯ ಸಂಪೂರ್ಣ ಹಣ ಸಂದಾಯವಾಗದೆ ಪರಿತಪಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಐಎಸ್‌ಎಲ್ ಗೆ 10 ಸಾವಿರ ಕೋಟಿ ನೀಡಿ

ನಿನ್ನೆ ನಡೆದ ವಿಐಎಸ್‌ಎಲ್ ಸಭೆಗೆ ನನಗೆ ಆಹ್ವಾನವಿರಲಿಲ್ಲ. ಆದರೂ ನಾನು ಈ ಭಾಗದ ಪ್ರತಿನಿಧಿಯಾಗಿ ಕಾರ್ಮಿಕರ ಪರವಾಗಿ ಸಭೆಯಲ್ಲಿ ಭಾಗವಹಿಸಿದ್ದೆ. ನಾನು ತಾತ್ಕಾಲಿಕ ವ್ಯವಸ್ಥೆ ಬೇಡ ಕನಿಷ್ಠ 10 ಸಾವಿರ ಕೋಟಿ ನೀಡಿ ಶಾಶ್ವತ ವ್ಯವಸ್ಥೆಯನ್ನು ಮಾಡಬೇಕು ಎಂದು ಒತ್ತಾಯಿಸಿದ್ದೇನೆ ಎಂದು ಸಂಸದ ಬಿ.ವೈ ರಾಘವೇಂದ್ರ ಹೇಳಿದರು.

ಈ ಬಗ್ಗೆ ಅಪರ ಜಿಲ್ಲಾಧಿಕಾರಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳೊಂದಿಗೆ ಮತ್ತು ಸಾಗರ. ನಗರ ತೀರ್ಥಹಳ್ಳಿ ಭಾಗದ ರೈತರೊಂದಿಗೆ ಮಾತುಕತೆ ನಡೆಸಿದಾಗ ಈ ಸಮಸ್ಯೆ ಬೆಳಕಿಗೆ ಬಂತು. ಹಲವು ಪ್ರದೇಶಗಳ ಅಂಕಿ ಅಂಶಗಳಲ್ಲಿ ವ್ಯತ್ಯಾಸವಾಗಿದ್ದು ಬೆಳೆ ಹಾನಿ ವಿಮೆ ಹಣವನ್ನು ಪಡೆಯಲು ರೈತರಿಗೆ ನಷ್ಟವಾಗುತ್ತಿದೆ. ಜಿಲ್ಲಾಧಿಕಾರಿ ತಾಲೂಕು ವಾರು ಸಮಿತಿ ಮಾಡಿ ರೈತರಿಗೆ ನ್ಯಾಯ ಕೊಡಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್ಕೆ ಜಗದೀಶ್ ಮಾಜಿ ಜಿಲ್ಲಾಧ್ಯಕ್ಷ ಟಿಡಿ ಮೇಘರಾಜ್. ಪ್ರಮುಖರಾದ ಶಿವರಾಜ್. ಮಾಲತೇಶ್. ಮಲ್ಲಿಕಾರ್ಜುನ ಹಕ್ರೆ, ಬಳ್ಳಕೆರೆ ಸಂತೋಷ್.ಮಹೇಶ್. ರಾಜೇಶ್ ಕಾಮತ್ ರವಿ.ನವೀನ್. ಮೊದಲಾದವರಿದ್ದರು.

ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ

ಚಂದ್ರಗುತ್ತಿ: ಗ್ರಾಮೀಣ ಪ್ರದೇಶದ ಯುವಕರು ಕ್ರೀಡೆಗಳಲ್ಲಿ ಭಾಗವಹಿಸುವ ಮೂಲಕ ರಾಜ್ಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದು ಬೆನ್ನೂರು ಗ್ರಾಪಂ ಮಾಜಿ ಅಧ್ಯಕ್ಷ ಮಾರ್ಯಪ್ಪ ಹೇಳಿದರು. ಚಂದ್ರಗುತ್ತಿ ಸಮೀಪದ ಕೆಂಚಿಕೊಪ್ಪ ಗ್ರಾಮದಲ್ಲಿ ಶ್ರೀ ಬಸವೇಶ್ವರ ಗೆಳೆಯರ ಬಳಗದ ವತಿಯಿಂದ ಏರ್ಪಡಿಸಿದ 8 ನೇ ವರ್ಷದ ಗ್ರಾಮೀಣ ಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯ ಸಭಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಯುವಕರು ಸಹಬಾಳ್ವೆಯಿಂದ ಒಗ್ಗೂಡಿ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಕ್ರೀಡೆಯನ್ನು ಉಳಿಸಿ ಬೆಳೆಸುವಲ್ಲಿ ಮುಂದಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಕಾಂಗ್ರೆಸ್ ಮುಖಂಡ ಈ.ಶಂಕರ್‌ನಾಯ್ಕ್ ಕೆಂಚಿಕೊಪ್ಪ ಮಾತನಾಡಿ, ಕ್ರೀಡೆಯಲ್ಲಿ ಸೋಲು–ಗೆಲುವು ಮುಖ್ಯವಲ್ಲ, ಕ್ರೀಡೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ತೋರಿಸಬೇಕು ಎಂದರು. ಗ್ರಾಮದ ಹಿರಿಯ ಕೆರೆ ಸ್ವಾಮಿ ಗೌಡ , ಸಹಕಾರ ಸಂಘದ ಅಧ್ಯಕ್ಷ ಶಿವಾನಂದ ತಬಲಿ, ಬೋರ್ವೆಲ್ ಏಜೆನ್ಸಿ ಮಾಲೀಕರಾದ ಅಣ್ಣಪ್ಪ ಬಿ ನಾಯ್ಕ್ ಮಾತನಾಡಿದರು. ಕಾಂಗ್ರೆಸ್ ಮುಖಂಡರಾದ ಧರ್ಮಣ್ಣ ದ್ಯಾವಾಸ, ಈ ಶಂಕರ್‌ನಾಯ್ಕ್, ಚಂದ್ರಗುತ್ತಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ರಾಜು ಎಮ್.ನಾಯ್ಕ್ ದೇವಸ್ಥಾನದ ಸಮಿತಿ ಅಧ್ಯಕ್ಷ ಮಂಜಪ್ಪ ಎಸ್ ನಾಯ್ಕ್, ಪ್ರಮುಖರಾದ ಬಿ.ಅಣ್ಣಪ್ಪ ನಾಯ್ಕ್, ಗೋಪಾಲ್ ಕಲಗೋಡು, ವಿಶ್ವೇಶ್ವರ ಉಪಸ್ಥಿತರಿದ್ದರು.

ದೇಶಭಕ್ತಿ ಬಿತ್ತುವ ಶಾಲೆಗಳು ಬೆಳಗುತ್ತವೆ: ಚಾರುಕೀರ್ತಿ ಶ್ರೀ

ಸಾಣೂರಿನಲ್ಲಿ ರಾಜೇಶ್ವರಿ ನ್ಯಾಷನಲ್ ಸ್ಕೂಲ್ ನಲ್ಲಿ ಬಯಲು ರಂಗ ಮಂದಿರ ಉದ್ಘಾಟನೆ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ನೆರವೇರಿಸಿದರು.

ಮೂಡುಬಿದರೆ: ಹತ್ತು ಹಲವು ಜಾತಿ, ಭಾಷೆ, ಧರ್ಮದ ವೈವಿಧ್ಯತೆ ನಡುವೆ ನಾವೆಲ್ಲರೂ ಭಾರತೀಯರು ಅನ್ನುವ ಪ್ರಜ್ಞೆ ಮೂಡಿಸುವ ಶಿಕ್ಷಣ ಸಂಸ್ಥೆಗಳು ನಂದಾದೀಪದಂತೆ ಬೆಳಗುತ್ತವೆ ಎಂದು ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಪಂಡಿತಚಾರ್ಯ ವರ್ಯ ಸ್ವಾಮೀಜಿ ಹೇಳಿದರು

ಅವರು ಸಾಣೂರಿನಲ್ಲಿ ರಾಜೇಶ್ವರಿ ನ್ಯಾಷನಲ್ ಸ್ಕೂಲ್ ನಲ್ಲಿ ಬಯಲು ರಂಗ ಮಂದಿರ ಉದ್ಘಾಟನೆ ಮತ್ತು ವಿದ್ಯಾರ್ಥಿಗಳ ಸಾಮೂಹಿಕ ವಂದೇ ಮಾತರಂ ಗೀತ ಗಾಯನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಶ್ರವಣರ ಊರು ಸಾಣೂರಿನಲ್ಲಿ ರಾಜೇಶ್ವರಿ ದೇವಿಯ ಹೆಸರಿನಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಪ್ರಕೃತಿ ರಮಣೀಯ ಶ ಬಯಲು ರಂಗ ಮಂದಿರದಲ್ಲಿ ಮಕ್ಕಳ ಕಂಠದಲ್ಲಿ ವಂದೇ ಮಾತರಂ ಮೂಲಕ ಮನಸ್ಸಿನ ಜಡತ್ವ ದೂರೀಕರಣ ಆಗಿದೆ ಎಂದರು.

ಪಾಠ ಮತ್ತು ಪಠ್ಯೇತರ ಚಟುವಟಿಕೆಗಳು ಜೊತೆಗೆ ಆಧ್ಯಾತ್ಮದ ಕಥಾನಕಗಳು, ನೃತ್ಯ, ನಾಟ್ಯ, ಸಂಗೀತದ ಮೂಲಕ ಅಂತರಂಗ ಶಕ್ತಿಗಳ ಅರಿವು ಉಂಟಾಗುತ್ತದೆ. ರಾಜಸಿಕ, ತಾಮಸಿಕ ಗುಣಗಳಿಗಿಂತ ಸಾತ್ವಿಕತೆಯ ಶ್ರೇಷ್ಠ. ಶಾಂತರಸ ಅತ್ಯಂತ ಶ್ರೇಷ್ಠ.ಆತ್ಮನಿರ್ಭರ ಭಾರತ ರೂಪಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಸೇವಾ ರಂಗ, ವೈಜ್ಞಾನಿಕ ರಂಗದಲ್ಲಿ ಪ್ರಗತಿ, ಮಿಲಿಟರಿ ರಕ್ಷಣೆಯಿಂದ ಕಲೆಗಳಿಗೆ ಪೋಷಣೆ ಆಗುತ್ತದೆ. ವಿದ್ಯೆ, ಬುದ್ಧಿ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆ ಆಗುತ್ತದೆ ಎಂದರು.

ರಾಜೇಶ್ವರಿ ವಿದ್ಯಾ ಸಂಸ್ಥೆ ಅಧ್ಯಕ್ಷ ದೇವಿ ಪ್ರಸಾದ್ ಶೆಟ್ಟಿ ಮಾತನಾಡಿ, ಗ್ರಾಮದಲ್ಲಿ ದೇಶಭಕ್ತ ತರುಣ ಸಮುದಾಯ ನಿರ್ಮಾಣ ಮಾಡುವ ಬದ್ಧತೆ ಮತ್ತು ಯುವಕರಲ್ಲಿ ದಕ್ಷತೆ, ಕೌಶಲ್ಯ, ಸಮಾಜಮುಖಿ ಚಿಂತನೆ, ದೇಶಭಕ್ತಿ ಮೈಗೂಡಿಸುವ ಶಿಕ್ಷಣ ನೀಡುವ ಉದ್ದೇಶದಿಂದ ವಿದ್ಯಾ ಸಂಸ್ಥೆ ಪ್ರಾರಂಭ ಮಾಡಿದ್ದೇವೆ.ಮೊದಲ ವರ್ಷವೇ 1ನೇ ತರಗತಿಯಿಂದ ಪ್ರಥಮ ಪಿಯುಸಿ ವರೆಗೆ 419 ವಿದ್ಯಾರ್ಥಿಗಳು ಸೇರ್ಪಡೆ ಆಗಿದ್ದಾರೆ. ಕರ್ನಾಟಕದ ರಾಯಚೂರು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳ ವಿದ್ಯಾರ್ಥಿಗಳಿದ್ದಾರೆ ಎಂದರು.

ಯೋಗ, ಭಜನೆ, ಸಾಂಸ್ಕೃತಿಕ ಚಟುವಟಿಕೆ ತರಬೇತಿ, ಭರತನಾಟ್ಯ, ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ, ಕೊಳಲು, ಸ್ಯಾಕ್ಸೋಫೋನ್, ಕೀಬೋರ್ಡ್, ತಬಲ ಕಲಿಸಿಕೊಡಲಾಗುತ್ತದೆ ಎಂದರು.

ಅಧ್ಯಾಪಕ ಕೊಂಡಳ್ಳಿ ಪ್ರಭಾಕರ್ ಶೆಟ್ಟಿ ವಂದೇ ಮಾತರಂ ಕುರಿತು ಉಪನ್ಯಾಸ ನೀಡಿದರು.ಉದ್ಯಮಿ ಅಲಂಗಾರು ಶ್ರೀಪತಿ ಭಟ್, ಗ್ರಾಮ ಪಂಚಾಯತ್ ಅಧ್ಯಕ್ಷ ಯುವರಾಜ್ ಜೈನ್,ಶಿಕ್ಷಣ ಸಂಸ್ಥೆಯ ಟ್ರಸ್ಟಿ ಜಯರಾಮ್ ಶೆಟ್ಟಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಡಬ್ಲ್ಯುಪಿಎಲ್: ಆರ್‌ಸಿಬಿ ಮುಂಬೈ ಮೊದಲ ಪಂದ್ಯ

ಮುಂಬೈ: 4ನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಆಟಗಾರ್ತಿಯರ ಹರಾಜು ಪ್ರಕ್ರಿಯೆ ಮುಕ್ತಾಯ ಬೆನ್ನಲ್ಲೇ ಇದೀಗ ಪಂದ್ಯಾವಳಿಯ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ಜನವರಿ 9ರಂದು ನವಿ ಮುಂಬೈನ ಡಾ. ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ಇಂಡಿಯನ್ಸ್ ಮತ್ತು ಸ್ಮೃತಿ ಮಂಧಾನಾ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಸೆಣಸಾಟ ನಡೆಸಲಿದೆ. ಟೂರ್ನಿಯ ಮೊದಲ ಹಂತದ ಪಂದ್ಯಗಳು ಜನವರಿ 9ರಿಂದ 17ರ ವರೆಗೆ ನವಿ ಮುಂಬೈನಲ್ಲಿ ನಡೆಯಲಿದೆ. ಎರಡನೇ ಹಂತದ ಪಂದ್ಯಗಳು ಜನವರಿ 19ರಿಂದ ಫೆಬ್ರವರಿ 5ರ ವರೆಗೆ ಬರೋಡಾದಲ್ಲಿ ನಡೆಯಲಿದೆ. ಫೈನಲ್ ಕೂಡ ಬರೋಡಾದಲ್ಲಿ ನಿಗದಿಯಾಗಿದೆ. ಲೀಗ್ ಹಂತದಲ್ಲಿ 20 ಪಂದ್ಯಗಳು ನಡೆಯಲಿದ್ದು, ಫೆಬ್ರವರಿ 3ರಂದು ಎಲಿಮಿನೇಟರ್ ಮತ್ತು ಎರಡು ದಿನಗಳ ನಂತರ ಫೈನಲ್ ಪಂದ್ಯ ನಡೆಯಲಿದೆ. ಮೆಗಾ ಹರಾಜಿನಲ್ಲಿ, 194 ಭಾರತೀಯ ಮತ್ತು 83 ವಿದೇಶಿ ಆಟಗಾರರು ಸೇರಿದಂತೆ 277 ಆಟಗಾರರು ಲಭ್ಯವಿದ್ದರು.

ಅಭಿಷೇಕ್ ಅಬ್ಬರ: ಪಂಜಾಬ್‌ಗೆ ಜಯ

ಹೈದರಾಬಾದ್: ಸೈಯದ್ ಮುಸ್ತಾಕ್ ಅಲಿ ಟ್ರೋಫಿ ಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರದ ಪಂದ್ಯದಲ್ಲಿ ಬಿರುಸಿನ ಶತಕ ಗಳಿಸಿರುವ ಪಂಜಾಬ್ ತಂಡದ ನಾಯಕ



ಅಭಿಷೇಕ್ ಶರ್ಮಾ ಹಲವು ದಾಖಲೆಗಳನ್ನು ಬರೆದಿದ್ದಾರೆ. ಕೇವಲ 12 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ಅಭಿಷೇಕ್ 32 ಎಸೆತಗಳಲ್ಲಿ ಶತಕದ ಗಡಿಯನ್ನು ದಾಟಿದರು. ಅವರು ಒಟ್ಟಾರೆಯಾಗಿ 52 ಎಸೆತಗಳಲ್ಲಿ 148 ರನ್ ಗಳಿಸಿದರು. ಅವರ ಅಮೋಘ ಇನ್ನಿಂಗ್ಸ್‌ನಲ್ಲಿ 16 ಸಿಕ್ಸರ್ ಹಾಗೂ ಎಂಟು ಬೌಂಡರಿಗಳು ಸೇರಿದ್ದವು. ಮೊದಲು ಬ್ಯಾಟಿಂಗ್ ನಡೆಸಿದ ಪಂಜಾಬ್ ಐದು ವಿಕೆಟ್ ನಷ್ಟಕ್ಕೆ 310 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಗುರಿ ಬೆನ್ನಟ್ಟಿದ ಬಂಗಾಳ ನಾಯಕ ಅಭಿಮನ್ಯು ಈಶ್ವರನ್ (130 ರನ್, 66 ಎಸೆತ) ಶತಕದ ಹೊರತಾಗಿಯೂ ಒಂಬತ್ತು ವಿಕೆಟ್ ನಷ್ಟಕ್ಕೆ 198 ರನ್ ಗಳಿಸಲಷ್ಟೇ ಸಾಧ್ಯವಾಯಿತು, ಆ ಮೂಲಕ ಪಂಜಾಬ್ 112 ರನ್‌ಗಳ ಭರ್ಜರಿ ಜಯ ಗಳಿಸಿತು.

ವಿರಾಟ್ ಕೊಹ್ಲಿ ಅಬ್ಬರದ ಶತಕ | ರೋಹಿತ್ ಶರ್ಮಾ, ಕೆಎಲ್ ರಾಹುಲ್ ಅರ್ಧ ಶತಕ | ಸರಣಿಯಲ್ಲಿ 1-0 ಮುನ್ನಡೆ

ಹರಿಣ ಪಡೆಯನ್ನು ಬೇಟೆಯಾಡಿದ ಭಾರತ

ರಾಂಚಿ: ವಿರಾಟ್ ಕೊಹ್ಲಿ ಅವರ ಅಮೋಘ ಶತಕ (135), ರೋಹಿತ್ ಶರ್ಮಾ (57) ಮತ್ತು ನಾಯಕ ಕೆಎಲ್ ರಾಹುಲ್ (60) ಅವರ ಅರ್ಧ ಶತಕಗಳ ನೆರವಿನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಭಾನುವಾರ ಇಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ 17 ರನ್ ಅಂತರದ ಗೆಲುವು ದಾಖಲಿಸಿದೆ. ಈ ಮೂಲಕ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 1-0 ಅಂತರದ ಮುನ್ನಡೆ ಕಾಯ್ದುಕೊಂಡಿದೆ.

ಭಾರತ ಒಡ್ಡಿದ 350 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 49.2 ಓವರ್‌ಗಳಲ್ಲಿ 332 ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು.

ಒಂದು ಹಂತದಲ್ಲಿ ದಕ್ಷಿಣ ಆಫ್ರಿಕಾ ತಂಡವು 11ರನ್‌ಗೆ 3 ವಿಕೆಟ್ ಹಾಗೂ ಆ ಬಳಿಕ 130 ರನ್‌ಗೆ 5 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ಕೆಳ ಕ್ರಮಾಂಕದ ಬ್ಯಾಟರ್‌ಗಳು ದಿಟ್ಟ ಹೋರಾಟವನ್ನು ಪ್ರದರ್ಶಿಸುವುದರೊಂದಿಗೆ ಪಂದ್ಯವು ರೋಚಕ ಹಂತ ತಲುಪಿತು.

ಮ್ಯಾಥ್ಯೂ ಬ್ರಿಟ್ಜ್ 72, ಟೋನಿ ಡಿ ಜೋರ್ಜಿ 39, ಡವಾಲ್ಡ್ ಬ್ರೆವಿಸ್ 37, ಮಾರ್ಕೊ ಯಾನ್ಸೆನ್ 70 ಮತ್ತು ಕಾರ್ಬಿನ್ ಬಾಷ್ 67 ರನ್ ಗಳಿಸಿ ಭಾರತದ ಗೆಲುವನ್ನು ಕಠಿಣಗೊಳಿಸಿದರು. ಈ ಪೈಕಿ ಯಾನ್ಸೆನ್ ಕೇವಲ 39 ಎಸೆತಗಳಲ್ಲಿ 70 ರನ್ ಗಳಿಸಿ (3 ಸಿಕ್ಸರ್, 8 ಬೌಂಡರಿ) ಭಾರತೀಯ ಬೌಲರ್‌ಗಳನ್ನು ಕಾಡಿದರು. ಮತ್ತೊಂದೆಡೆ ಕಾರ್ಬಿನ್ 51 ಎಸೆತಗಳಲ್ಲಿ 67 ರನ್ (5 ಬೌಂಡರಿ, 4 ಸಿಕ್ಸರ್) ಗಳಿಸಿದರು.

ಭಾರತದ ಪರ ಕುಲ್ದೀಪ್ ಯಾದವ್ ನಾಲ್ಕು, ಹರ್ಷಿತ್ ರಾಣಾ ಮೂರು ಮತ್ತು ಅರ್ಷದೀಪ್ ಸಿಂಗ್ ಎರಡು ವಿಕೆಟ್ ಗಳಿಸಿದರು.

ಉತ್ತಮ ಮೊತ್ತ ದಾಖಲಿಸಿದ ಭಾರತ: ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತಕ್ಕೆ ಯಶಸ್ವಿ ಜೈಸ್ವಾಲ್ (18) ಬಿರುಸಿನ ಆರಂಭವೊದಗಿಸಿದರು, ಆದರೆ ಜೈಸ್ವಾಲ್ ಆಟ ಹೆಚ್ಚು ಹೊತ್ತು ಸಾಗಲಿಲ್ಲ. ಆ ಹಂತದಲ್ಲಿ ಜತೆಗೂಡಿದ ಅನುಭವಿ ಬ್ಯಾಟರ್‌ಗಳಾದ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಅಮೂಲ್ಯ ಶತಕದ ಜತೆಯಾಟದಲ್ಲಿ ಭಾಗಿಯಾಗುವ ಮೂಲಕ ಭಾರತ ತಂಡಕ್ಕೆ ಭದ್ರ ಅಡಿಪಾಯ ಹಾಕಿಕೊಟ್ಟರು.

ತಮ್ಮ ಎಂದಿನ ಶೈಲಿಯಲ್ಲಿ ಲೀಲಾಜಾಲವಾಗಿ ಬ್ಯಾಟ್ ಬೀಸಿದ ಈ ಜೋಡಿಯು ದಕ್ಷಿಣ ಆಫ್ರಿಕಾ ಬೌಲರ್‌ಗಳನ್ನು ಬಹಳ ಹೊತ್ತು ಕಾಡಿದರು, ಎರಡನೇ ವಿಕೆಟ್‌ಗೆ 136 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ರೋಹಿತ್ ಶರ್ಮಾ 51 ಎಸೆತಗಳಲ್ಲಿ 57 ರನ್ ಗಳಿಸಿ ಔಟ್ (5 ಬೌಂಡರಿ, 3 ಸಿಕ್ಸರ್) ಆದರು.

ಕೊಹ್ಲಿ ಅಬ್ಬರದ ಆಟ: ಮೈದಾನದ ಎಲ್ಲ ದಿಕ್ಕಿನತ್ತವೂ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗೈದ ವಿರಾಟ್ ಕೊಹ್ಲಿ, ಏಕದಿನದಲ್ಲಿ 52ನೇ ಶತಕದ ಸಾಧನೆ ಮಾಡಿದರು, ಅಲ್ಲದೆ ನಾಯಕ ಕೆ.ಎಲ್. ರಾಹುಲ್ ಜೊತೆ 76 ರನ್‌ಗಳ ಮಹತ್ವದ ಜೊತೆಯಾಟ ಕಟ್ಟಿದರು. ಅಂತಿಮವಾಗಿ ಕೊಹ್ಲಿ 120 ಎಸೆತಗಳಲ್ಲಿ 135 ರನ್ ಗಳಿಸಿ ಔಟ್ ಆದರು. ಕೊಹ್ಲಿ ಇನ್ನಿಂಗ್ಸ್‌ನಲ್ಲಿ 7 ಸಿಕ್ಸರ್ ಹಾಗೂ 11 ಬೌಂಡರಿಗಳು ಸೇರಿದ್ದವು.

ಈ ನಡುವೆ ಋತುರಾಜ್ ಗಾಯಕವಾಡ್ (8) ಹಾಗೂ ವಾಷಿಂಗ್ಟನ್ ಸುಂದರ್ (13) ವೈಫಲ್ಯ ಅನುಭವಿಸಿದರು. ಅತ್ತ ನಾಯಕನ ಆಟವಾಡಿದ ಕೆ.ಎಲ್. ರಾಹುಲ್, ಆಕರ್ಷಕ ಅರ್ಧಶತಕ ಗಳಿಸಿ ತಂಡವು ಬೃಹತ್ ಮೊತ್ತ ಪೇರಿಸಲು ನೆರವಾದರು. ರಾಹುಲ್ 56 ಎಸೆತಗಳಲ್ಲಿ 60 ರನ್ (2 ಬೌಂಡರಿ, 3 ಸಿಕ್ಸರ್) ಗಳಿಸಿದರು.

ರವೀಂದ್ರ ಜಡೇಜ ಅವರೊಂದಿಗೆ ಸೇರಿದ ರಾಹುಲ್ ಆರನೇ ವಿಕೆಟ್‌ಗೆ 65 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಜಡೇಜ 32 ರನ್‌ಗಳ ಉಪಯುಕ್ತ ಕಾಣಿಕೆ ನೀಡಿ ಭಾರತ ತಂಡ 349 ರನ್ ತಲುಪಲು ತಮ್ಮ ಕೊಡುಗೆ ನೀಡಿದರು.

ಪಂದ್ಯದಲ್ಲಿ ವಿರಾಟ್ ಪ್ರದರ್ಶನ

ಸಚಿನ್ ದಾಖಲೆ ಮುರಿದ ಕೊಹ್ಲಿ: ವಿರಾಟ್ ಕೊಹ್ಲಿ ಅವರು ರಾಂಚಿ ಮೈದಾನದಲ್ಲಿ ಕೇವಲ 5 ಇನಿಂಗ್ಸ್ ನಲ್ಲಿ 3 ಶತಕಗಳನ್ನು ಸಿಡಿಸುವ ಮೂಲಕ, ತವರಿನ ಒಂದೇ ಮೈದಾನದಲ್ಲಿ ಅತೀ ಹೆಚ್ಚು ಶತಕಗಳನ್ನು ಬಾರಿಸಿದ ದಾಖಲೆ ಬರೆದರು. ಸಚಿನ್ ತೆಂಡೂಲ್ಕರ್ ವಡೋದರ ಮೈದಾನದಲ್ಲಿ 7 ಇನ್ನಿಂಗ್ಸ್‌ನಲ್ಲಿ 3 ಶತಕ ಬಾರಿಸಿದ್ದರೆ, ವಿರಾಟ್ ಕೊಹ್ಲಿ ವಿಶಾಖಪಟ್ಟಣದಲ್ಲಿ 7 ಇನ್ನಿಂಗ್ಸ್‌ನಲ್ಲಿ 3 ಶತಕ ಹಾಗೂ ಪುಣೆಯಲ್ಲಿ 8 ಇನಿಂಗ್ಸ್ ನಲ್ಲಿ 3 ಶತಕ ಬಾರಿಸಿದ್ದಾರೆ. ಭಾನುವಾರದ 52ನೇ ಏಕದಿನ ಶತಕದೊಂದಿಗೆ, ಕೊಹ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನ ಒಂದೇ ಸ್ವರೂಪದಲ್ಲಿ ಅತಿ ಹೆಚ್ಚು ಶತಕಗಳನ್ನು ಗಳಿಸಿದ ಸಚಿನ್ ಅವರ ವಿಶ್ವದಾಖಲೆಯನ್ನು ಮುರಿದರು. ಇದಕ್ಕೂ ಮೊದಲು, ಅವರು 51 ಶತಕಗಳೊಂದಿಗೆ ಮಾಸ್ಟರ್ ಬ್ಲಾಸ್ಟರ್‌ನೊಂದಿಗೆ ಜಂಟಿ ದಾಖಲೆ ಹೊಂದಿದ್ದರು, ಸಚಿನ್ ಟೆಸ್ಟ್ ಸ್ವರೂಪದಲ್ಲಿ 51 ಶತಕಗಳನ್ನು ಗಳಿಸಿದ್ದರು.

ದ.ಆಫ್ರಿಕಾ ವಿರುದ್ಧ ಅತೀ ಹೆಚ್ಚು ಶತಕ: ಪ್ರವಾಸಿ ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ ಶತಕ ಸಿಡಿಸುವ ಮೂಲಕ ಹರಿಣಗಳ ವಿರುದ್ಧ ಏಕದಿನ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ಶತಕ ಸಿಡಿಸಿದ ಆಟಗಾರ ಎನ್ನುವ ಖ್ಯಾತಿಗೆ ಕೊಹ್ಲಿ ಪಾತ್ರರಾಗಿದ್ದಾರೆ. ವಿರಾಟ್ ಕೊಹ್ಲಿ ಅವರು ದಕ್ಷಿಣ ಆಫ್ರಿಕಾ ವಿರುದ್ಧ ಒಟ್ಟು 6 ಶತಕ ಸಿಡಿಸಿದ್ದಾರೆ. ಸಚಿನ್ ತೆಂಡೂಲ್ಕರ್ ಹಾಗೂ ಡೇವಿಡ್ ವಾರ್ನರ್ 5 ಶತಕಗಳನ್ನು ಬಾರಿಸಿದ್ದರು.

ಅಭಿಮಾನಿಯ ಅಭಿಮಾನ: ಪಂದ್ಯದಲ್ಲಿ ಶತಕ ಪೂರ್ತಿಗೊಳ್ಳುತ್ತಿದ್ದಂತೆ ಅಭಿಮಾನಿಯೊಬ್ಬ ಭದ್ರತಾ

ಸಿಬ್ಬಂದಿಯ ಕಣ್ತಪ್ಪಿಸಿ ಕೊಹ್ಲಿ ಕಾಲಿಗೆ ಎರಗಿದ್ದಾನೆ. ಪಾದ ಮುಟ್ಟಿ ನಮಸ್ಕರಿಸಿದ ಅಭಿಮಾನಿಯನ್ನು ಕೊಹ್ಲಿ ಮೇಲೆಳುವಂತೆ ಮನವಿ ಮಾಡಿದ್ದಾರೆ. ಈ ವೇಳೆ ಸಾಷ್ಟಾಂಗ ನಮಸ್ಕಾರದಲ್ಲಿದ್ದ ಅಭಿಮಾನಿ ಮೇಲಕ್ಕೆದ್ದು ಕೊಹ್ಲಿಗೆ ಶುಭಾಶಯ ತಿಳಿಸಿದ್ದಾನೆ. ಈ ವೇಳೆ ಭದ್ರತಾ ಸಿಬ್ಬಂದಿಗಳು ಅಭಿಮಾನಿಯನ್ನು ಮೈದಾನದಿಂದ ಹೊರಕ್ಕೆ ಕರೆದುಕೊಂಡು ಹೋಗಿದ್ದು, ಆ ವಿಡಿಯೊ ವೈರಲ್ ಆಗಿದೆ.

ಪಾಂಟಿಂಗ್ ವಿಶ್ವದಾಖಲೆ ಪತನ: ವಿರಾಟ್ ಕೊಹ್ಲಿ ಈ ಪಂದ್ಯದಲ್ಲಿ 7 ಸಿಕ್ಸರ್ ಬಾರಿಸುವ ಮೂಲಕ 3ನೇ ಸ್ಥಾನದಲ್ಲಿ ಬ್ಯಾಟಿಂಗ್ ಮಾಡಿ ಅತ್ಯಧಿಕ ಸಿಕ್ಸರ್ ಬಾರಿಸಿದ ವಿಶ್ವದ ಮೊದಲ ಬ್ಯಾಟರ್ ಎಂಬ ದಾಖಲೆ ನಿರ್ಮಿಸಿ ರಿಕಿ ಪಾಂಟಿಂಗ್ ಅವರ ದಾಖಲೆಯನ್ನು ಮುರಿದರು. ಕೊಹ್ಲಿ ಈಗ 223 ಸಿಕ್ಸರ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ, ಪಾಂಟಿಂಗ್ (217) ಎರಡನೇ ಸ್ಥಾನದಲ್ಲಿದ್ದಾರೆ. ಕುಮಾರ ಸಂಗಕ್ಕಾರ(131), ಕೇನ್ ವಿಲಿಯಮ್ಸನ್(121) ಮತ್ತು ಜಾಕ್ವೆಸ್ ಕಾಲಿಸ್(106) ನಂತರದ ಸ್ಥಾನದಲ್ಲಿದ್ದಾರೆ.

ಕೆಕೆಆರ್‌ಗೆ ಪವರ್ ಕೋಚ್ ಆಗಿ ಸೇರಲು ಒಲವು

ಐಪಿಎಲ್: ಆ್ಯಂಡ್ರೆ ರಸೆಲ್ ನಿವೃತ್ತಿ

ಕೋಲ್ಕತಾ: ಐಪಿಎಲ್ 2026ರ ಹರಾಜಿಗೆ ಮುನ್ನ ಅಚ್ಚರಿ ಎಂಬಂತೆ ಆ್ಯಂಡ್ರೆ ರಸೆಲ್ ಅವರು ಲೀಗ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಇತ್ತೀಚೆಗೆ ಕೋಲ್ಕತ್ತಾ ನೈಟ್ ರೈಡರ್ಸ್ ಬಿಡುಗಡೆ ಮಾಡಿದ 37 ವರ್ಷದ ವೆಸ್ಟ್ ಇಂಡೀಸ್ ಆಲ್‌ರೌಂಡರ್, ಇನ್ಸ್ಟಾಗ್ರಾಮ್

ಪೋಸ್ಟ್ ಮೂಲಕ ತಾನು ಬೇರೆ ಫ್ರಾಂಚೈಸಿಯೊಂದಿಗೆ ಸಹಿ ಹಾಕುವುದಿಲ್ಲ, ಬದಲಾಗಿ ಮುಂದಿನ ಋತುವಿನಲ್ಲಿ ಕೆಕೆಆರ್‌ನ ಬೆಂಬಲ ಸಿಬ್ಬಂದಿಯೊಂದಿಗೆ ಪವರ್ ಕೋಚ್ ಆಗಿ ಸೇರುತ್ತೇನೆ ಎಂದು ಬಹಿರಂಗಪಡಿಸಿದ್ದಾರೆ.

'ನಮಸ್ಕಾರ, ಕೆಕೆಆರ್ ಅಭಿಮಾನಿಗಳೇ. ನಾನು ಐಪಿಎಲ್‌ನಿಂದ ನಿವೃತ್ತಿ ಹೊಂದುವ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ನಿಮಗೆ ತಿಳಿಸಲು ಬಯಸುತ್ತಿದ್ದೇನೆ' ಎಂದು ವಿಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ನಾನು ಇನ್ನೂ ಪ್ರಪಂಚದಾದ್ಯಂತದ ವಿವಿಧ ಲೀಗ್‌ಗಳಲ್ಲಿ ಮತ್ತು ಇತರ ಎಲ್ಲಾ ಕೆಕೆಆರ್ ಫ್ರಾಂಚೈಸಿಗಳಿಗಾಗಿ ಸಕ್ರಿಯವಾಗಿ ಆಡುತ್ತೇನೆ. ನನಗೆ ಐಪಿಎಲ್‌ನಲ್ಲಿ ಕೆಲವು ಅದ್ಭುತ ನೆನಪುಗಳು ಇದ್ದವು. ಸಿಕ್ಸರ್‌ಗಳನ್ನು ಹೊಡೆಯುವುದು, ಪಂದ್ಯಗಳನ್ನು ಗೆದ್ದಾಗ ಸಂಭ್ರಮಿಸುವುದು ನನ್ನ ಪಾಲಿನ ಸುಮಧುರ ನೆನಪುಗಳು' ಎಂದು ರಸೆಲ್ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ. ಕೆಕೆಆರ್ ಸಿಇಒ ವೆಂಕಿ ಮೈಸೂರು ಮತ್ತು ಸಹ ಮಾಲೀಕ ಶಾರುಖ್‌ಖಾನ್ ಅವರೊಂದಿಗೆ ಮಾತನಾಡಿದ್ದೇನೆ. ಫ್ರಾಂಚೈಸಿಯ ಬಗ್ಗೆ ಇನ್ನೂ ಆಳವಾದ ಗೌರವ ಮತ್ತು ಪ್ರೀತಿಯನ್ನು ನಾನು ಹೊಂದಿದ್ದೇನೆ. ಆದ್ದರಿಂದ ಪವರ್ ಕೋಚ್ ಆಗಿ ಕೋಚಿಂಗ್ ಪಾತ್ರದಲ್ಲಿ ಮುಂದುವರಿಯುತ್ತೇನೆ ಎಂದು ರಸೆಲ್ ಹೇಳಿದ್ದಾರೆ.

ಸೈಯದ್ ಮುಸ್ತಾಕ್ ಆಲಿ ಟ್ರೋಫಿ ಕ್ರಿಕೆಟ್

ಕರ್ನಾಟಕಕ್ಕೆ ಆಘಾತಕಾರಿ ಸೋಲು

ಅಹಮದಾಬಾದ್: ಸೈಯದ್ ಮುಸ್ತಾಕ್ ಅಲಿ ಟ್ರೋಫಿ ಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಕರ್ನಾಟಕ ವಿರುದ್ಧ ರಾಜಸ್ಥಾನವು ಒಂದು ರನ್ ಅಂತರದ ರೋಚಕ ಗೆಲುವು ದಾಖಲಿಸಿದೆ.

ಇಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನವು ಐದು ವಿಕೆಟ್ ನಷ್ಟಕ್ಕೆ 201 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ರಾಜಸ್ಥಾನ ತಂಡದ ಪರ ದೀಪಕ್ ಹೂಡಾ (43), ಕಾರ್ತಿಕ್ ಶರ್ಮಾ (46), ಲೊಮೊರ್ (48 ಅಜೇಯ) ಹಾಗೂ ಭರತ್ ಶರ್ಮಾ(38) ಉಪಯುಕ್ತ ಇನ್ನಿಂಗ್ಸ್ ಕಟ್ಟಿದರು.

ಗುರಿ ಬೆನ್ನಟ್ಟಿದ ಕರ್ನಾಟಕ 20 ಓವರ್‌ಗಳಲ್ಲಿ ಎಂಟು ವಿಕೆಟ್ ನಷ್ಟಕ್ಕೆ 200 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಅಂತಿಮ ಓವರ್‌ನಲ್ಲಿ ಕರ್ನಾಟಕದ ಗೆಲುವಿಗೆ 16 ರನ್ ಬೇಕಿತ್ತು, ಆದರೆ ತಂಡದ ಬ್ಯಾಟರ್‌ಗಳು 14 ರನ್ ಗಳಿಸುವಲ್ಲಿ ಮಾತ್ರ ಯಶಸ್ವಿಯಾದರು. ಕರುಣ್ ನಾಯರ್ 32 ಎಸೆತಗಳಲ್ಲಿ 51 ರನ್ (6 ಬೌಂಡರಿ, 1 ಸಿಕ್ಸರ್)

ಗಳಿಸಿದರು. ಸ್ಮರಣ್ ರವಿಚಂದ್ರನ್ 31 ಎಸೆತಗಳಲ್ಲಿ 48 ರನ್ ಗಳಿಸಿ (2 ಸಿಕ್ಸರ್, 2 ಬೌಂಡರಿ) ಔಟಾಗದೆ ಉಳಿದರು. ಕೊನೆಯಲ್ಲಿ ವಿದ್ಯಾಧರ ಪಾಟೀಲ ಕೇವಲ ಎಂಟು ಎಸೆತಗಳಲ್ಲಿ ಮೂರು ಸಿಕ್ಸರ್ ಹಾಗೂ ಎರಡು ಬೌಂಡರಿಗಳಿಂದ 27 ರನ್ ಗಳಿಸಿದರೂ ತಂಡವನ್ನು ಗೆಲುವಿನತ್ತ ದಾಟಿಸಲಾಗಲಿಲ್ಲ. ವೈಶಾಖ ವಿಜಯಕುಮಾರ್ ಮೂರು ಎಸೆತಗಳಲ್ಲಿ ಒಂಬತ್ತು ರನ್ ಗಳಿಸಿ ಅಜೇಯರಾಗುಳಿದರು.

ಈ ಸೋಲಿನೊಂದಿಗೆ ಎಲೈಟ್-ಡಿ ಗುಂಪಿನಲ್ಲಿ ಆಡಿರುವ ಎರಡು ಪಂದ್ಯಗಳಲ್ಲಿ ತಲಾ ಒಂದು ಗೆಲುವು ಹಾಗೂ ಸೋಲಿನೊಂದಿಗೆ ನಾಲ್ಕು ಅಂಕಗಳೊಂದಿಗೆ ಕರ್ನಾಟಕ ಐದನೇ ಸ್ಥಾನದಲ್ಲಿದೆ.

ಟೂರ್ನಿಯಲ್ಲಿ ಅತಿಥೇಯರಿಗೆ 2ನೇ ಗೆಲುವು

ಜೂ.ಹಾಕಿ: ಭಾರತಕ್ಕೆ ಭರ್ಜರಿ ಜಯ

ಚೆನ್ನೈ: ಗೋಲುಗಳ ಮಳೆಗರೆದ ಭಾರತ ತಂಡ, ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ದುರ್ಬಲ ಒಮಾನ್ ತಂಡವನ್ನು 17-0 ಗೋಲುಗಳಿಂದ ಸದೆಬಡಿದು ಸತತ ಎರಡನೇ ಗೆಲುವನ್ನು ಟೂರ್ನಿಯಲ್ಲಿ ದಾಖಲಿಸಿದೆ

ಬಿ ಗುಂಪಿನ ಮೊದಲ ಪಂದ್ಯದಲ್ಲಿ ಚಿಲಿ ತಂಡವನ್ನು 7-0 ಗೋಲುಗಳಿಂದ ಸೋಲಿಸಿ ಶುಭಾರಂಭ ಮಾಡಿದ್ದ ಅತಿಥೇಯ ತಂಡವು, ಎರಡನೇ ಪಂದ್ಯದಲ್ಲೂ ಸಂಪೂರ್ಣ ಪ್ರಾಬಲ್ಯ ಮೆರೆದು ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಭದ್ರತೆಯ ಕಾರಣಗಳಿಂದಾಗಿ ಪಾಕಿಸ್ತಾನ ಹಿಂದೆ ಟೂರ್ನಿಯಿಂದ ಹಿಂದೆ ಸರಿದ ಪರಿಣಾಮವಾಗಿ ಈ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದ ಒಮಾನ್ ತಂಡವು ಭಾರತಕ್ಕೆ ಪ್ರತಿರೋಧ ಒಡ್ಡಲಿಲ್ಲ.

ಭಾರತ ಪರ ದಿಲ್‌ರಾಜ್ ಸಿಂಗ್ ನಾಲ್ಕು ಗೋಲು ಗಳಿಸಿದರೆ, ಮನ್‌ಮೀತ್ ಸಿಂಗ್, ಅರ್ಷದೀಪ್ ಸಿಂಗ್ ತಲಾ ಮೂರು ಗೋಲು ಗಳಿಸಿದರು.

ಅಜೀತ್ ಯಾದವ್, ಗುರ್ಜೋತ್ ಸಿಂಗ್ ತಲಾ ಎರಡು ಗೋಲು ಹೊಡೆದರು. ಅನ್ಮೋಲ್ ಎಕ್ಕಾ ಮತ್ತು ಶಾರದಾನಂದ ತಿವಾರಿ ಒಂದೊಂದು ಗೋಲಿನ ಕಾಣಿಕೆ ನೀಡಿದರು.

ಪಂದ್ಯದ ವಿರಾಮದ ವೇಳೆ ಭಾರತವು 5-0 ಗೋಲುಗಳಿಂದ ಮುಂದಿತ್ತು. ಮೂರನೇ ಕ್ವಾರ್ಟರ್ ಒಂದರಲ್ಲೇ ಎಂಟು ಗೋಲುಗಳನ್ನು ಗಳಿಸಿದ ಭಾರತದ ಭಾರೀ ಮೇಲುಗೈ ಸಾಧಿಸಿತು.

ಭಾರತ ತಂಡವು ಮಂಗಳವಾರ ನಡೆಯುವ ಗುಂಪಿನ ಕೊನೆಯ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ ಆಡಲಿದೆ.

ಭಗ್ನ ಪ್ರೇಮಿಯಾದ ಝೈದ್

ಬನಾರಸ್ ಮೂಲಕ ಭರವಸೆ ಮೂಡಿಸಿದ ನಟ ಝೈದ್ ಖಾನ್, ಕಲ್ಟ್ ಚಿತ್ರದಲ್ಲಿ ನಟಿಸಿದ್ದು ರಗಡ್ ಲುಕ್‌ನಲ್ಲಿ ತೆರೆಗೆ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಅನಿಲ್ ಕುಮಾರ್ ನಿರ್ದೇಶನದ ಕಲ್ಟ್ ಈಗಾಗಲೇ ಚಿತ್ರೀಕರಣ ಮುಗಿಸಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ರಚಿತಾ ರಾಮ್ ಹಾಗೂ ಮಲೈಕಾ ವಸುಪಾಲ್ ನಾಯಕಿಯರಾಗಿ ನಟಿಸಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಾಗಿದೆ. ಸಿನಿಮಾದ ಎರಡು

ಹಾಡುಗಳು ಬಿಡುಗಡೆಯಾಗಿದ್ದು, ಸಿನಿಪ್ರಿಯರ ಮನಸೂರೆಗೊಂಡಿವೆ. ಇದೀಗ ಮೂರನೇ ಹಾಡನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ನಿನ್ನಲ್ಲೇ ನಾನಿರೇ... ಎಂಬ ಪ್ಯಾಥೋ ಸಾಂಗ್ ಇದಾಗಿದ್ದು, ಅನಿಲ್ ಕುಮಾರ್ ಹಾಗೂ ನಿಶಾನ್ ರೈ ಸಾಹಿತ್ಯ ರಚಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಈ ಹಾಡಿಗೆ ನಿಶಾನ್ ರೈ ದನಿಯಾಗಿದ್ದಾರೆ. ಈ ಗೀತೆಯಲ್ಲಿ ಝೈದ್ ಖಾನ್ ವಿವಿಧ ರೂಪದಲ್ಲಿ ಕಾಣಿಸಿಕೊಂಡಿದ್ದಾರೆ. ಲವ್ ಬ್ರೇಕಪ್ ಆದವರಿಗೆ ಈ ಹಾಡು ಬಹುಬೇಗ ಇಷ್ಟವಾಗಲಿದೆ.

ಈಗಾಗಲೇ ಬಿಡುಗಡೆ ಆಗಿರುವ ಎರಡು ಹಾಡುಗಳು ಸಖತ್ ಹಿಟ್ ಆಗಿವೆ. ನಿರ್ದೇಶಕ ಅನಿಲ್ ಕುಮಾರ್ ಸಾಹಿತ್ಯ ಬರೆದಿರುವ ಅಯ್ಯೋ ಶಿವನೇ... ಹಾಡಿಗೆ ದ್ವಾಪರ ಖ್ಯಾತಿಯ ಜಸ್ಕರಣ್ ಸಿಂಗ್ ಹಾಗೂ ಪೃಥ್ವಿ ಭಟ್ ದನಿಗೂಡಿಸಿದ್ದರು. ಈ ಹಾಡು ಮಿಲಿಯನ್‌ಗಟ್ಟಲೇ ವೀಕ್ಷಣೆ ಕಂಡಿದೆ. ಇನ್ನು ಬ್ಲಡಿ ಲವ್..ಎಂಬ ಹಾಡಿಗೂ ಸಂಗೀತ ಪ್ರಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಈ ಚಿತ್ರದ ಹಾಡುಗಳನ್ನು ಆನಂದ್ ಆಡಿಯೊ ಬೃಹತ್ ಮೊತ್ತ ನೀಡಿ ತನ್ನದಾಗಿಸಿಕೊಂಡಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಕಲ್ಟ್ ಜನವರಿ 23 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಲೋಕಿ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ.

ಕಾಂತಾರ 3ನಲ್ಲಿ ರಣವೀರ್

ಗೋವಾದಲ್ಲಿ ಐವತ್ತಾರನೇ ಭಾರತೀಯ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುತ್ತಿದೆ. ಈ ಚಿತ್ರೋತ್ಸವದಲ್ಲಿ ಹಲವು ಭಾಷೆಯ ಸಿನಿಮಾಗಳು ಪ್ರದರ್ಶನಗೊಂಡಿದ್ದು, ಚಿತ್ರರಂಗದ ಎಲ್ಲಾ ಭಾಷೆಯ ದಿಗ್ಗಜ ಕಲಾವಿದರು ಭಾಗವಹಿಸಿದ್ದಾರೆ. ಕನ್ನಡದ ಸ್ಟಾರ್ ನಟ ರಿಷಬ್ ಶೆಟ್ಟಿ ಕೂಡ ಈ ಈ ಚಿತ್ರೋತ್ಸವದಲ್ಲಿ ಭಾಗಿಯಾಗಿದ್ದರು. ಕಾಂತಾರ ಚಿತ್ರ ಈಗಾಗಲೇ ವಿಶ್ವಾದ್ಯಂತ ಪ್ರದರ್ಶನ ಕಂಡಿದ್ದು ಎಲ್ಲರೂ ಸಿನಿಮಾವನ್ನು ಕಣ್ತುಂಬಿಕೊಂಡು ಮೆಚ್ಚಕೊಂಡಾಡಿ ದ್ದಾರೆ. ಈಗ ಬಾಲಿವುಡ್ ನಟ ರಣವೀರ್ ಸಿಂಗ್, ಕಾಂತಾರ ಸಿನಿಮಾವನ್ನು ಹಾಡಿ ಹೊಗಳಿದ್ದಾರೆ. ನಾನು ಕಾಂತಾರ ಸಿನಿಮಾವನ್ನು ಥಿಯೇಟರ್‌ನಲ್ಲಿ ನೋಡಿದೆ. ತುಂಬಾ ಅದ್ಭುತವಾಗಿದೆ. ಅದರಲ್ಲಿಯೂ ರಿಷಬ್ ಅವರ ನಟನೆಯಂತೂ ಅಮೋಘ. ಸಿನಿಮಾದ ಕ್ಲೈಮ್ಯಾಕ್ಸ್ ಹೊಸತಾಗಿದೆ. ಕ್ಲೈಮ್ಯಾಕ್ಸ್‌ನಲ್ಲಿ ಬರುವ ಚಾಮುಂಡಿ ದೈವದ ಸನ್ನಿವೇಶವಂತೂ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜತೆಗೆ ಕಾಂತಾರ ಚಾಪ್ಟರ್ 3 ಯಾವಾಗ ಬರಲಿದೆ. ಚಿತ್ರದಲ್ಲಿ ನಾನು ಅಭಿನಯಿಸಬೇಕು ಎಂಬ ಅಭಿಲಾಷೆ ವ್ಯಕ್ತಪಡಿಸಿದ್ದಾರೆ.

ರಣವೀರ್ ಯಡವಟ್ಟು

ರಣವೀರ್ ಸಿಂಗ್ ಕೆಲವೊಮ್ಮೆ ಮಾತನಾಡುವ ಭರದಲ್ಲಿ ಯಡವಟ್ಟು ಮಾಡಿಕೊಂಡು ಬಿಡುತ್ತಾರೆ. ಹಾಗೆಯೇ ಗೋವಾ ಫಿಲಂ ಫೆಸ್ಟಿವಲ್‌ನಲ್ಲಿ ಮಾತನಾಡುವ ಭರದಲ್ಲಿ ಟೀಕೆಗೂ ಗುರಿಯಾಗಿದ್ದಾರೆ. ಕಾಂತಾರದಲ್ಲಿ ಕರಾವಳಿ ಭಾಗದ ಆರಾಧ್ಯ ದೈವದ ಕಥೆಯಿದೆ. ಆದರೆ ರಣವೀರ್ ಆ ದೈವವನ್ನ, ರಿಷಭ್ ಮುಂದೆಯೇ ದೆವ್ವವೆಂದು ಕರೆದಿದ್ದಾರೆ. ಅಷ್ಟೇ ಅಲ್ಲದೆ ದೈವದ ಬಗ್ಗೆ ಅವಮಾನಕರ ರೀತಿಯಲ್ಲಿ ಮಾತನಾಡಿದ್ದಾರೆ. ಈ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು ನೆಟ್ಟಿಗರು ರಣವೀರ್ ವಿರುದ್ಧ ಆಕ್ರೋಶ ವ್ಯಕ್ತಡಿಸಿದ್ದಾರೆ. ರಣವೀರ್ ಹೀಗೆ ಅಣುಕಿಸುವಾಗ ಅಲ್ಲೇ ಇದ್ದ ರಿಷಬ್ ಕೈ ಸನ್ನೆ ಮಾಡಿ ಈ ರೀತಿ ಮಾಡಬೇಡಿ ಎಂದು, ದೈವದ ಬಗ್ಗೆ ಭಕ್ತಿ ಇರಬೇಕು ಎಂದು ರಣವೀರ್ ಸಿಂಗ್‌ಗೆ ತಿಳಿ ಹೇಳಿದ್ದಾರೆ.

ವಾರಣಾಸಿಗೆ ಸಂಕಷ್ಟ

ಬಾಹುಬಲಿ, ಆರ್‌ಆರ್‌ಆರ್ ಖ್ಯಾತಿಯ ನಿರ್ದೇಶಕ ರಾಜಮೌಳಿ ಈಗ ನಟ ಮಹೇಶ್ ಬಾಬು ಅಭಿನಯದ ಸಿನಿಮಾವನ್ನು ನಿರ್ದೇಶಿಸುತ್ತಿದ್ದಾರೆ. ಜಕ್ಕಣ್ಣ ಹಾಗೂ ಮಹೇಶ್ ಬಾಬು ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಸಿನಿಮಾದ ಶೀರ್ಷಿಕೆ ಏನಿರಬಹುದು ಎಂಬ ಕುತೂಹಲ ಎಲ್ಲರಲ್ಲಿಯೂ ಇತ್ತು. ಅಂತು ಜಕ್ಕಣ್ಣ, ಹೈದರಾಬಾದ್‌ನಲ್ಲಿ ಅದ್ದೂರಿ ಕಾರ್ಯಕ್ರಮ ಆಯೋಜಿಸಿ ತಮ್ಮ ಸಿನಿಮಾದ ಟೈಟಲ್ ರಿವಿಲ್ ಮಾಡಿದರು. ಅಂತೆಯೇ ಈ ಹೈವೋಲ್ಟೇಜ್ ಸಿನಿಮಾ ವಾರಣಾಸಿ ಶೀರ್ಷಿಕೆಯಲ್ಲಿ ಮೂಡಿಬರುತ್ತಿದೆ. ವಾರಣಾಸಿ ಟೈಟಲ್ ಪವರ್ ಫುಲ್ ಆಗಿದೆ.

ಆದರೆ ಈಗ ವಾರಣಾಸಿಗೆ ಸಂಕಷ್ಟ ಎದುರಾಗಿದೆ. ವಾರಣಾಸಿ ಸಿನಿಮಾದ ಶೀರ್ಷಿಕೆಯನ್ನು ತೆಲುಗಿನ ರಾಮ ಬ್ರಹ್ಮ ಹನುಮ ಕ್ರಿಯೇಷನ್ಸ್ ಹೆಸರಿನ ನಿರ್ಮಾಣ ಸಂಸ್ಥೆ ನೊಂದಣಿ ಮಾಡಿಸಿದೆ. 2023 ರಿಂದಲೂ ಈ ಟೈಟಲ್ ರಾಮ ಬ್ರಹ್ಮ ಹನುಮ ಕ್ರಿಯೇಷನ್ಸ್ ಬಳಿಯೇ ಇದೆ. ಜೂನ್ 24, 2025ರಂದು ಈ ಶೀರ್ಷಿಕೆಯನ್ನು ಮತ್ತೆ ಒಂದು ವರ್ಷಗಳ ಕಾಲಕ್ಕೆ ನೊಂದಣಿ ಮಾಡಿಸಲಾಗಿದೆ. ಹಾಗಾಗಿ ಈಗ ರಾಜಮೌಳಿ ಸಿನಿಮಾದ ಶೀರ್ಷಿಕೆಯನ್ನು ಕೊಂಚ ಬದಲಾವಣೆ ಮಾಡಿದ್ದಾರೆ. ಅದರಂತೆ ರಾಜಮೌಳಿ ವಾರಣಾಸಿ ಎಂಬ ಶೀರ್ಷಿಕೆ ಇರಲಿದೆ. ವಾರಣಾಸಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತೆಲುಗಿನ ಜತೆಗೆ ಕನ್ನಡ, ತಮಿಳು, ಹಿಂದಿ ಹೀಗೆ ಹಲವು ಭಾಷೆಗಳಲ್ಲಿ ನಿರ್ಮಾಣವಾಗಲಿದೆ. ತೆಲುಗಿನಲ್ಲಿ ಮಾತ್ರ ರಾಜಮೌಳಿ ವಾರಣಾಸಿ ಎಂದು ಸಿನಿಮಾದ ಶೀರ್ಷಿಕೆ ಇರಲಿದ್ದು, ಉಳಿದ ಭಾಷೆಗಳಲ್ಲಿ ವಾರಣಾಸಿ ಎಂದೇ ಟೈಟಲ್ ಇರಲಿದೆ.



ವಾರಣಾಸಿ ಪೌರಾಣಿಕ ಕಥೆಯ ಜತೆಗೆ ಐತಿಹಾಸಿಕ ಸ್ಟೋರಿಯನ್ನು ಒಳಗೊಂಡಿದೆ. ಈ ಸಿನಿಮಾದ ಫಸ್ಟ್‌ಲುಕ್ ಪೋಸ್ಟರ್ ಕೂಡ ಬಿಡುಗಡೆಯಾಗಿದ್ದು, ನಂದಿ ಏರಿಬರುತ್ತಿರುವ ಮಹೇಶ್ ಬಾಬು ಗೆಟಪ್ ಬಲು ಅದ್ದೂರಿಯಾಗಿದೆ. ಬಾಲಿವುಡ್‌ನಲ್ಲಿ ಪ್ರಸಿದ್ಧಿ ಪಡೆದು ಹಾಲಿವುಡ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದ ನಟಿ ಪ್ರಿಯಾಂಕಾ ಚೋಪ್ರ ಈ ಚಿತ್ರಕ್ಕಾಗಿ ಮತ್ತೆ ಭಾರತೀಯ ಚಿತ್ರರಂಗಕ್ಕೆ ಮರಳಿ ಬಂದಿದ್ದಾರೆ.

ಡೆವಿಲ್ ಚೇರ್ ದರ್ಶನ

ದರ್ಶನ್ ನಟನೆಯ ದಿ ಡೆವಿಲ್ ಡಿಸೆಂಬರ್ 11 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಅದಕ್ಕೂ ಮುನ್ನ ವಿವಿಧ ರೀತಿಯ ಪ್ರಚಾರ ಕಾರ್ಯದಲ್ಲಿ ತೊಡಗಿರುವ ಚಿತ್ರತಂಡ, ಮಾಲ್‌ಗಳಲ್ಲಿ ಬೃಹತ್ ಎಲ್.ಇಡಿ ಪರದೆಗಳನ್ನು ಅಳವಡಿಸಿದ್ದು, ಡೆವಿಲ್ ಸಿನಿಮಾದ ಝಲಕ್ ದರ್ಶನ ಮಾಡಿಸಿತ್ತು. ಇದೀಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಸಿನಿಮಾದಲ್ಲಿ ನಟ ದರ್ಶನ್ ಬಳಸಿರುವ ಚೇರ್ ಅನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಗಿದೆ. ವಿಶೇಷವಾಗಿ ವಿನ್ಯಾಸ ಮಾಡಲಾಗಿರುವ ಈ ಚೇರ್‌ನ ದರ್ಶನ ಮಾತ್ರವಲ್ಲ ಇದರ ಮೇಲೆ ಕುಳಿತು ಫೋಟೋ ಕ್ಲಿಕ್ಕಿಸಿಕೊಳ್ಳಬಹುದಾಗಿದೆ, ವಿಡಿಯೊ ಕೂಡ ಮಾಡಬಹುದಾಗಿದೆ. ಇದನ್ನು ಬೆಂಗಳೂರಿನ ಓರಾಯನ್ ಮಾಲ್‌ನಲ್ಲಿ ಇಡಲಾಗಿದ್ದು, ಅಲ್ಲಿ ತೆಗೆದ ಫೋಟೋ, ವಿಡಿಯೊಗಳನ್ನು ಚಿತ್ರತಂಡಕ್ಕೂ ಟ್ಯಾಗ್ ಮಾಡಬಹುದಾಗಿದೆ.

ಇದಲ್ಲದೇ ಈಗಾಗಲೇ ಹಲವು ಚಿತ್ರಮಂದಿರಗಳಲ್ಲಿ ಡೆವಿಲ್ ಚಿತ್ರದ ಕಟೌಟ್ ನಿರ್ಮಿಸಲಾಗಿದೆ. ದರ್ಶನ್ ಅಭಿಮಾನಿಗಳು ಈ ಸಿನಿಮಾವನ್ನು ದೊಡ್ಡ ಪ್ರಮಾಣದಲ್ಲಿ ಯಶಸ್ವಿಗೊಳಿಸಲು ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಡೆವಿಲ್‌ನಲ್ಲಿ ಆ್ಯಕ್ಷನ್ ಜತೆಗೆ ಥ್ರಿಲ್ಲರ್ ಸ್ಟೋರಿಯೂ ಬೆರತಿದ್ದು ದರ್ಶನ್ ಹೊಸ ಗೆಟಪ್‌ನಲ್ಲಿ ಕಂಗೊಳಿಸಿದ್ದಾರೆ. ರಚನಾ ರೈ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ತುಳಸಿ, ಅಚ್ಯುತ್ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸ ಪ್ರಭು, ಶೋಭರಾಜ್ ಈ ಚಿತ್ರದ ತಾರಾಗಣದಲ್ಲಿದ್ದಾರೆ. ಪೋಸ್ಟರ್ ಮೂಲಕವೇ ಮನಗೆದ್ದಿದ್ದ ಡೆವಿಲ್ ಹಾಡಿನ ಮೂಲಕವೂ ಮನಸೆಳೆದಿದೆ. ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದು, ಶ್ರೀ ಜೈ ಮಾತಾ ಕಂಬೈನ್ಸ್ ಲಾಂಛನದಲ್ಲಿ ಜೆ.ಜಯಮ್ಮ ಹಾಗೂ ಸರೆಗಮ ಜಂಟಿಯಾಗಿ ನಿರ್ಮಿಸಿದ್ದಾರೆ. ಚಿತ್ರರಂಗ ಹಲವು ನಟನ ನಟಿಯರು ಡೆವಿಲ್ ಚಿತ್ರಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಡೆವಿಲ್ ದೊಡ್ಡ ಮಟ್ಟದಲ್ಲಿ ಸದ್ದು ಮಾಡಲಿದೆ ಎಂಬ ನಿರೀಕ್ಷೆ ಇದೆ.